9th Standard Kannada Medium Political

by Karnataka Patyapustaka Sangha

Table of Contents

ರಾಜ್ಯಶಾಸ್ತ್ರ ಪಠ್ಯಪುಸ್ತಕ

ಮುನ್ನುಡಿ

ಅಧ್ಯಕ್ಷರ ದಿಟ ನುಡಿ

ಪಠ್ಯಪುಸ್ತಕ ರಚನಾ ಸಮಿತಿ

ಪರಿವಿಡಿ

ಅಧ್ಯಾಯ-1 ಪ್ಲೇಟೋ (Plato)

ಅಧ್ಯಾಯ- 2 ಅರಿಸ್ಟಾಟಲ್ (Aristotle) (ಕ್ರಿ. ಪೂ. 384- 322)

ಅಧ್ಯಾಯ- 3 ಮಹಾತ್ಮಗಾಂಧಿ

ಅಧ್ಯಾಯ- 4 ಡಾ. ಬಾಬಾ ಸಾಹೇಬ್ ಬಿ. ಆರ್. ಅಂಬೇಡ್ಕರ್

4.2 ಕೃತಿ ಪರಿಚಯ:

ಅಧ್ಯಾಯ- 5 ಸರ್ಕಾರ (Government)

ಅಧ್ಯಾಯ- 6 ಶಾಸಕಾಂಗ (Legislature)

ಅಧ್ಯಾಯ-7 ಕಾರ್ಯಾಂಗ (Executive)

ಅಧ್ಯಾಯ- 8 ನ್ಯಾಯಾಂಗ (Judiciary)

ಅಧ್ಯಾಯ-9 ರಾಜಕೀಯ ಪಕ್ಷಗಳು (Political Parties)

ಅಧ್ಯಾಯ-10 ಚುನಾವಣೆ (Election)

10.5 ಭಾರತದ ಚುನಾವಣಾ ಪ್ರಕ್ರಿಯೆ:

ಕರ್ನಾಟಕ ಸರ್ಕಾರ

ರಾಜ್ಯಶಾಸ್ತ್ರ ಪಠ್ಯಪುಸ್ತಕ

ರಾಜಕೀಯ ಚಿಂತಕರು ಮತ್ತು ರಾಜಕೀಯ ಸಂಸ್ಥೆಗಳು

ಒಂಬತ್ತನೆಯ ತರಗತಿ– 2016

ವಿಶೇಷ ಚೇತನ ವಿದ್ಯಾರ್ಥಿಗಳಿಗಾಗಿ

2016

ಕರ್ನಾಟಕ ಪಠ್ಯಪುಸ್ತಕ ಸಂಘ (ರಿ)

100 ಅಡಿ ವರ್ತುಲ ರಸ್ತೆ, ಬನಶಂಕರಿ 3 ನೇ ಹಂತ,

ಬೆಂಗಳೂರು- 560 085.

ಮಿತ್ರ ಜ್ಯೋತಿ ಡಿಜಿಟಲ್ ಲೈಬ್ರರಿ

ಮಿತ್ರ ಜ್ಯೋತಿ

ಸಿ. ಎ. ಸೈಟ್ ನಂ. ಪಿ- 22, 18 ನೇ ಅಡ್ಡರಸ್ತೆ, 31 ನೇ ಮುಖ್ಯರಸ್ತೆ,

ಸೆಕ್ಟರ್-1, ನಿಫ್ಟ್‌ನ ಹಿಂಭಾಗ, ಹೆಚ್. ಎಸ್. ಆರ್. ಲೇಔಟ್,

ಬೆಂಗಳೂರು- 560102

+91 ಕಂಟ್ರಿ ಕೋಡ್: 80 ಸಿಟಿ ಕೋಡ್

ದೂರವಾಣಿ ಸಂಖ್ಯೆ: 22587623/ 22587625

ಈ-ಮೇಲ್: mj.tblibrary@gmail.com
ವೆಬ್ ಸೈಟ್: www.mitrajyothi.org

ಪ್ರತಿಕರಣ ಹಕ್ಕು ತಿದ್ದುಪಡಿ ಪ್ರಕಟಣೆ:

ಸುಲಭವಾಗಿ ಲಭ್ಯವಾಗುವ ಈ ಪುಸ್ತಕ/ ಡೈಸಿ ಧ್ವನಿಮುದ್ರಣವನ್ನು, ಸಾಮಾನ್ಯ ಮುದ್ರಣ ಪ್ರತಿಯನ್ನು ಓದಲಾಗದ ದೃಷ್ಟಿವಿಶೇಷಚೇತನರಿಗಾಗಿ ಹಾಗೂ ಮುದ್ರಣ ಪ್ರತಿಯನ್ನು ಓದಲು ಅಸಮರ್ಥರಾದವರಿಗಾಗಿ ಮಿತ್ರಜ್ಯೋತಿ ಸಂಸ್ಥೆಯಿಂದ ವಿಶೇಷವಾಗಿ ತಯಾರಿಸಲಾಗಿದೆ. ಮಿತ್ರಜ್ಯೋತಿಯ ವಿಳಾಸ: ಸಿ.ಎ. ಸೈಟ್ ನಂ. ಪಿ 22, 18 ನೇ ಅಡ್ಡರಸ್ತೆ, 31 ನೇ ಮುಖ್ಯರಸ್ತೆ, ಸೆಕ್ಟರ್ 1, ನಿಫ್ಟ್ ನ ಹಿಂಭಾಗ, ಹೆಚ್.ಎಸ್.ಆರ್. ಲೇಔಟ್, ಬೆಂಗಳೂರು – 560 102. ದೂರವಾಣಿ ಸಂಖ್ಯೆ – 22587623/ 22587625 (ಭಾರತದ ಕೋಡ್: +91, ಬೆಂಗಳೂರಿನ ಕೋಡ್: 080). ಈ-ಮೇಲ್ ವಿಳಾಸ: mj.tblibrary@gmail.com; ವೆಬ್ಸೈಟ್: www.mitrajyothi.org

ಮುನ್ನುಡಿ

ಪ್ರೌಢಶಾಲೆಯಲ್ಲಿ ಅಭ್ಯಾಸ ಮಾಡುತ್ತಿರುವ ವಿಶೇಷ ಚೇತನ ವಿದ್ಯಾರ್ಥಿಗಳಿಗೆ ಈ ಪಠ್ಯಪುಸ್ತಕವನ್ನು ಸಿದ್ಧಪಡಿಸಲಾಗಿದೆ. ವಿಜ್ಞಾನ ಮತ್ತು ಗಣಿತ ವಿಷಯಗಳಿಗೆ ಪರ್ಯಾಯವಾಗಿ ವಿದ್ಯಾರ್ಥಿಗಳು ಇಚ್ಛಿಸಿದಲ್ಲಿ ರಾಜ್ಯಶಾಸ್ತ್ರ, ಸಮಾಜಶಾಸ್ತ್ರ ಮತ್ತು ಅರ್ಥಶಾಸ್ತ್ರ- ಈ ಮೂರು ವಿಷಯಗಳಲ್ಲಿ ಎರಡು ವಿಷಯಗಳನ್ನು ಅಧ್ಯಯನಕ್ಕೆ ಆಯ್ಕೆಮಾಡಿಕೊಳ್ಳುವ ಅವಕಾಶವನ್ನು ನೀಡಲಾಗಿದೆ. ಇವುಗಳಲ್ಲಿ ರಾಜ್ಯಶಾಸ್ತ್ರ ಪಠ್ಯವಿಷಯವು ಒಂದಾಗಿದೆ. 2015 ನೇ ಸಾಲಿನಲ್ಲಿ ಸಿದ್ಧಪಡಿಸಿದ ಹತ್ತನೇ ತರಗತಿಯ ಪಠ್ಯಪುಸ್ತಕವು 'ನಮ್ಮ ಭಾರತದ ಸಂವಿಧಾನ' ಎಂಬ ಶೀರ್ಷಿಕೆಯಡಿಯಲ್ಲಿ ಸಂವಿಧಾನದ ವಿವಿಧ ಮಜಲುಗಳನ್ನು ವಿದ್ಯಾರ್ಥಿಗಳು ಅರ್ಥೈಸಿಕೊಳ್ಳಲು ಪಠ್ಯಪುಸ್ತಕವು ನೆರವಾಗಿದೆ ಹಾಗೂ ಎಂಟನೇ ತರಗತಿಯಲ್ಲಿ 'ರಾಜ್ಯಶಾಸ್ತ್ರದ ಮೂಲ ಪರಿಕಲ್ಪನೆಗಳು' ಎಂಬ ಶೀರ್ಷಿಕೆಯಡಿಯಲ್ಲಿ ಪರಿಚಯಿಸಲಾಗಿದೆ. ಈಗ 2016 ನೇ ಸಾಲಿನ ಒಂಬತ್ತನೇ ತರಗತಿಯ ಪಠ್ಯಪುಸ್ತಕವು 'ರಾಜಕೀಯ ಚಿಂತಕರು ಮತ್ತು ರಾಜಕೀಯ ಸಂಸ್ಥೆಗಳು' ಎಂಬ ಶೀರ್ಷಿಕೆಯಡಿಯಲ್ಲಿ ಪ್ರಕಟವಾಗುತ್ತಿದೆ. ಇದು 2005 ರ ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟಿನಡಿಯಲ್ಲಿ ಹಾಗೂ ಪಠ್ಯವಸ್ತುವಿಗೆ ಅನುಗುಣವಾಗಿ ರಚನೆಯಾಗಿದೆ. ಈ ಪಠ್ಯದಲ್ಲಿರುವ ಅಧ್ಯಾಯಗಳು ವಿದ್ಯಾರ್ಥಿಗಳಲ್ಲಿ ರಾಜಕೀಯ ಚಿಂತಕರ ಹಾಗೂ ರಾಜಕೀಯ ಸಂಸ್ಥೆಗಳ ಪರಿಕಲ್ಪನೆಗಳನ್ನು ಅರ್ಥಮಾಡಿಕೊಳ್ಳಲು ನೆರವಾಗಲಿವೆ.

ಹತ್ತು ಅಧ್ಯಾಯಗಳನ್ನೊಳಗೊಂಡ ಈ ಪಠ್ಯಪುಸ್ತಕದಲ್ಲಿ ವಿಷಯಮಂಡನೆಯನ್ನು ಸಂಕ್ಷಿಪ್ತವಾಗಿ, ಸರಳವಾಗಿ, ನಿರೂಪಿಸಲಾಗಿದೆ. ಹಂತಹಂತವಾಗಿ ವಿದ್ಯಾರ್ಥಿಗಳ ಸ್ವಯಂ ಕಲಿಕೆಗೆ ಉತ್ತೇಜನ ನೀಡುವಂತೆ ಮತ್ತು ಅವರಲ್ಲಿ ಸ್ವಯಂ ಚಿಂತನೆ ಬೆಳೆಸಲು ಪ್ರೇರಕವಾಗುವಂತೆ ಪಠ್ಯಪುಸ್ತಕವನ್ನು ರಚಿಸಲಾಗಿದೆ. ಪ್ರತಿ ಅಧ್ಯಾಯದ ಕೊನೆಯಲ್ಲಿ ನೀಡಿರುವ ಅಭ್ಯಾಸಗಳು ವಿದ್ಯಾರ್ಥಿಗಳಲ್ಲಿ ಚರ್ಚೆ ಮತ್ತು ವಿಚಾರ ವಿನಿಮಯದಂತಹ ಚಟುವಟಿಕೆಗಳಲ್ಲಿ ಭಾಗವಹಿಸುವ ಅವಕಾಶವನ್ನು ಒದಗಿಸುತ್ತವೆ.

ಈ ಪಠ್ಯಪುಸ್ತಕವನ್ನು ಸಿದ್ಧಪಡಿಸುವಲ್ಲಿ ಸಹಕರಿಸಿದ ಪಠ್ಯಪುಸ್ತಕ ರಚನಾ ಸಮಿತಿಯ ಅಧ್ಯಕ್ಷರಿಗೆ, ಸದಸ್ಯರಿಗೆ, ಪರಿಶೀಲಕರಿಗೆ, ಪಠ್ಯಪುಸ್ತಕಗಳನ್ನು ಸುಂದರವಾಗಿ ಮುದ್ರಿಸಿದ ಮುದ್ರಕರಿಗೆ ಹಾಗೂ ಈ ಕಾರ್ಯದಲ್ಲಿ ಸಹಕರಿಸಿದ ಸಮಸ್ತರಿಗೂ ಕರ್ನಾಟಕ ಪಠ್ಯಪುಸ್ತಕ ಸಂಘದ ಪರವಾಗಿ ಕೃತಜ್ಞತೆಗಳನ್ನು ಸಲ್ಲಿಸುತ್ತೇವೆ. ವಿದ್ಯಾರ್ಥಿಗಳು ಪಠ್ಯಪುಸ್ತಕದ ಮೂಲಕ ಪ್ರೇರಣೆ ಪಡೆದು, ಸಾಮಾಜಿಕ ಪರಿಸರದ ಗುಣಾತ್ಮಕ ಮೌಲ್ಯಗಳನ್ನು ರೂಢಿಸಿಕೊಂಡು ಉತ್ತಮ ಪ್ರಜೆಗಳಾಗಿ ರೂಪುಗೊಳ್ಳಲೆಂದು ಕರ್ನಾಟಕ ಪಠ್ಯಪುಸ್ತಕ ಸಂಘವು ಆಶಿಸುತ್ತದೆ.

ಡಾ. ಬರಗೂರು ರಾಮಚಂದ್ರಪ್ಪ, ಅಧ್ಯಕ್ಷರು, ರಾಜ್ಯ ಪಠ್ಯಪುಸ್ತಕ ಪರಿಷ್ಕರಣ ಸಮಿತಿಗಳು, ಕರ್ನಾಟಕ ಪಠ್ಯಪುಸ್ತಕ ಸಂಘ, ಬೆಂಗಳೂರು.

ನಾಗೇಂದ್ರ ಕುಮಾರ್,ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಪಠ್ಯಪುಸ್ತಕ ಸಂಘ (ರಿ) ಬೆಂಗಳೂರು.

ಅಧ್ಯಕ್ಷರ ದಿಟ ನುಡಿ

ಅಂಧ ಮಕ್ಕಳು ಮತ್ತು ಕಲಿಕಾ ನ್ಯೂನತೆಯುಳ್ಳ ಮಕ್ಕಳು ಸಹ ಜೀವ ವೈವಿಧ್ಯತೆ ಮತ್ತು ಸಂಸ್ಕೃತಿಯ ಭಾಗವಾಗಿದ್ದಾರೆ. ಅವರನ್ನು ಆತ್ಮವಿಶ್ವಾಸಿಗರನ್ನಾಗಿ ಮತ್ತು ಸ್ವಾವಲಂಬಿಗಳನ್ನಾಗಿಸುವ ಶಕ್ತಿ ಶಿಕ್ಷಣಕ್ಕಿದೆ. ವಿಶೇಷ ಶಿಕ್ಷಣದಿಂದಲೇ ಲೂಯಿ ಬ್ರೈಲ್ ಮತ್ತು ಹೆಲೆನ್ ಕೆಲ್ಲರ್ ರಂತಹ ದೃಷ್ಟಿ ವಿಶ್ವಾಸಿಗರು ಸಹ ಮನುಕುಲದ ನಿರ್ಮಾತೃಗಳಾದ ಜ್ವಲಂತ ಉದಾಹರಣೆಗಳಿವೆ. ದೃಷ್ಟಿ ರಹಿತರ ವ್ಯಕ್ತಿ ಘನತೆಯನ್ನು ಎತ್ತಿ ಹಿಡಿಯುವ ದೃಷ್ಟಿಯಿಂದ ಅಂಧರೆನ್ನುವ ಬದಲು ದೃಷ್ಟಿವಿಶ್ವಾಸಿಗರೆಂದು ಹಾಗೂ ಕಲಿಕಾ ನ್ಯೂನತೆಯುಳ್ಳ ಮಕ್ಕಳ ಘನತೆಯನ್ನು ಎತ್ತಿ ಹಿಡಿದು ಅವರಲ್ಲಿಯೂ ಆತ್ಮ ವಿಶ್ವಾಸವನ್ನು ತುಂಬಲು ಅವರನ್ನು 'ಕಲಿಕಾಸಕ್ತರು' ಎಂದು ಸಂಭೋಧಿಸುವುದು ಸೂಕ್ತ. ಕರ್ನಾಟಕದಲ್ಲಿ ವಿಶೇಷ ಶಿಕ್ಷಣಕ್ಕೆ ನೂರಕ್ಕೂ ಅಧಿಕ ವರ್ಷಗಳ ಇತಿಹಾಸವಿದೆ. ವಿಶೇಷ ಶಿಕ್ಷಣದಿಂದ ಲಾಭ ಪಡೆದ ಅನೇಕರು ಸ್ವಯಂ ಪ್ರತಿಭೆ ಸಾಮರ್ಥ್ಯಗಳಿಂದ ಸಂಪದ್ಭರಿತ ವ್ಯಕ್ತಿಗಳಾಗಿ ಸಮಾಜಕ್ಕೆ ಪ್ರಯೋಜನಕಾರಿಯಾಗಿದ್ದಾರೆ. ವಿವಿಧ ಕ್ಷೇತ್ರಗಳಲ್ಲುಂಟಾದ ಮುನ್ನಡೆಯಿಂದಾಗಿ ಸಮಾಜ ವಿಜ್ಞಾನಗಳಲ್ಲಿಯೂ ಅಭೂತಪೂರ್ವ ಬದಲಾವಣೆಗಳುಂಟಾಗಿವೆ. ಕಾಲದೇಶಗಳ ಅಗತ್ಯತೆ ಮತ್ತು ಚಿಂತನೆಗಳಿಗೆ ಅನುಗುಣವಾಗಿ ಬದಲಾಗುವ ವಿಷಯ ಜ್ಞಾನವನ್ನು ನೀಡುವುದೇ ಶಿಕ್ಷಣದ ಪರಮೋಚ್ಚ ಗುರಿ.

ಇದನ್ನರಿತ ಸಮುದಾಯದೊಳಗಿನ ಹಾಗೂ ಹೊರಗಿನ ಹಿತೈಷಿಗಳು ನೂತನ ಪಠ್ಯವಸ್ತುವಿನ ರಚನೆಗಾಗಿ ಆಗ್ರಹಿಸಿದ್ದು ಸಮಯೋಚಿತವಾದುದಾಗಿದೆ. ಕರ್ನಾಟಕ ಶಿಕ್ಷಣ ವ್ಯವಸ್ಥೆಯ ಪ್ರಜ್ಞಾಚಕ್ಷುಗಳಂತಿರುವ ಡಿ. ಎಸ್. ಇ. ಆರ್. ಟಿ. ಮತ್ತು ಕರ್ನಾಟಕ ಪಠ್ಯಪುಸ್ತಕ ಸಂಘಗಳು ಆಗ್ರಹ ಪೂರ್ವಕ ಬೇಡಿಕೆಗೆ ಸಕಾರಾತ್ಮವಾಗಿ ಸ್ಪಂದಿಸುತ್ತಿವೆ. ದೃಷ್ಟಿವಿಶ್ವಾಸಿಗರ ಮತ್ತು ಕಲಿಕಾಸಕ್ತರ ಶೈಕ್ಷಣಿಕ ಸಂವರ್ಧನೆಯ ಹಕ್ಕಿಗೂ ಪುಷ್ಟಿ ನೀಡುತ್ತಿವೆ.

ರಾಜ್ಯ ಮತ್ತು ಸರಕಾರಗಳಿಗೆ ಸಂಬಂಧಿಸಿದ ಚಿಂತನೆಗಳು, ಚಟುವಟಿಕೆಗಳು, ವ್ಯವಹಾರಗಳು ಮತ್ತು ವಿವಾದಾಂಶಗಳ ವಿಶಿಷ್ಠ ಹಾಗೂ ಗತಿಶೀಲ ಅಧ್ಯಯನವೆ ರಾಜ್ಯಶಾಸ್ತ್ರವಾಗಿದೆ. ಇದರ ಜ್ಞಾನವು ಈ ವಿಶೇಷ ಮಕ್ಕಳಿಗೆ ಅತ್ಯಗತ್ಯವಾಗಿದೆ. ದೃಷ್ಟಿವಿಶ್ವಾಸಿಗರು ಮತ್ತು ಕಲಿಕಾಸಕ್ತ ಮಕ್ಕಳೂ ಸಹ ಸ್ವತಂತ್ರವಾಗಿ ವಿಚಾರ ಮಾಡಲು ಜೀವನ ಮೌಲ್ಯವನ್ನು ಅಳವಡಿಸಿಕೊಳ್ಳಲು ಮತ್ತು ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ತಯಾರಾಗುವಂತೆ ಪ್ರೇರಿಪಿಸಲು ನೂತನ ಪಠ್ಯವಸ್ತುವಿನ ರಚನೆ ಪೂರ್ಣಗೊಂಡಿದೆ. ವಿದ್ಯಾರ್ಥಿಗಳು 8 ನೇ ತರಗತಿಯಲ್ಲಿ ರಾಜ್ಯಶಾಸ್ತ್ರದ ಮೂಲ ಪರಿಕಲ್ಪನೆಗಳನ್ನು, 9 ನೇ ತರಗತಿಯಲ್ಲಿ ರಾಜಕೀಯ ಚಿಂತಕರು ಮತ್ತು ರಾಜಕೀಯ ಸಂಸ್ಥೆಗಳನ್ನು ಮತ್ತು 10 ನೇ ತರಗತಿಯಲ್ಲಿ ನಮ್ಮ ಭಾರತದ ಸಂವಿಧಾನವನ್ನು ಅಭ್ಯಾಸ ಮಾಡಬೇಕಾಗುತ್ತದೆ. ಇವರ ಉಜ್ವಲ ಭವಿಷ್ಯದ ಹಿತದೃಷ್ಟಿಯಿಂದ 2015-16 ನೇ ಶೈಕ್ಷಣಿಕ ವರ್ಷದಿಂದಲೇ 10 ನೇ ತರಗತಿಗೆ ನಮ್ಮ ಭಾರತದ ಸಂವಿಧಾನವನ್ನು ಅಭ್ಯಾಸ ಮಾಡಲು ಪರಿಚಯಿಸಿ ಜಾರಿಗೊಳಿಸಲಾಗಿದೆ. 2016-17 ನೇ ಸಾಲಿನಿಂದ 9 ನೇ ತರಗತಿಗೆ 'ರಾಜಕೀಯ ಚಿಂತಕರು ಮತ್ತು ರಾಜಕೀಯ ಸಂಸ್ಥೆಗಳು' ಎಂಬ

ಶೀರ್ಷಿಕೆಯಡಿಯಲ್ಲಿ ರಚಿತಗೊಂಡ ಪಠ್ಯಪುಸ್ತಕವನ್ನು ಪರಿಚಯಿಸಿ ಜಾರಿಗೊಳಿಸಲಾಗುತ್ತಿದೆ. ಪಾಶ್ಚಾತ್ಯ ಪ್ರಾಚೀನ ಗ್ರೀಕ್‌ನ ರಾಜಕೀಯ ಚಿಂತಕರಾದ ಪ್ಲೇಟೋ, ಅರಿಸ್ಟಾಟಲ್ ಮತ್ತು ಭಾರತೀಯ ಶ್ರೇಷ್ಠ ರಾಜಕೀಯ ಚಿಂತಕರುಗಳಾದ ರಾಷ್ಟ್ರಪಿತ ಮಹಾತ್ಮ ಗಾಂಧೀಜಿ ಮತ್ತು ಭಾರತದ 'ಸ್ಥಾಪಕ ಪಿತಾಮಹ' ಮತ್ತು ಸಂವಿಧಾನ ಶಿಲ್ಪಿಯೆಂದೇ ಸುಖ್ಯಾತರಾದ ಭಾರತರತ್ನ ಬಿ. ಆರ್. ಅಂಬೇಡ್ಕರ್ ರವರ ಜೀವನ, ಕೃತಿಗಳು ಮತ್ತು ರಾಜಕೀಯ ಚಿಂತನೆಗಳನ್ನು ವಿದ್ಯಾರ್ಥಿಗಳು ಅಭ್ಯಾಸ ಮಾಡಬೇಕಾಗುತ್ತದೆ. ಈ ಮೇರು ಚಿಂತಕರ ರಾಜಕೀಯ ಚಿಂತನೆಗಳು ವಿದ್ಯಾರ್ಥಿಗಳಲ್ಲಿ ವಿಷಯದ ಕುರಿತಾದ ಚಿಕಿತ್ಸಕ ಒಳನೋಟಗಳನ್ನು ಪಡೆಯಲು ನೆರವಾಗುತ್ತವೆಂಬುದು ನಮ್ಮ ನಂಬಿಕೆಯಾಗಿದೆ. ಅದರಂತೆಯೇ ಸರ್ಕಾರ, ಶಾಸಕಾಂಗ, ಕಾರ್ಯಾಂಗ, ನ್ಯಾಯಾಂಗ, ರಾಜಕೀಯ ಪಕ್ಷಗಳು ಮತ್ತು ಚುನಾವಣೆಯಂತಹ ರಾಜಕೀಯ ಸಂಸ್ಥೆಗಳ ಬಗೆಗೆ ಶಿಕ್ಷಕರು ತಮ್ಮ ಪಾಠ ಪ್ರವಚನಗಳ ಮೂಲಕ ವಿದ್ಯಾರ್ಥಿಗಳಲ್ಲಿ ಪೂರ್ಣ ತಿಳುವಳಿಕೆಯನ್ನು ಮೂಡಿಸಬೇಕಿದೆ. ಅನೇಕ ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಮಾಹಿತಿ ಪ್ರಧಾನ ಉತ್ತರಗಳನ್ನು ಬಯಸುವ ಪ್ರಶ್ನೆಗಳಿಗಿಂತಲೂ ರಾಜಕೀಯ ಚಿಂತಕರು ಮತ್ತು ರಾಜಕೀಯ ಸಂಸ್ಥೆಗಳನ್ನು ಕೇಂದ್ರೀಕರಿಸಿ ಉತ್ತರಗಳನ್ನು ಅಪೇಕ್ಷಿಸುವ ಪ್ರಶ್ನೆಗಳನ್ನು ಕೇಳಲಾಗುತ್ತಿದೆ. ರಾಜಕೀಯ ಚಿಂತಕರು ಮತ್ತು ರಾಜಕೀಯ ಸಂಸ್ಥೆಗಳ ಅಧ್ಯಯನವು ಸಹ ರಾಜ್ಯಶಾಸ್ತ್ರದ ಸವಿಸ್ತಾರ ಮತ್ತು ಸಮಗ್ರ ಅಧ್ಯಯನಕ್ಕೆ ವಿಶಿಷ್ಟ ದಾರ್ಶನಿಕ ಅಡಿಪಾಯ ಮತ್ತು ದಿಕ್ಸೂಚಿನೊದಗಿಸುವ ವಿಚಾರವಾಗಿದೆ. ಅಂತರ್ಗತ ವಿಧಾನ (Integrated Approach), ರಚನಾತ್ಮಕ ವಿಧಾನ (Constructive Approach) ಮತ್ತು ಸುರುಳಿಯಾಕಾರದ (Spiral Approach) ವಿಧಾನಗಳನ್ನು ಅನುಸರಿಸಿ ಪಠ್ಯಪುಸ್ತಕವನ್ನು ರಚಿಸಲಾಗಿದೆ.

9 ನೇ ತರಗತಿಗಾಗಿ ರಾಜಕೀಯ ಚಿಂತಕರು ಮತ್ತು ರಾಜಕೀಯ ಸಂಸ್ಥೆಗಳು ಎಂಬ ಶಿರೋನಾಮೆಯಡಿಯಲ್ಲಿ ಪಠ್ಯಪುಸ್ತಕವನ್ನು 2005 ರ ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು ಮತ್ತು ಎನ್. ಸಿ. ಎಫ್. ಆಧಾರಿತ ಕರ್ನಾಟಕ ಪಠ್ಯಕ್ರಮ ಮಾರ್ಗದರ್ಶಿ ತತ್ವಗಳನ್ನಾಧರಿಸಿ ರಚಿಸಲಾಗಿದೆ.

ರಾಜ್ಯಶಾಸ್ತ್ರ ಪಠ್ಯಪುಸ್ತಕ ರಚನಾ ಸಮಿತಿಯ ಅಧ್ಯಕ್ಷರು ಮತ್ತು ಸದಸ್ಯರುಗಳಿಗೆ 2015 ರ ಸೆಪ್ಟೆಂಬರ್‌ನಲ್ಲಿ ಏರ್ಪಡಿಸಿದ ಮೊದಲನೇ ಕಾರ್ಯಾಗಾರದಲ್ಲಿ ಪಠ್ಯಪುಸ್ತಕದ ಸ್ವರೂಪ ಮತ್ತು ಶೈಲಿಯ ಬಗ್ಗೆ ಸಮಗ್ರ ಮಾಹಿತಿ ನೀಡಿತು. ಅವುಗಳನ್ನು ಗಮನದಲ್ಲಿಟ್ಟುಕೊಂಡು ಈ ಪಠ್ಯಪುಸ್ತಕವನ್ನು ರಚಿಸಲಾಗಿದೆ. ಮಕ್ಕಳು ರಾಜಕೀಯ ಚಿಂತಕರು ಮತ್ತು ರಾಜಕೀಯ ಸಂಸ್ಥೆಗಳ ಬಗ್ಗೆ ಹೆಮ್ಮೆ ಪಡುವಂತಹ ಸ್ವಾರಸ್ಯಕರ ವಿಷಯಗಳನ್ನು ಒಳಗೊಂಡ 10 ಪರಿಚಯಾತ್ಮಕ ಅಧ್ಯಾಯಗಳನ್ನು ನೀಡಲಾಗಿದೆ. ಮಕ್ಕಳಲ್ಲಿ ರಾಜಕೀಯ ಚಿಂತಕರು ಮತ್ತು ರಾಜಕೀಯ ಸಂಸ್ಥೆಗಳ ಕುರಿತಾದ ಆಸಕ್ತಿ ಮತ್ತು ಜ್ಞಾನವನ್ನು ಹೆಚ್ಚಿಸುವುದೇ ಈ ಅಧ್ಯಾಯಗಳ ಉದ್ದೇಶವಾಗಿದೆ. ಆದ್ದರಿಂದಲೇ ಈ ಪುಸ್ತಕವು ಕನ್ನಡ ಭಾಷೆಯಲ್ಲಿ ರಾಜಕೀಯ ಚಿಂತಕರು ಮತ್ತು ರಾಜಕೀಯ ಸಂಸ್ಥೆಗಳ ಕುರಿತಾದ ಒಂದು ಕಿರು ಸಂಪನ್ಮೂಲ ಪುಸ್ತಕವಾಗಿದೆಯೆಂದು ಹೇಳಲು ಹೆಮ್ಮೆಯೆನಿಸುತ್ತದೆ. ಪ್ರತಿ ಅಧ್ಯಾಯದ ಆರಂಭದಲ್ಲಿ ಕಲಿಕೆಯ ಉದ್ದೇಶಗಳು ಮತ್ತು ತಜ್ಞರ ಹೇಳಿಕೆಯೊಂದಿಗೆ ವಸ್ತುವಿಷಯದ ಸೂಕ್ಷ್ಮ ಪರಿಚಯವಿದೆ. ಶಿಕ್ಷಕರು

ನಿದರ್ಶನಗಳನ್ನು ನೀಡುತ್ತಾ ಅಂತರ್ಗತ, ರಚನಾತ್ಮಕ ಮತ್ತು ಸುರುಳಿಯಾಕಾರದ ವಿಧಾನಗಳನ್ನು ಅನುಸರಿಸುತ್ತಾ ಮಕ್ಕಳನ್ನು ಆಕರ್ಷಿಸಬಹುದು. ಅಧ್ಯಾಯದ ಕೊನೆಯಲ್ಲಿ ದೃಢೀಕರಣಕ್ಕಾಗಿ ಅಭ್ಯಾಸವನ್ನು ಕೊಡಲಾಗಿದೆ. ಮಕ್ಕಳಲ್ಲಿ ಸೃಜನಶೀಲತೆ, ಚಿಂತನಾಶೀಲತೆ ಮತ್ತು ಕೌಶಲ್ಯ ಅಭಿವೃದ್ಧಿಗಾಗಿ ಸಲಹಾತ್ಮಕ ಚಟುವಟಿಕೆಗಳನ್ನು ನೀಡಲಾಗಿದೆ. ಶಿಕ್ಷಕರು ಅವುಗಳನ್ನು ಮಾಡಲು ಮಕ್ಕಳಿಗೆ ಉತ್ತೇಜಿಸಿ, ಮಾರ್ಗದರ್ಶಿಸುವುದು ಉತ್ತಮ. ಮಕ್ಕಳ ಜ್ಞಾನವೃದ್ಧಿಗಾಗಿ ಸ್ವಯಂ ಆಸಕ್ತಿಯಿಂದ ತಿಳಿಯಬೇಕಾದ ಹೆಚ್ಚಿನ ಮಾಹಿತಿಯನ್ನು ಚೌಕದಲ್ಲಿ ನೀಡಲಾಗಿದೆ. ಈ ವಿಷಯಗಳ ಕುರಿತಾಗಿ ಲಿಖಿತ ಅಥವಾ ಮೌಖಿಕ ಪರೀಕ್ಷೆಗಳಲ್ಲಿ ಪ್ರಶ್ನೆಗಳನ್ನು ಕೇಳಲು ಅವಕಾಶವಿರುವುದಿಲ್ಲ. ಬೋಧನೆಗೆ ಲಭ್ಯವಿರುವ ಅವಧಿಗಳನ್ನು ಆಧರಿಸಿ ಅಧ್ಯಾಯಗಳನ್ನು ಹಂಚಿಕೆ ಮಾಡಲಾಗಿದೆ. ಪಠ್ಯ ಪುಸ್ತಕವನ್ನು ಸಾಧ್ಯವಿರುವಷ್ಟು ದೋಷ ಮುಕ್ತಗೊಳಿಸಲು ಪ್ರಯತ್ನಿಸಲಾಗಿದೆ. ವಿದ್ಯಾರ್ಥಿಗಳು, ಶಿಕ್ಷಕರು, ಪೋಷಕರು ಹಾಗೂ ಸಾರ್ವಜನಿಕರು ಪುಸ್ತಕದ ಕುರಿತಾದ ಮೆಚ್ಚುಗೆ ಮತ್ತು ಕುಂದು ಕೊರತೆಗಳನ್ನು ಪತ್ರಮುಖೇನ ಸಂಯೋಜಕರಿಗೆ ತಿಳಿಸಿದರೆ ಅವುಗಳನ್ನು ಪರಿಷ್ಕರಣೆಯ ಹಂತದಲ್ಲಿ ಪರಿಗಣಿಸಬಹುದು. ತಮ್ಮ ಸಲಹೆ, ಸೂಚನೆಗಳನ್ನು ಹೃದಯಪೂರ್ವಕವಾಗಿ ಸ್ವಾಗತಿಸುತ್ತೇವೆ. ಈ ಪಠ್ಯಪುಸ್ತಕ ರಚನಾ ಕಾರ್ಯದಲ್ಲಿ ಹೆಚ್ಚಿನ ಸಹಕಾರ ನೀಡಿದ ಕರ್ನಾಟಕ ಪಠ್ಯಪುಸ್ತಕ ಸಂಘದ ವ್ಯವಸ್ಥಾಪಕ ನಿರ್ದೇಶಕರಿಗೂ, ಸಂಯೋಜಕರಿಗೂ, ಪರಶೀಲಕರಿಗೂ, ಭಾಷಾಂತಕಾರರಿಗೂ ಮತ್ತು ಮತ್ತಿತರ ಸಿಬ್ಬಂಧಿ ವರ್ಗದವರಿಗೂ ನಾವು ಅಭಾರಿಯಾಗಿದ್ದೇವೆ. ರಾಜ್ಯಶಾಸ್ತ್ರ ಪಠ್ಯಪುಸ್ತಕ ರಚನಾ ಸಮಿತಿಯ ಸದಸ್ಯರುಗಳೆಲ್ಲರೂ ತಮ್ಮ ಅಮೂಲ್ಯವಾದ ಜ್ಞಾನಾನುಭವಗಳೆನ್ನೆಲ್ಲಾ ಪಠ್ಯಪುಸ್ತಕ ರಚನೆಗಾಗಿ ಧಾರೆಯೆರೆದು ಅವಿಸ್ಮರಣೀಯ ಸಹಕಾರ ನೀಡಿದ್ದಾರೆ. ಅವರಿಗೂ, ಪರಿಶೀಲಕರಿಗೂ ಮತ್ತು ಪುಸ್ತಕವನ್ನು ಅಂದವಾಗಿ ಮುದ್ರಿಸಿದವರಿಗೂ ವೈಯಕ್ತಿವಾಗಿ ನಾನು ಮತ್ತು ನನ್ನ ದೃಷ್ಟಿವಿಶ್ವಾಸಿಗರು ಮತ್ತು ಕಲಿಕಾಸಕ್ತ ಮಕ್ಕಳ ಸಮುದಾಯ ಸದಾ ಚಿರಋಣಿಗಳು. ಈ ಪಠ್ಯಪುಸ್ತಕವು ಸಾಮಾನ್ಯ ಲಿಪಿಯೊಂದಿಗೆ ಬ್ರೈಲ್ ಲಿಪಿ ಮತ್ತು ಧ್ವನಿಸುರುಳಿಗಳಲ್ಲಿ ಮುದ್ರಿತವಾಗಿ ದೃಷ್ಟಿವಿಶ್ವಾಸಿಗರು ಮತ್ತು ಕಲಿಕಾಸಕ್ತ ಮಕ್ಕಳ ದಿಟ್ಟ ಮುನ್ನಡೆಗೆ ನೆರವಾಗಲೆಂದು ಆಶಿಸುತ್ತೇವೆ.

ಡಾ. ಕೃಷ್ಣ ಹೊಂಬಳ್, ಅಧ್ಯಕ್ಷರು, ರಾಜ್ಯಶಾಸ್ತ್ರ ಪಠ್ಯಪುಸ್ತಕ ರಚನಾ ಸಮಿತಿ

ಪಠ್ಯಪುಸ್ತಕ ರಚನಾ ಸಮಿತಿ

ಸಲಹೆ ಮತ್ತು ಮಾರ್ಗದರ್ಶನ: ಡಾ. ಬರಗೂರು ರಾಮಚಂದ್ರಪ್ಪ: ಅಧ್ಯಕ್ಷರು, ರಾಜ್ಯ ಪಠ್ಯಪುಸ್ತಕ ಪರಿಷ್ಕರಣ ಸಮಿತಿಗಳು, ಕರ್ನಾಟಕ ಪಠ್ಯಪುಸ್ತಕ ಸಂಘ, ಬೆಂಗಳೂರು.

ಶ್ರೀ ನಾಗೇಂದ್ರ ಕುಮಾರ್: ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಪಠ್ಯಪುಸ್ತಕ ಸಂಘ, ಬೆಂಗಳೂರು.

ಅಧ್ಯಕ್ಷರು:

ಡಾ. ಕೃಷ್ಣ ಹೊಂಬಳ್: ಸಹಾಯಕ ಪ್ರಾಧ್ಯಾಪಕರು, ರಾಜ್ಯಶಾಸ್ತ್ರ ಅಧ್ಯಯನ ವಿಭಾಗ, ಮೈಸೂರು ವಿಶ್ವವಿದ್ಯಾನಿಲಯ, ಮಾನಸ ಗಂಗೋತ್ರಿ, ಮೈಸೂರು.

ಸದಸ್ಯರುಗಳು: ಶ್ರೀ ವೈ ರಾಮಕೃಷ್ಣರಾವ್: ನಿವೃತ್ತ ರಾಜ್ಯಶಾಸ್ತ್ರ ಉಪನ್ಯಾಸಕರು, ಎರ್ಮಾಳು, ಉಡುಪಿ ಜಿಲ್ಲೆ.

ಶ್ರೀ ರೇವಣಸಿದ್ಧಪ್ಪ ಕೆ. ಆರ್.: ರಾಜ್ಯಶಾಸ್ತ್ರ ಉಪನ್ಯಾಸಕರು, ಬಾಲಕರ ಸರ್ಕಾರಿ ಪದವಿ ಪೂರ್ವ ಕಾಲೇಜು, 18 ನೇ ಅಡ್ಡ ರಸ್ತೆ, ಮಲ್ಲೇಶ್ವರಂ, ಬೆಂಗಳೂರು.

ಶ್ರೀಮತಿ ಐಶ್ವರ್ಯ: ಸಹಾಯಕ ಪ್ರಾಧ್ಯಾಪಕರು, ಕೆ. ಎಸ್. ಓ. ಯು, ಮುಕ್ತ ಗಂಗೋತ್ರಿ, ಮೈಸೂರು.

ಶ್ರೀ. ಎಸ್. ಎಸ್. ದೇವರಾಜು: ಹಿರಿಯ ಸಂಶೋಧಕರು, ರಾಜ್ಯಶಾಸ್ತ್ರ ಅಧ್ಯಯನ ವಿಭಾಗ, ಮೈಸೂರು ವಿಶ್ವವಿದ್ಯಾನಿಲಯ, ಮಾನಸ ಗಂಗೋತ್ರಿ, ಮೈಸೂರು.

ಪರಿಶೀಲಕರು: ಪ್ರೊ. ಜಿ. ಟಿ. ರಾಮಚಂದ್ರಪ್ಪ: ಪ್ರಾಧ್ಯಾಪಕರು, ರಾಜ್ಯಶಾಸ್ತ್ರ ಅಧ್ಯಯನ ವಿಭಾಗ, ಮೈಸೂರು ವಿಶ್ವವಿದ್ಯಾನಿಲಯ, ಮಾನಸ ಗಂಗೋತ್ರಿ, ಮೈಸೂರು.

ಶ್ರೀಮತಿ ಸಿ. ನಾಗಮಣಿ: ಉಪನಿರ್ದೇಶಕರು, ಕರ್ನಾಟಕ ಪಠ್ಯಪುಸ್ತಕ ಸಂಘ, ಬೆಂಗಳೂರು.

ಕಾರ್ಯಕ್ರಮ ಸಂಯೋಜಕರು: ಶ್ರೀಮತಿ ಎನ್. ಎಸ್. ಸೌಮ್ಯ: ಸಹಾಯಕ ನಿರ್ದೇಶಕರು, ಕರ್ನಾಟಕ ಪಠ್ಯಪುಸ್ತಕ ಸಂಘ, ಬೆಂಗಳೂರು.

ಪರಿವಿಡಿ

ಅಧ್ಯಾಯ	**ಶೀರ್ಷಿಕೆ**
1	ಪ್ಲೇಟೋ (Plato)
2	ಅರಿಸ್ಟಾಟಲ್ (Aristotle)
3	ಮಹಾತ್ಮಗಾಂಧಿ (Mahatma Gandhi)
4	ಡಾ. ಬಾಬಾ ಸಾಹೇಬ್ ಬಿ. ಆರ್. ಅಂಬೇಡ್ಕರ್ (Dr. Baba Saheb B. R. Ambedkar)
5	ಸರ್ಕಾರ (Government)
6	ಶಾಸಕಾಂಗ (Legislature)
7	ಕಾರ್ಯಾಂಗ (Executive)
8	ನ್ಯಾಯಾಂಗ (Judiciary)
9	ರಾಜಕೀಯ ಪಕ್ಷಗಳು (Political Parties)
10	ಚುನಾವಣೆ (Election)

ಅಧ್ಯಾಯ-1 ಪ್ಲೇಟೋ (Plato)

ಗ್ರೀಕ್ ತತ್ವಜ್ಞಾನಿ- ಪ್ಲೇಟೋ (ಕ್ರಿ. ಪೂ. 427- ಕ್ರಿ. ಪೂ. 347)

ಕಲಿಕಾ ಉದ್ದೇಶಗಳು:

1. ಗ್ರೀಕ್ ತತ್ವಜ್ಞಾನಿ ಪ್ಲೇಟೋರವರ ಜೀವನ ಮತ್ತು ಕೃತಿಗಳ ಬಗ್ಗೆ ತಿಳಿಯುವುದು.
2. ಪ್ಲೇಟೋರವರ ನ್ಯಾಯ ಮತ್ತು ಸಮಾಜದ ವರ್ಗೀಕರಣವನ್ನು ಅರ್ಥೈಸಿಕೊಳ್ಳುವುದು.
3. ಪ್ಲೇಟೋರವರ ತತ್ವಜ್ಞಾನಿ ಅರಸರ ಪರಿಕಲ್ಪನೆಯ ಬಗ್ಗೆ ಅರಿಯುವುದು.
4. ಪ್ಲೇಟೋರವರ 'ಆದರ್ಶ ರಾಜ್ಯ'ದ ಪರಿಕಲ್ಪನೆಯನ್ನು ಮೆಚ್ಚಿಕೊಳ್ಳುವುದು.

"ಸದ್ಗುಣ ಶ್ರೇಷ್ಠತೆಯೇ ಆಡಳಿತದ ಮೂಲ ಮಂತ್ರ" **ಪ್ಲೇಟೋ.**

"ಅರಸರೇ ತತ್ವಜ್ಞಾನಿಗಳಾಗಿರಬೇಕು ಇಲ್ಲವೇ ತತ್ವಜ್ಞಾನಿಗಳೇ ಅರಸರಾಗಿರಬೇಕು."

ಪ್ಲೇಟೋ

ಪೀಠಿಕೆ:

ರಾಜಕೀಯ ಚಿಂತನೆಗೆ ಅಡಿಪಾಯ ಹಾಕಿದ ಶ್ರೇಯಸ್ಸು ಪ್ರಾಚೀನ ಗ್ರೀಕರಿಗೆ ಸಲ್ಲುತ್ತದೆ. ಗ್ರೀಕ್ ತತ್ವಜ್ಞಾನಿಗಳಾದ ಸಾಕ್ರೆಟಿಸ್, ಪ್ಲೇಟೋ ಅರಿಸ್ಟಾಟಲ್‌ರವರನ್ನು 'ಬೌದ್ಧಿಕ ತ್ರಿವಳಿ' ಎಂದು ಕರೆಯಲಾಗಿದೆ. ಇವರು ತತ್ವಶಾಸ್ತ್ರ ಮತ್ತು ತರ್ಕಶಾಸ್ತ್ರಗಳ ಮೂಲಕ ಬೀರಿರುವ ಬೌದ್ಧಿಕ ಪ್ರಭಾವ ಅಪಾರವಾದುದು. ರಾಜನೀತಿ ಚಿಂತನೆಯನ್ನೂ ವಿಶ್ವಕ್ಕೆ ಪರಿಚಯಿಸಿದ ಕೀರ್ತಿ ಇವರಿಗೆ ಸಲ್ಲುತ್ತದೆ. 'ಸದ್ಗುಣವೇ ಸುಜ್ಞಾನ' ಎಂದು ಪರಿಗಣಿಸಿ ಆಡಳಿತಗಾರನೊಬ್ಬ ತತ್ವಜ್ಞಾನಿ ಅರಸನಾದರೆ, ಆದರ್ಶ ರಾಜ್ಯ ಸ್ಥಾಪನೆಯಾಗುತ್ತದೆ ಎಂದು ಕನಸು ಕಂಡ ತತ್ವಜ್ಞಾನಿಯೇ ಪ್ಲೇಟೋ.

1.1 ಜೀವನ ಚಿತ್ರಣ- (Life Sketch)



ಸಾಕ್ರೆಟಿಸ್‌ನ ಪರಮ ಶಿಷ್ಯರೂ ಹಾಗೂ ಅರಿಸ್ಟಾಟಲ್‌ನ ಗುರುವೂ ಆದ ಪ್ಲೇಟೋರವರು ಜಗತ್ತು ಕಂಡ ಅತ್ಯದ್ಭುತ ತತ್ವಜ್ಞಾನಿ. ಪ್ಲೇಟೋರವರು ಕ್ರಿ. ಪೂ. 427 ರಲ್ಲಿ ಅಥೆನ್ಸಿನ 'ಎಜಿನಾ' ಎಂಬ ಸ್ಥಳದಲ್ಲಿ ಜನಿಸಿದರು. ಇವರ ತಂದೆ ಅರಿಸ್ಟಾನ್. ತಾಯಿಯ ಹೆಸರು ಪೆರಿಕ್ಟೋಯಿನಿ. ಪ್ಲೇಟೋರವರ ಮೂಲ ಹೆಸರು ಅರಿಸ್ಟೋಕ್ಲಿಸ್. ಇವರು ಆಕರ್ಷಕ ಸದೃಢ ಮೈಕಟ್ಟನ್ನು ಮತ್ತು ವಿಶಾಲವಾದ ಭುಜಗಳನ್ನು ಹೊಂದಿದ್ದರಿಂದ 'ಪ್ಲೇಟೋ' ಎಂದು ಸಂಬೋಧಿಸುತ್ತಿದ್ದರು.

ಪ್ಲೇಟೋರವರು ಉತ್ತಮ ಕ್ರೀಡಾಪಟುವಾಗಿದ್ದರು. ಅಂದು ಗ್ರೀಕ್‌ನಲ್ಲಿ ಪ್ರಖ್ಯಾತವಾಗಿದ್ದ 'ಇಸ್ತಾಮಿಯನ್' ಕ್ರೀಡೆಗಳಲ್ಲಿ ಭಾಗವಹಿಸಿ ಅನೇಕ ಬಹುಮಾನಗಳನ್ನು ಗಳಿಸಿದ್ದರು. (ಇಸ್ತಾಮಿಯನ್ ಕ್ರೀಡೆಗಳು ಇಂದಿನ ಒಲಂಪಿಕ್ ಕ್ರೀಡೆಗಳು) ಕೆಲವು ವರ್ಷಗಳ ಕಾಲ ಸೈನ್ಯದಲ್ಲಿ ಸೇವೆ ಸಲ್ಲಿಸಿ ಮಹಾನ್ ದೇಶಭಕ್ತರೆಂಬ ಖ್ಯಾತಿಗೆ ಪಾತ್ರರಾಗಿದ್ದರು. ಪ್ಲೇಟೋರವರು ಅಪಾರ ಸದ್ಗುಣಗಳನ್ನು ತಮ್ಮ ಜೀವನದಲ್ಲಿ ಅಳವಡಿಸಿಕೊಂಡಿದ್ದರಿಂದ ಇವರು ಗ್ರೀಸ್ ದೇಶದ ಜನರ ಮೆಚ್ಚುಗೆಗೂ ಭಾಜನರಾಗಿದ್ದರು.

ಪ್ಲೇಟೋರವರ ಜೀವಿತಾವಧಿಯಲ್ಲಿಯೇ ಅಥೆನ್ಸ್ ಅನೇಕ ತೊಂದರೆಗಳಿಗೊಳಗಾಗಿ ನೈತಿಕ ಅಧಃಪತನವನ್ನು ಕಂಡಿತ್ತು. ಯುದ್ಧದಲ್ಲಿ ಅಥೆನ್ಸ್ ಸ್ಪಾರ್ಟದಿಂದ ಸೋಲು ಅನುಭವಿಸಿತ್ತು. ಅಥೆನ್ಸ್ ನಲ್ಲಿ ಕೆಲವು ಕಾಲ ನಿರಂಕುಶ ಪ್ರಭುತ್ವ ಮತ್ತು ಕೆಲವು ಕಾಲ ಪ್ರಜಾಪ್ರಭುತ್ವ ಅಸ್ತಿತ್ವದಲ್ಲಿತ್ತು. ಜನರ ನೈತಿಕ ಜೀವನಮಟ್ಟ ಅಧೋಗತಿಗೆ ಇಳಿದಿತ್ತು. ಸರಕಾರದ ಭ್ರಷ್ಟಾಚಾರ ಮತ್ತು ಅನ್ಯಾಯಗಳ ವಿರುದ್ಧ ದನಿ ಎತ್ತಿದ್ದರಿಂದ ಸಾಕ್ರೆಟಿಸ್‌ರವರನ್ನು ರಾಜ್ಯದ ಆಜ್ಞೆಯಂತೆ 'ಹೇಮ್ಲಾಕ್' ಎಂಬ ವಿಷ ಕುಡಿಸಿ ಮರಣದಂಡನೆಗೆ ಗುರಿಪಡಿಸಲಾಯಿತು. ಸಾಕ್ರೆಟಿಸ್‌ರವರ ಮರಣ ಪ್ಲೇಟೋರವರ ಮನಸ್ಸಿನ ಮೇಲೆ ಅಗಾಧ ಪರಿಣಾಮವನ್ನುಂಟು ಮಾಡಿತು. ಇದರಿಂದ ಮನನೊಂದ ಪ್ಲೇಟೋರವರು ರಾಜಕೀಯ ಕ್ಷೇತ್ರದಲ್ಲಿ ಆಸಕ್ತಿ

ಹೊಂದಿದ್ದರಾದರೂ ತತ್ವಜ್ಞಾನದ ಕಡೆಗೆ ವಾಲಿದರು. ಪ್ಲೇಟೋರವರನ್ನು ಇದೇ ಸಂದರ್ಭದಲ್ಲಿ ಸರಕಾರವು ಅಥೆನ್ ನಗರದಿಂದ ಗಡಿಪಾರು ಮಾಡಿತು. ತದನಂತರ ಗ್ರೀಸ್, ಇಟಲಿ, ಈಜಿಪ್ಟ್ ಮುಂತಾದ ದೇಶಗಳಲ್ಲಿ ಪ್ರವಾಸ ಮಾಡಿ ಕ್ರಿ. ಪೂ. 366 ರಲ್ಲಿ ಅಥೆನ್ಸ್‌ಗೆ ಮರಳಿದರು. ನಂತರ ಪ್ಲೇಟೋರವರು ತಮ್ಮ ಶಿಷ್ಯರೊಂದಿಗೆ 'ಅಕಾಡೆಮಿಯಾ' ಎಂಬ ಉದ್ಯಾನದಲ್ಲಿ ನಿಯಮಿತವಾಗಿ ಸೇರುತ್ತಿದ್ದರು. ಇಲ್ಲಿ ತತ್ವಜ್ಞಾನ, ನ್ಯಾಯ, ರಾಜಕೀಯ, ಗಣಿತ, ಶಿಕ್ಷಣ ಮುಂತಾದ ಅನೇಕ ವಿಷಯಗಳ ಕುರಿತು ಚರ್ಚಿಸುತ್ತಿದ್ದರು. ಇದೇ ಕ್ರಿ. ಪೂ. 386 ರಲ್ಲಿ ಪ್ಲೇಟೋರವರ ಪ್ರಖ್ಯಾತ 'ಅಕಾಡೆಮಿ' (Academy) ಯಾಗಿ ಪರಿವರ್ತನೆಗೊಂಡು ಪ್ರಸಿದ್ಧಿಯಾಯಿತು. ಪ್ಲೇಟೋರವರ ಈ ಅಕಾಡೆಮಿಯನ್ನು ಪ್ರಾಚೀನ ಯುಗದ ಪ್ರಥಮ ವಿಶ್ವವಿದ್ಯಾನಿಲಯ ಎಂದು ಕರೆಯಲಾಗಿದೆ.

ಪ್ಲೇಟೋರವರು ತಮ್ಮ ಜೀವಿತದ ಕೊನೆಯ ದಿನಗಳನ್ನು ಅಕಾಡೆಮಿಯಲ್ಲಿಯೇ ಕಳೆದರು. ತಮ್ಮ ಶಿಷ್ಯರೊಂದಿಗೆ ಕ್ರಿ. ಪೂ. 348 ರಲ್ಲಿ ತರ್ಕಶಾಸ್ತ್ರದ ಚರ್ಚೆಯಲ್ಲಿ ತೊಡಗಿದ್ದಾಗ ಕೊನೆಯುಸಿರೆಳೆದರು.

1.2. ಪ್ಲೇಟೋರವರ ಕೃತಿಗಳು: (Works)

ಪ್ಲೇಟೋರವರ ವಿಚಾರಧಾರೆಗಳು ಅವರ ಶಿಷ್ಯರೊಡನೆ ಮಾಡುತ್ತಿದ್ದ ಉಪನ್ಯಾಸ ಮತ್ತು ಸಂಭಾಷಣೆಯ ರೂಪದಲ್ಲಿ ದೊರೆತಿವೆ. ಪ್ಲೇಟೋರವರ ಬರಹಗಳನ್ನು 2 ವರ್ಗಗಳಾಗಿ ವಿಂಗಡಿಸಬಹುದು. ಅವುಗಳೆಂದರೆ:

1. ಸಂವಾದಗಳು:

ಅಪಾಲಜಿ, ಸಿಂಪೋಸಿಯಂ, ಯುಟೋಪಿಯೊ, ಕ್ರಿಟೋ, ಯಥೇಡೆಮಿಸ್, ಪ್ರೊಟೊಗೊರೆಸ್, ಫಿಡೋ, ಲಾಚಿಸ್, ಚಾರ್ಮಿಡಿಸ್, ಮೆನೊ.

2. ಕೃತಿಗಳು:

ದಿ ರಿಪಬ್ಲಿಕ್ (ಕ್ರಿ. ಪೂ. 386), ದಿ ಸ್ಟೇಟ್ ಮೆನ್ (ಕ್ರಿ. ಪೂ. 360), ದಿ ಲಾಸ್ (ಕ್ರಿ. ಪೂ. 347) ಪ್ಲೇಟೋರವರ ಈ ಮೂರು ಕೃತಿಗಳು ಅವರ ರಾಜಕೀಯ ಚಿಂತನೆಯನ್ನು ಸ್ಪಷ್ಟವಾಗಿ ಪ್ರತಿಬಿಂಬಿಸುತ್ತವೆ.

(ಎ) 'ದಿ ರಿಪಬ್ಲಿಕ್' ಪ್ಲೇಟೋರವರ ಮೇರು ಕೃತಿಯಾಗಿದೆ. ಪ್ಲೇಟೋರವರು ಈ ಅಮೋಘ ಕೃತಿಯಲ್ಲಿ ಆದರ್ಶ ರಾಜ್ಯ (Ideal State) ಪರಿಕಲ್ಪನೆಯ ಬಗೆಗೆ ವಿವರಿಸಿದ್ದಾರೆ. ಈ ಕೃತಿಯಲ್ಲಿ ತಮ್ಮ ನೈತಿಕ, ಸಾಮಾಜಿಕ, ರಾಜಕೀಯ, ಶೈಕ್ಷಣಿಕ ವಿಚಾರಗಳನ್ನು ಕುರಿತು ಸುದೀರ್ಘವಾಗಿ ಚರ್ಚಿಸಿದ್ದಾರೆ.

(ಬಿ) ‘ದಿ ಸ್ಟೇಟ್ಸ್ ಮೆನ್’ ಪ್ಲೇಟೋರವರ ಒಂದು ಸಂಭಾಷಣೆಯಾಧಾರಿತ ಕೃತಿ. ಈ ಕೃತಿಯಲ್ಲಿ ರಾಜ್ಯ ಮತ್ತು ವ್ಯಕ್ತಿಗಳಿಗಿರುವ ಸಂಬಂಧಗಳನ್ನು ವಿವರವಾಗಿ ಚರ್ಚಿಸಿದ್ದಾರೆ. ಅಲ್ಲದೆ ತತ್ವಜ್ಞಾನಿ ಅರಸರ ಆಳ್ವಿಕೆಯನ್ನು ಕುರಿತು ಸವಿಸ್ತಾರವಾಗಿ ವಿವರಿಸಿದ್ದಾರೆ.

(ಸಿ) ‘ದಿ ಲಾಸ್’ ಕೃತಿಯಲ್ಲಿ ಪ್ಲೇಟೋರವರು ರಾಷ್ಟ್ರದ ರಚನೆಯ ಬಗ್ಗೆ ವಿವರಿಸಿದ್ದಾರೆ. ಇಲ್ಲಿ ವ್ಯಕ್ತಿ ಮತ್ತು ಕಾನೂನು ಹಾಗೂ ನ್ಯಾಯದ ಬಗೆಗೆ ವಿವರವಾಗಿ ಚರ್ಚಿಸಿದ್ದಾರೆ. ಪ್ಲೇಟೋರವರ ಈ ಮೂರು ಕೃತಿಗಳಲ್ಲಿ ಸಾಕ್ರೆಟಿಸ್‌ರ ಚಿಂತನೆಗಳ ಪ್ರಭಾವವಿದೆ. ಸ್ವತಃ ಪ್ಲೇಟೋರವರು ತಮ್ಮ ಮೇಲೆ ಸಾಕ್ರೆಟಿಸ್ ಪ್ರಭಾವದ ಬಗ್ಗೆ ಕುರಿತು “ನಾನು ದೇವರಿಗೆ ಧನ್ಯವಾದಗಳನ್ನು ಅರ್ಪಿಸುತ್ತೇನೆ. ಏಕೆಂದರೆ, ನಾನು ಸಾಕ್ರೆಟಿಸ್ ಯುಗದಲ್ಲಿ ಜನಿಸಿದ್ದೇನೆ.” ಎಂದು ಹೇಳಿರುವುದು ಅವರ ಗುರುಭಕ್ತಿಯನ್ನು ಸಾಕ್ಷೀಕರಿಸುತ್ತದೆ.

1.3 ‘ಆದರ್ಶ ರಾಜ್ಯ ಪರಿಕಲ್ಪನೆ’ (Concept of Ideal State)

ಪ್ಲೇಟೋರವರು ಆದರ್ಶ ರಾಜ್ಯದ ಪರಿಕಲ್ಪನೆಯನ್ನು ತಮ್ಮ ‘ದಿ ರಿಪಬ್ಲಿಕ್’ ಎಂಬ ಗ್ರಂಥದಲ್ಲಿ ಚರ್ಚಿಸಿದ್ದಾರೆ. ಪ್ಲೇಟೋರವರ ಕಾಲದಲ್ಲಿ ಅಥೆನ್ಸ್‌ನಲ್ಲಿ ರಾಜಕೀಯ ಅಸ್ಥಿರತೆ, ಅಭದ್ರತೆ, ಅರಾಜಕತೆ, ಅಂತಃಕಲಹಗಳು ತಾಂಡವವಾಡುತ್ತಿದ್ದವು. ಅಥೆನ್ಸ್‌ನಲ್ಲಿ ಅಂದು ಅಸ್ತಿತ್ವದಲ್ಲಿದ್ದ ಶ್ರೀಮಂತಪ್ರಭುತ್ವ ಮತ್ತು ಪ್ರಜಾಪ್ರಭುತ್ವಗಳು ಈ ಸಮಸ್ಯೆಗಳಿಗೆ ಪರಿಹಾರ ನೀಡಲು ವಿಫಲವಾಗಿದ್ದವು. ಈ ಸಮಸ್ಯೆಗಳ ಪರಿಹಾರಕ್ಕಾಗಿ ಪ್ಲೇಟೋರವರು ಆದರ್ಶ ರಾಜ್ಯ (Ideal State) ಸ್ಥಾಪನೆಯ ಕನಸನ್ನು ಕಂಡರು.

ಪ್ಲೇಟೋರವರ ಆದರ್ಶ ರಾಜ್ಯ ಪರಿಕಲ್ಪನೆಯು 4 ಪ್ರಮುಖ ಆಧಾರ ಸ್ತಂಭಗಳನ್ನು ಹೊಂದಿದೆ. ಅವುಗಳೆಂದರೆ:

1. **ಆದರ್ಶ ರಾಜ್ಯ**

ಅ. ನ್ಯಾಯ,

ಆ. ಶಿಕ್ಷಣ,

ಇ. ಆಸ್ತಿ ಮತ್ತು ಪತ್ನಿಯರ ಸಮತಾವಾದ,

ಈ. ತತ್ವಜ್ಞಾನಿ ಅರಸು

ಪ್ಲೇಟೋರವರ ಆದರ್ಶ ರಾಜ್ಯದಲ್ಲಿ ‘ನ್ಯಾಯ’ ಗುರಿಯಾದರೆ ‘ಶಿಕ್ಷಣ’ ನ್ಯಾಯವನ್ನು ಸಾಕ್ಷಾತ್ಕರಿಸುವ ಸಾಧನವಾಗಿದೆ. ಅಂದರೆ ಸಮಾಜದಲ್ಲಿ ನ್ಯಾಯಕ್ಕೆ ಪ್ರಾತಿನಿಧ್ಯ ಮತ್ತು ಶಿಕ್ಷಣಕ್ಕೆ ಪ್ರಾಮುಖ್ಯತೆ ಇರಬೇಕು ಎಂಬುದು ಇವರ ಅಭಿಮತವಾಗಿದೆ. ರಾಜಕೀಯ ಮತ್ತು ನೀತಿ ಎರಡು ಒಂದೇ ಆಗಿದ್ದರೂ ರಾಜಕೀಯ ದುರ್ನಡತೆಗೂ ಕಾರಣವಾಗಬಹುದು.

ಆದುದರಿಂದ "ಉತ್ತಮ ಜೀವನ ನಡೆಸಲು ಉತ್ತಮ ರಾಜ್ಯವಿರಬೇಕು. ಆ ಉತ್ತಮ ರಾಜ್ಯವೇ ಆದರ್ಶ ರಾಜ್ಯ" ಎಂದು ಪ್ಲೇಟೋರವರು ಪ್ರತಿಪಾದಿಸಿದ್ದಾರೆ.

1. **ನ್ಯಾಯದ ಪರಿಕಲ್ಪನೆ (Concept of Justice)**

ನ್ಯಾಯದ ಪರಿಕಲ್ಪನೆಯು ಪ್ಲೇಟೋರವರ ಆದರ್ಶ ರಾಜ್ಯದ ಆಧಾರ ಸ್ತಂಭಗಳಲ್ಲಿ ಒಂದಾಗಿದೆ. ನ್ಯಾಯವೇ 'ದಿ ರಿಪಬ್ಲಿಕ್' ಗ್ರಂಥದ ತಿರುಳಾಗಿದೆ. ಇದು ಮೂರು ಮೂಲಭೂತ ತತ್ವಗಳನ್ನು ಒಳಗೊಂಡಿದೆ. ಅವುಗಳೆಂದರೆ:

1. ಕಾರ್ಯ ನೈಪುಣ್ಯತೆ (Functional Specialization)
2. ಹಸ್ತಕ್ಷೇಪ ರಹಿತತೆ (Non-Interference)
3. ಸಾಮಾಜಿಕ ಸಾಮರಸ್ಯ (Social Harmony)

ಪ್ಲೇಟೋರವರು ಮಾನವನ ಮನಸ್ಸಿನಲ್ಲಿರುವ ಗುಣಗಳನ್ನು ಸಮಾಜದ ವರ್ಗಗಳಿಗೆ ಅನ್ವಯಿಸಿದ್ದಾರೆ. ಇವರ ಸಮಾಜದ ವರ್ಗೀಕರಣ ಈ ಕೆಳಕಂಡಂತಿದೆ.

ಮಾನವನ ಮನಸ್ಸು	**ವರ್ಗಗಳು**	**ಗುಣ**
1. ವಿವೇಕ (Reason)	ಅರಸರು	ಚಿನ್ನದ ಗುಣ
2. ಉತ್ಸಾಹ (Spirit)	ಸೈನಿಕರು	ಬೆಳ್ಳಿಯ ಗುಣ
3. ಭೋಗ (Appetite)	ಉತ್ಪಾದಕರು	ತಾಮ್ರದ ಗುಣ

ಪ್ಲೇಟೋರವರ ಪ್ರಕಾರ ಮಾನವನ ಮನಸ್ಸಿನಂತೆ ಸಮಾಜವೂ ಕೂಡ ವಿವೇಕ, ಉತ್ಸಾಹ, ಭೋಗ ಎಂಬ ಮೂರು ಭಾಗಗಳನ್ನು ಹೊಂದಿರುತ್ತದೆ. ವಿವೇಕವನ್ನು ಅರಸರು, ಉತ್ಸಾಹವನ್ನು ಸೈನಿಕರು, ಭೋಗವನ್ನು ಉತ್ಪಾದಕರು ಪ್ರತಿನಿಧಿಸುತ್ತಾರೆ.

ಆಹಾರ, ಬಟ್ಟೆ ಮುಂತಾದ ಅತ್ಯವಶ್ಯಕ ವಸ್ತುಗಳನ್ನು ಉತ್ಪಾದಿಸುವ ಒಕ್ಕಲಿಗರು, ವ್ಯಾಪಾರಿಗಳು, ಕುಶಲಕರ್ಮಿಗಳು ಉತ್ಪಾದಕ ವರ್ಗಕ್ಕೆ ಸೇರಿರುತ್ತಾರೆ. ಅರಸರು ಚಿನ್ನದ ಗುಣವನ್ನು, ಸೈನಿಕರು ಬೆಳ್ಳಿಯ ಗುಣವನ್ನು ಹಾಗೂ ಉತ್ಪಾದಕರು ತಾಮ್ರದ ಗುಣವನ್ನು

ಹೊಂದಿರುತ್ತಾರೆ. ಈ ಮೂರು ವರ್ಗಗಳು ರಾಜ್ಯಕ್ಕೆ ಮಹತ್ತರವಾದ ಕೊಡುಗೆಗಳನ್ನು ನೀಡುತ್ತವೆ. ಪ್ರತಿಯೊಂದು ವರ್ಗವೂ ತನ್ನ ಶಿಕ್ಷಣ, ತರಬೇತಿ, ಸಾಮರ್ಥ್ಯ, ಆಸಕ್ತಿಗನುಗುಣವಾಗಿ ಕಾರ್ಯವನ್ನು ನಿರ್ವಹಿಸಬೇಕು. ಒಂದು ವರ್ಗವು ಇನ್ನೊಂದು ವರ್ಗದ ಕಾರ್ಯಕ್ಷೇತ್ರದಲ್ಲಿ ಮಧ್ಯಪ್ರವೇಶಿಸಬಾರದು. ಅಂದರೆ ಅರಸರು ರಾಜ್ಯಾಡಳಿತವನ್ನು ಮಾಡಬೇಕು. ಸೈನಿಕರು ರಾಷ್ಟ್ರ ರಕ್ಷಣೆ ಮಾಡಬೇಕು. ಉತ್ಪಾದಕ ವರ್ಗದವರು ಸಮಾಜಕ್ಕೆ ಅಗತ್ಯವಿರುವ ವಸ್ತುಗಳನ್ನು ಪೂರೈಸಬೇಕು.

ಪ್ಲೇಟೋರವರ ಪ್ರಕಾರ "ಒಂದು ವರ್ಗವು ಇನ್ನೊಂದು ವರ್ಗದ ಕಾರ್ಯಕ್ಷೇತ್ರದಲ್ಲಿ ಹಸ್ತಕ್ಷೇಪ ಮಾಡದೆ, ತನ್ನ ಶಿಕ್ಷಣ, ತರಬೇತಿ, ಸಾಮರ್ಥ್ಯ ಹಾಗೂ ಆಸಕ್ತಿಗನುಗುಣವಾಗಿ ಕಾರ್ಯನಿರ್ವಹಿಸುವುದೇ ನ್ಯಾಯ" ಇದನ್ನು ಕಟ್ಟುನಿಟ್ಟಾಗಿ ಅನುಷ್ಠಾನಗೊಳಿಸಿದಾಗ ಮಾತ್ರ ಸಾಮಾಜಿಕ ಸಾಮರಸ್ಯ ನೆಲೆಗೊಳ್ಳುತ್ತದೆ. ಸರ್ವರ ಅಭಿವೃದ್ಧಿ ಸಾಧ್ಯವಾಗುತ್ತದೆ. ಆಗ ಆದರ್ಶ ರಾಜ್ಯವೊಂದು ಸ್ಥಾಪನೆಯಾಗುತ್ತದೆ ಎಂಬುದು ಪ್ಲೇಟೋರವರ ವಾದವಾಗಿದೆ.

2. **ಶಿಕ್ಷಣದ ಪರಿಕಲ್ಪನೆ (Concept of Education)**

ಶಿಕ್ಷಣದ ಪರಿಕಲ್ಪನೆಯು ಪ್ಲೇಟೋರವರ ಆದರ್ಶ ರಾಜ್ಯದ ಎರಡನೆಯ ಆಧಾರಸ್ತಂಭವಾಗಿದೆ. ಪ್ಲೇಟೋರವರ ಪ್ರಕಾರ ಶಿಕ್ಷಣ ಮತ್ತು ನ್ಯಾಯಗಳೆರಡರ ನಡುವೆ ನಿಕಟವಾದ ಸಂಬಂಧವಿದೆ. ಇದು ಸಮಾಜದಲ್ಲಿ ಏಕತೆ ಮತ್ತು ಸಾಮರಸ್ಯವನ್ನು ಉಂಟು ಮಾಡುತ್ತದೆ.

ಪ್ಲೇಟೋರವರ ಪ್ರಕಾರ "ಸದ್ಗುಣವೇ ಜ್ಞಾನ" ಇಂತಹ ಸದ್ಗುಣವನ್ನು ಬೆಳೆಸುವುದೇ ಶಿಕ್ಷಣದ ಆದ್ಯ ಕರ್ತವ್ಯವಾಗಿದೆ. ಸ್ತ್ರೀ-ಪುರುಷರೆಂಬ ತಾರತಮ್ಯ ಮಾಡದೆ ರಾಜ್ಯ ಪ್ರತಿಯೊಬ್ಬ ಪ್ರಜೆಗೂ ಸಮಾನ ಶಿಕ್ಷಣ ನೀಡಬೇಕು. ಶಿಕ್ಷಣವೂ ಅವರವರ ವೃತ್ತಿಗನುಗುಣವಾಗಿರಬೇಕು. ರಾಜ್ಯವನ್ನಾಳುವವರಿಗೆ ಅತ್ಯಂತ ಕಠಿಣವೂ ಉನ್ನತವೂ ಆದ ಶಿಕ್ಷಣ ದೊರೆಯಬೇಕೆಂದು ಪ್ರತಿಪಾದಿಸಿದ್ದಾರೆ. ಅಲ್ಲದೆ ಶಿಕ್ಷಣವು ಕಡ್ಡಾಯವಾಗಿ ರಾಜ್ಯದ ನಿಯಂತ್ರಣದಲ್ಲಿರಬೇಕು ಎಂದಿದ್ದಾರೆ.

ಶಿಕ್ಷಣವು ಸಮಾಜದಲ್ಲಿ ಅಸ್ತಿತ್ವದಲ್ಲಿರುವ ಮೂರು ವರ್ಗಗಳಿಗೆ ತರಬೇತಿ ನೀಡುವುದರ ಮೂಲಕ ತಮ್ಮ ಕರ್ತವ್ಯಗಳನ್ನು ದಕ್ಷತೆಯಿಂದ ನಿರ್ವಹಿಸುವ ಸಾಮರ್ಥ್ಯವನ್ನು ನೀಡುತ್ತದೆ ಎಂದು ಪ್ಲೇಟೋ ವಾದಿಸಿದ್ದಾರೆ. "ವ್ಯಕ್ತಿಯ ಒಳಗಣ್ಣನ್ನು ತೆರೆಸುವುದರ ಮೂಲಕ (KEN of Cognition) ತನ್ನನ್ನು ತಾನೇ ಅರ್ಥ ಮಾಡಿಕೊಳ್ಳುವಂತೆ ಮಾಡುವುದೇ ಶಿಕ್ಷಣದ ಗುರಿ" ಎಂದು ಪ್ಲೇಟೋ ಅಭಿಪ್ರಾಯಪಟ್ಟಿದ್ದಾರೆ.

ಪ್ಲೇಟೋರವರ ಶಿಕ್ಷಣ ವ್ಯವಸ್ಥೆಯ ಪ್ರಮುಖ ಲಕ್ಷಣಗಳು:

1. ಶಿಕ್ಷಣವು ಸದ್ಗುಣ ಮತ್ತು ಶಿಸ್ತನ್ನು ಬೆಳಸಬೇಕು.

2. ಶಿಕ್ಷಣವು ನಾಗರಿಕರ ಆಸಕ್ತಿ, ಸಾಮರ್ಥ್ಯಕ್ಕನುಗುಣವಾಗಿ ಕಾರ್ಯ ನಿರ್ವಹಿಸಲು ಸಹಕಾರಿಯಾಗಬೇಕು.

3. ಶಿಕ್ಷಣವು ಮಕ್ಕಳ ಶಾರೀರಿಕ, ಮಾನಸಿಕ, ಬೌದ್ಧಿಕ ಮತ್ತು ನೈತಿಕ ವ್ಯಕ್ತಿತ್ವದ ಬೆಳವಣಿಗೆಗೆ ಪೂರಕವಾಗಿರಬೇಕು.

4. ಸ್ತ್ರೀ-ಪುರುಷರಿಬ್ಬರಿಗೂ ಉಚಿತ ಮತ್ತು ಕಡ್ಡಾಯ ಸಮಾನ ಶಿಕ್ಷಣವನ್ನು ನೀಡಬೇಕು.

5. ತತ್ವಜ್ಞಾನಿ ಅರಸರನ್ನು ಸೃಷ್ಟಿಸುವುದೇ ಶಿಕ್ಷಣದ ಪ್ರಧಾನ ಗುರಿ.

ಪ್ಲೇಟೋರವರು ಪ್ರತಿಪಾದಿಸಿರುವ ಶಿಕ್ಷಣದ ಪಠ್ಯಕ್ರಮವನ್ನು 2 ವಿಧಗಳಾಗಿ ವರ್ಗೀಕರಿಸಬಹುದು.

1. ಪ್ರಾಥಮಿಕ ಶಿಕ್ಷಣ (Elementary Education)

2. ಉನ್ನತ ಶಿಕ್ಷಣ (Higher Education)

1. **ಪ್ರಾಥಮಿಕ ಶಿಕ್ಷಣ: ಪ್ಲೇಟೋರವರ ಪ್ರಕಾರ ಪ್ರಾಥಮಿಕ ಶಿಕ್ಷಣವನ್ನು ಮೂರು ಹಂತಗಳಲ್ಲಿ ನೀಡಲಾಗುತ್ತದೆ.**

(ಎ) ಪ್ರಥಮ ಹಂತ: ಹುಟ್ಟಿನಿಂದ 6 ವರ್ಷಗಳವರೆಗೆ- ಈ ಹಂತದಲ್ಲಿ ಮಕ್ಕಳಿಗೆ ಭಾಷೆಯನ್ನು ಕಲಿಸಲಾಗುತ್ತದೆ.

(ಬಿ) ದ್ವಿತೀಯ ಹಂತ: 6 ರಿಂದ 18 ವರ್ಷಗಳವರೆಗೆ- ಈ ಹಂತದಲ್ಲಿ ಸಂಗೀತ, ಸಾಹಿತ್ಯ ಮತ್ತು ವ್ಯಾಯಾಮಕ್ಕೆ ಸಂಬಂಧಿಸಿದ ಶಿಕ್ಷಣ ನೀಡಲಾಗುತ್ತದೆ.

(ಸಿ) ತೃತೀಯ ಹಂತ: 18 ರಿಂದ 20 ವರ್ಷಗಳವರೆಗೆ- ಈ ಹಂತದಲ್ಲಿ ಮಿಲಿಟರಿ, ವಿಜ್ಞಾನ ಮತ್ತು ಜಾಮಿಟ್ರಿ ಶಿಕ್ಷಣವನ್ನು ಸ್ತ್ರೀ- ಪುರುಷರೀರ್ವರಿಗೂ ಸಮಾನವಾಗಿ ನೀಡಲಾಗುತ್ತದೆ.

2. **ಉನ್ನತ ಶಿಕ್ಷಣ: ಪ್ಲೇಟೋರವರ ಪ್ರಕಾರ ಉನ್ನತ ಶಿಕ್ಷಣವನ್ನು ಎರಡು ಹಂತಗಳಲ್ಲಿ ನೀಡಲಾಗುತ್ತದೆ.**

(ಎ) ಪ್ರಥಮ ಹಂತ: 20 ರಿಂದ 30 ವರ್ಷಗಳವರೆಗೆ- ಈ ಅವಧಿಯಲ್ಲಿ ಗಣಿತ, ಖಗೋಳ, ತರ್ಕಶಾಸ್ತ್ರ ಹಾಗೂ ಇತರೆ ವಿಜ್ಞಾನಗಳನ್ನು ಬೋಧಿಸಲಾಗುತ್ತದೆ.

(ಬಿ) ದ್ವಿತೀಯ ಹಂತ: 30 ರಿಂದ 35 ವರ್ಷಗಳವರೆಗೆ- 30ನೇ ವಯಸ್ಸಿನಲ್ಲಿ ನಡೆಸಲಾಗುವ ಆಯ್ಕೆ ಪರೀಕ್ಷೆಯಲ್ಲಿ ಅರ್ಹತೆ ಹೊಂದಿದವರಿಗೆ 35 ನೇ ವಯಸ್ಸಿನವರೆಗೆ ತರಬೇತಿ ನೀಡಲಾಗುತ್ತದೆ. ಈ ಅವಧಿಯಲ್ಲಿ ತತ್ವಶಾಸ್ತ್ರ ಮತ್ತು ದ್ವಂದಾತ್ಮಕ ವಿಜ್ಞಾನಗಳನ್ನು ಆಳವಾಗಿ ಬೋಧಿಸಲಾಗುತ್ತದೆ. ತತ್ವಜ್ಞಾನಿ ಅರಸರನ್ನು ಸೃಷ್ಟಿಸುವುದೇ ಈ ಹಂತದಲ್ಲಿ ನೀಡುವ ಶಿಕ್ಷಣದ ಪರಮೋದ್ದೇಶವಾಗಿರುತ್ತದೆ.

3. **ಆಸ್ತಿ ಮತ್ತು ಪತ್ನಿಯರ ಸಮತಾವಾದ: (Communism of Property and Wives)**

ಪ್ಲೇಟೋರವರ ಆಸ್ತಿ ಮತ್ತು ಪತ್ನಿಯರ ಸಮತಾವಾದವು ಆದರ್ಶ ರಾಜ್ಯದ ಮತ್ತೊಂದು ಆಧಾರಸ್ತಂಭವಾಗಿದೆ. ಆಳುವ ವರ್ಗದವರು ತಮ್ಮದೇ ಆದ ಆಸ್ತಿ ಮತ್ತು ಕುಟುಂಬವನ್ನು ಹೊಂದಿದ್ದರೆ, ಸ್ವಾರ್ಥ ಮನೋಭಾವನೆ ಹೆಚ್ಚಾಗಿ ಅಧಿಕಾರ ದುರುಪಯೋಗವಾಗುವ ಸಾಧ್ಯತೆ ಇರುತ್ತದೆ. ಅಂದರೆ ಇವರು ತಮ್ಮ ಆಸ್ತಿ ಮತ್ತು ಕುಟುಂಬಗಳತ್ತ ಗಮನ ಕೇಂದ್ರೀಕರಿಸಿ ರಾಜ್ಯಾಡಳಿತ ಮತ್ತು ರಾಷ್ಟ್ರ ರಕ್ಷಣೆಯನ್ನು ನಿರ್ಲಕ್ಷಿಸುತ್ತಾರೆ. ಆದುದರಿಂದ ಸ್ವಜನಪಕ್ಷಪಾತ, ಸ್ವಾರ್ಥ, ಅಧಿಕಾರ ದುರುಪಯೋಗವನ್ನು ತಡೆಗಟ್ಟಿ ಆಳುವ ವರ್ಗದವರು ತಮ್ಮ ಗಮನವನ್ನು ರಾಜ್ಯಾಡಳಿತ ಹಾಗೂ ರಾಷ್ಟ್ರ ರಕ್ಷಣೆಯಲ್ಲಿ ತೊಡಗುವಂತೆ ಮಾಡಲು ಆಸ್ತಿ ಮತ್ತು ಪತ್ನಿಯರ ಸಮತಾವಾದವನ್ನು ಪ್ರತಿಪಾದಿಸಿದ್ದಾರೆ.

ಆಸ್ತಿಯ ಸಮತಾವಾದ:

ಆಳುವ ವರ್ಗಕ್ಕೆ ಸೇರಿರುವ ಅರಸರು ಮತ್ತು ಸೈನಿಕರು ಭೂಮಿ, ಮನೆ, ಹಣ, ಸಂಪತ್ತು, ಬೆಳ್ಳಿ, ಬಂಗಾರ ಮುಂತಾದ ಯಾವುದೇ ರೀತಿಯ ಆಸ್ತಿಯನ್ನು ಹೊಂದಿರಬಾರದು. ಆಳುವ ವರ್ಗದವರು ಸಾಮಾನ್ಯ ಸೈನಿಕ ಶಿಬಿರಗಳಲ್ಲಿ ವಾಸಿಸಬೇಕು. ಉತ್ಪಾದಕ ವರ್ಗದವರು ಪೂರೈಸುವ ಆಹಾರವನ್ನು ಒಟ್ಟಿಗೆ ಸೇವಿಸಬೇಕು ಎಂದು ಪ್ಲೇಟೋ ವಾದಿಸಿದ್ದಾರೆ.

ಆಳುವ ವರ್ಗದವರು ಖಾಸಗಿ ಆಸ್ತಿಯನ್ನು ಹೊಂದಿದ್ದರೆ ಸ್ವಾರ್ಥ, ಅಸಮಾಧಾನ, ಕ್ರೌರ್ಯ ಮುಂತಾದ ಅವಗುಣಗಳನ್ನು ಬೆಳೆಸುತ್ತದೆ. ಈ ದುರ್ಗುಣಗಳು ಆಳುವ ವರ್ಗದವರ ಸದ್ಗುಣಗಳನ್ನು ನಾಶಗೊಳಿಸುತ್ತವೆ. ಅಲ್ಲದೆ ಆರ್ಥಿಕ ಹಾಗೂ ರಾಜಕೀಯ ಅಧಿಕಾರಗಳೆರಡರ ಕೇಂದ್ರೀಕರಣವು ಭ್ರಷ್ಟಾಚಾರ ಮತ್ತು ಅಧಿಕಾರ ದುರುಪಯೋಗಕ್ಕೆ ದಾರಿ ಮಾಡಿಕೊಡುತ್ತದೆ. ಇದರಿಂದ ಆಡಳಿತದಲ್ಲಿ ಅದಕ್ಷತೆ ಉಂಟಾಗುತ್ತದೆ. ಈ ಎಲ್ಲಾ ದುಷ್ಪರಿಣಾಮಗಳನ್ನು ತಡೆಗಟ್ಟಲು ಪ್ಲೇಟೋರವರು ಆಸ್ತಿಯ ಸಮತಾವಾದವನ್ನು ಬಲವಾಗಿ ಪ್ರತಿಪಾದಿಸಿದ್ದಾರೆ.

ಪತ್ನಿಯರ ಸಮತಾವಾದ:

ಆಳುವ ವರ್ಗದವರು ಸ್ವಂತ ಪತ್ನಿಯರು ಮತ್ತು ಮಕ್ಕಳನ್ನು ಹೊಂದಿರಬಾರದು. ಆದರೆ ಸ್ತ್ರೀಯರೊಂದಿಗೆ ಲೈಂಗಿಕ ಸಂಪರ್ಕವನ್ನು ಹೊಂದುವ ಅವಕಾಶವನ್ನು ಪಡೆಯಬಹುದು. ಶಿಬಿರಗಳಲ್ಲಿ ಸ್ತ್ರೀಪುರುಷರು ಒಟ್ಟಿಗೆ ಜೀವಿಸಬಹುದು. ಇಲ್ಲಿ ಸಾಮೂಹಿಕವಾಗಿ ಪತ್ನಿಯರನ್ನು ಹೊಂದಬಹುದು ಅಥವಾ ನಿರ್ದಿಷ್ಟ ದಿನಗಳಲ್ಲಿ ಅವರೊಂದಿಗೆ ಲೈಂಗಿಕ ಸಂಪರ್ಕವನ್ನು ಹೊಂದಬಹುದು. ಇದರ ಪರಿಣಾಮವಾಗಿ ಜನಿಸಿದ ಮಕ್ಕಳನ್ನು ತಂದೆತಾಯಿಗಳಿಂದ ಬೇರ್ಪಡಿಸಿ ರಾಜ್ಯದ ವಶಕ್ಕೆ ನೀಡಲಾಗುವುದು. ಆಗ ತಮ್ಮ ಮಕ್ಕಳು ಯಾರು ಎಂಬ ಸಾಮಾನ್ಯ ಅರಿವು ಆಳುವ ವರ್ಗಕ್ಕಾಗಲಿ ಅಥವಾ ಮಕ್ಕಳಿಗಾಗಲಿ ಇರುವುದಿಲ್ಲ ಎಂದು ಪ್ಲೇಟೋರವರು ಅಭಿಪ್ರಾಯಪಟ್ಟಿದ್ದಾರೆ.

ಸ್ವಂತ ಕುಟುಂಬವನ್ನು ಹೊಂದಿದ್ದರೆ ಆಳುವ ವರ್ಗದವರು ತಮ್ಮ ಪತ್ನಿ ಮತ್ತು ಮಕ್ಕಳ ಕಡೆಗೆ ಹೆಚ್ಚಿನ ಗಮನ ನೀಡಿ ರಾಜ್ಯಾಡಳಿತ ಹಾಗೂ ರಾಷ್ಟ್ರ ರಕ್ಷಣೆಯನ್ನು ನಿರ್ಲಕ್ಷಿಸುತ್ತಾರೆ. ಅಲ್ಲದೆ ತಮ್ಮ ಕುಟುಂಬದ ಹಿತಾಸಕ್ತಿ ರಕ್ಷಣೆಗಾಗಿ ಅಧಿಕಾರವನ್ನು ದುರುಪಯೋಗಪಡಿಸಿಕೊಳ್ಳುತ್ತಾರೆ ಎಂಬುದು ಪ್ಲೇಟೋರವರ ಅಭಿಪ್ರಾಯವಾಗಿದೆ. ಈ ಸ್ವಾರ್ಥ ಮತ್ತು ಅಧಿಕಾರ ದುರುಪಯೋಗಗಳನ್ನು ತಡೆಗಟ್ಟಿ ಆಳುವ ವರ್ಗದವರ ಗಮನವನ್ನು ಸಂಪೂರ್ಣವಾಗಿ ರಾಜ್ಯಾಡಳಿತ ಹಾಗೂ ರಾಷ್ಟ್ರ ರಕ್ಷಣೆಯತ್ತ ಕೇಂದ್ರೀಕರಿಸುವುದೇ ಪ್ಲೇಟೋರವರ 'ಪತ್ನಿಯರ ಸಮತಾವಾದ' ಪ್ರತಿಪಾದನೆಯ ಉದ್ದೇಶವಾಗಿದೆ.

4. ತತ್ವಜ್ಞಾನಿ ಅರಸರ ಪರಿಕಲ್ಪನೆ (Concept of Philosopher King)

ಪ್ಲೇಟೋರವರ ತತ್ವಜ್ಞಾನಿ ಅರಸರ ಪರಿಕಲ್ಪನೆಯು ಆದರ್ಶ ರಾಜ್ಯದ ನಾಲ್ಕನೇಯ ಆಧಾರಸ್ತಂಭವಾಗಿದೆ. ಇದು ನ್ಯಾಯದ ಪರಿಕಲ್ಪನೆಗೆ ಪೂರಕವಾಗಿದೆ.

ಪ್ಲೇಟೋರವರು ಮಾನವನ ವಿವೇಕಕ್ಕೆ ಪ್ರಾಧಾನ್ಯತೆ ನೀಡಿರುವಂತೆ ರಾಜ್ಯದ ರಚನೆಯಲ್ಲಿ ತತ್ವಜ್ಞಾನಿ ಅರಸರಿಗೂ ಪ್ರಾಧಾನ್ಯತೆ ನೀಡಿದ್ದಾರೆ. ಸದ್ಗುಣವನ್ನು ಪಡೆದಂತಹ ತತ್ವಜ್ಞಾನಿ, ಜ್ಞಾನಿಯೂ, ನಿಸ್ವಾರ್ಥಿಯೂ ಆಗಿರುತ್ತಾನೆ. ಆದುದರಿಂದ ಆದರ್ಶ ರಾಜ್ಯವು ತತ್ವಜ್ಞಾನಿ ಅರಸರಿಂದ ಮಾತ್ರ ಆಳಲ್ಪಡುತ್ತದೆ. ಆಗ ಮಾತ್ರ ರಾಜ್ಯದ ಪ್ರಗತಿ ಸಾಧ್ಯ ಎಂದು ಪ್ಲೇಟೋರವರು ಅಭಿಪ್ರಾಯಪಟ್ಟಿದ್ದಾರೆ.

ಪ್ಲೇಟೋರವರ ಕಾಲದಲ್ಲಿ ಗ್ರೀಕ್ ದೇಶದಲ್ಲಿ ಅಸ್ತಿತ್ವದಲ್ಲಿದ್ದ ರಾಜಕೀಯ ವ್ಯವಸ್ಥೆಯಿಂದ ಪ್ರಜೆಗಳು ನಿರಾಸೆ ಹೊಂದಿದ್ದರು. ಅಂದು ಗ್ರೀಕ್ ನಗರರಾಜ್ಯಗಳಲ್ಲಿ ಇದ್ದಂತಹ ಶ್ರೀಮಂತ ಪ್ರಭುತ್ವ ಹಾಗೂ ಪ್ರಜಾಪ್ರಭುತ್ವಗಳೆರಡೂ ವಿಫಲಗೊಂಡು ಅರಾಜಕತೆ ತಾಂಡವವಾಡುತ್ತಿದ್ದವು. ಅಥೆನ್ಸ್ ನಲ್ಲಿ ಅರಸರನ್ನು ಲಾಟರಿ ಪದ್ಧತಿಯ ಮೂಲಕ ಆಯ್ಕೆ ಮಾಡಲಾಗುತ್ತಿತ್ತು. ಇವರು ಯಾವುದೇ ಜ್ಞಾನ, ತರಬೇತಿ ಹಾಗೂ ಆಡಳಿತ ನಡೆಸುವ ಸಾಮರ್ಥ್ಯವನ್ನು ಹೊಂದಿರಲಿಲ್ಲ. ಆದುದರಿಂದ ಪ್ಲೇಟೋರವರು ಸಮರ್ಥ ಮತ್ತು ದಕ್ಷತೆಯಿಂದ ಆಡಳಿತ ನಡೆಸುವ ಸಾಮರ್ಥ್ಯವನ್ನು ಹೊಂದಿರುವ ತತ್ವಜ್ಞಾನಿ ಅರಸರು ಮಾತ್ರ ರಾಜ್ಯಾಡಳಿತವನ್ನು ನಡೆಸಬೇಕು ಎಂದು ಬಲವಾಗಿ ವಾದಿಸಿದರು.

ಒಟ್ಟಿನಲ್ಲಿ ತತ್ವಜ್ಞಾನಿ ಅರಸರು ಉನ್ನತ ಅಧಿಕಾರವಾಣಿಯಿಂದ ಮಾತ್ರವಲ್ಲದೆ ತಮ್ಮ ಆಧ್ಯಾತ್ಮಿಕ ಗುಣಗಳಿಂದಲೂ ಪ್ರಜೆಗಳನ್ನು ಆಳುತ್ತಾರೆ. ಅವರು ಯಶಸ್ವಿಯಾಗಲು ನ್ಯಾಯಾಧಾರಿತ ಸಮಾಜ ಮತ್ತು ಯೋಗ್ಯವಂತ ಪ್ರಜೆಗಳಿರಬೇಕು ಎಂದು ಪ್ಲೇಟೋ ಹೇಳಿದ್ದಾರೆ. ಅಲ್ಲದೆ ರಾಜ್ಯ ಮತ್ತು ಪ್ರಜೆಗಳ ನಡುವಿನ ಸಂಬಂಧವನ್ನು ವೈದ್ಯ ಮತ್ತು ರೋಗಿಯ ನಡುವಿನ ಸಂಬಂಧಕ್ಕೆ ಹೋಲಿಸಿದ್ದಾರೆ.

ತತ್ವಜ್ಞಾನಿ ಅರಸರ ಗುಣಲಕ್ಷಣಗಳು:

1. ತತ್ವಜ್ಞಾನಿ ಅರಸನು ಸತ್ಯನಿಷ್ಠೆ ಮತ್ತು ಕಾರ್ಯತತ್ಪರತೆಯುಳ್ಳವನಾಗಿರಬೇಕು.
2. ತನ್ನ ನಡೆ-ನುಡಿ, ಆಚಾರ-ವಿಚಾರ ಮತ್ತು ವ್ಯವಹಾರಗಳಲ್ಲಿ ವಾಸ್ತವತೆಯಿಂದ ವರ್ತಿಸಬೇಕು.
3. ತತ್ವಜ್ಞಾನಿ ಅರಸನು ಸ್ವಯಂ-ನಿಗ್ರಹ (Self control) ಹೊಂದಿದವನಾಗಿರಬೇಕು.
4. ಸಾಮಾಜಿಕ ಹಿತಾಸಕ್ತಿಗೆ ಪೂರಕವಾದ ಆಡಳಿತ ನಡೆಸುವಂತವನಾಗಿರಬೇಕು.
5. ತತ್ವಜ್ಞಾನಿ ಅರಸನು 35 ವರ್ಷಗಳ ದೀರ್ಘಾವಧಿಯ ಕಠಿಣ ಶಿಕ್ಷಣ ಮತ್ತು ತರಬೇತಿಯನ್ನು ಪಡೆದವನಾಗಿರುತ್ತಾನೆ. ಇಂತಹ ಶಿಕ್ಷಣದಿಂದ ರೂಪುಗೊಂಡು ಪುಟವಿಟ್ಟ ಚಿನ್ನದಂತಿರುವ ಅರಸನು ರಾಜ್ಯಕ್ಕೆ ನಿಸ್ವಾರ್ಥ ಸೇವೆ ಸಲ್ಲಿಸುತ್ತಾನೆ.

ಪ್ಲೇಟೋರವರ ಕಲ್ಪನೆಯ ತತ್ವಜ್ಞಾನಿ ಅರಸನು ಸಮಾಜದ 'ಒಳಿತು ಮತ್ತು ಮಿಗಿಲಾದ ಗುಣಗಳ ಪ್ರತೀಕ.' ಆದ್ದರಿಂದ ಅವನ ದೇಶಭಕ್ತಿ ಹಾಗೂ ಪ್ರಜಾ ಹಿತಾಸಕ್ತಿಗೆ ಧಕ್ಕೆ ಬಾರದಂತೆ ತಡೆಯಲು ಆಸ್ತಿ ಮತ್ತು ಕುಟುಂಬದಿಂದ ದೂರವಿರಿಸಿದ್ದಾರೆ.

ಪ್ಲೇಟೋರವರು ತತ್ವಜ್ಞಾನಿ ಅರಸನಿಗೆ ಅಪರಿಮಿತ ಅಧಿಕಾರಗಳನ್ನು ನೀಡಿದ್ದರೂ ಕೆಲವು ನಿರ್ಬಂಧಗಳನ್ನು ವಿಧಿಸಿದ್ದಾರೆ. ಅವುಗಳೆಂದರೆ:

1. ತತ್ವಜ್ಞಾನಿ ಅರಸನು ಸಮಾಜ ಅಥವಾ ಸಂವಿಧಾನದ ಮೂಲ ನಿಯಮಗಳನ್ನು ಗೌರವಿಸಬೇಕು.
2. ಅತಿಯಾದ ಸಂಪತ್ತು ಮತ್ತು ಆಸ್ತಿ ರಾಜ್ಯವನ್ನು ಪ್ರವೇಶಿಸದಂತೆ ನಿಯಂತ್ರಿಸಬೇಕು.
3. ರಾಜ್ಯದ ಗಾತ್ರವು ರಾಜ್ಯದ ಏಕತೆ ಮತ್ತು ಸ್ವಾವಲಂಬನೆಗೆ ಪೂರಕವಾಗಿರುವಂತೆ ನೋಡಿಕೊಳ್ಳಬೇಕು.
4. ಶಿಕ್ಷಣ ವ್ಯವಸ್ಥೆಯಲ್ಲಿ ಯಾವುದೇ ಬದಲಾವಣೆಯಾಗದಂತೆ ಎಚ್ಚರಿಕೆ ವಹಿಸಬೇಕು.

5. ರಾಜ್ಯದ ಪ್ರತಿಯೊಬ್ಬ ಪ್ರಜೆಯೂ ತನ್ನ ಕರ್ತವ್ಯವನ್ನು ಸ್ವಯಂಪ್ರೇರಿತರಾಗಿ ನಿರ್ವಹಿಸುವಂತೆ ನೋಡಿಕೊಳ್ಳಬೇಕು.

ಹೀಗೆ ಪ್ಲೇಟೋರವರು ತನ್ನ ಕಲ್ಪನೆಯ ತತ್ವಜ್ಞಾನಿ ಅರಸರನ್ನು ಮೂಲಭೂತ ಸಾಮಾಜಿಕ ವ್ಯವಸ್ಥೆಯ ಸೇವಕನನ್ನಾಗಿಸಿದ್ದಾರೆ. ಅಲ್ಲದೆ ತತ್ವಜ್ಞಾನಿ ಅರಸರನ್ನು 'ರಾಜ್ಯದ ಹಡಗಿನ ನಾವಿಕ' ಎಂದು ಕರೆದಿದ್ದಾರೆ.

ಅಭ್ಯಾಸ

I. ಒಂದೊಂದು ವಾಕ್ಯದಲ್ಲಿ ಉತ್ತರಿಸಿ:

. 'ಬುದ್ಧಿವಂತ ತ್ರಿವಳಿಗಳು' ಎಂದು ಯಾರನ್ನು ಕರೆಯುತ್ತಾರೆ?

. ಪ್ಲೇಟೋರವರು ಯಾವಾಗ ಜನಿಸಿದರು?

. ಪ್ಲೇಟೋರವರ ಮೂಲ ಹೆಸರು ಯಾವುದು?

. ಪ್ಲೇಟೋರವರ ಗುರು ಯಾರು?

. ಪ್ಲೇಟೋರವರು ಸ್ಥಾಪಿಸಿದ ಶಿಕ್ಷಣ ಸಂಸ್ಥೆಯ ಹೆಸರೇನು?

. ಪ್ಲೇಟೋರವರು 'ರಾಜ್ಯದ ಹಡಗಿನ ನಾವಿಕ' ಎಂದು ಯಾರನ್ನು ಕರೆದಿದ್ದಾರೆ?

. ರಾಜ ಮತ್ತು ಪ್ರಜೆಗಳ ನಡುವಿನ ಸಂಬಂಧವನ್ನು ಪ್ಲೇಟೋ ಯಾರಿಗೆ ಹೋಲಿಸಿದ್ದಾರೆ?

II. ಖಾಲಿ ಬಿಟ್ಟ ಸ್ಥಳಗಳಲ್ಲಿ ಸರಿಯಾದ ಉತ್ತರಗಳನ್ನು ಬರೆಯಿರಿ:

1. ಪ್ಲೇಟೋರವರು _______ ಎಂಬಲ್ಲಿ ಜನಿಸಿದರು.
2. ಪ್ಲೇಟೋರವರು _______ ಎಂಬ ನಗರರಾಜ್ಯಕ್ಕೆ ಸೇರಿದವರು.
3. ಪ್ಲೇಟೋರವರ ಮೇರು ಕೃತಿ _______ .
4. ಪ್ಲೇಟೋರವರು ತತ್ವಜ್ಞಾನಿ ಅರಸರನ್ನು _______ ವ್ಯವಸ್ಥೆಯ ಸೇವಕನನ್ನಾಗಿಸಿದ್ದಾರೆ.

III. ಎರಡು ಅಥವಾ ಮೂರು ವಾಕ್ಯಗಳಲ್ಲಿ ಉತ್ತರಿಸಿ:

1. ಪ್ಲೇಟೋರವರ ಪ್ರಕಾರ 'ನ್ಯಾಯ' ಎಂದರೇನು ?

2. ಪ್ಲೇಟೋರವರ ನ್ಯಾಯವು ಆಧರಿಸಿರುವ ಮೂರು ಮೂಲಭೂತ ತತ್ವಗಳನ್ನು ತಿಳಿಸಿ ?
3. ಪ್ಲೇಟೋರವರ ಸಮಾಜದ ವರ್ಗೀಕರಣವನ್ನು ತಿಳಿಸಿ ?
4. ಪ್ಲೇಟೋರವರ ಮೇಲೆ ಪ್ರಭಾವ ಬೀರಿದ ಎರಡು ಪ್ರಮುಖ ಅಂಶಗಳಾವುವು ?
5. ಪ್ಲೇಟೋರವರ ಪ್ರಮುಖ ಕೃತಿಗಳನ್ನು ಹೆಸರಿಸಿ.

IV. ಐದು ಅಥವಾ ಆರು ವಾಕ್ಯಗಳಲ್ಲಿ ಉತ್ತರಿಸಿ:

1. ಪ್ಲೇಟೋರವರ ಜೀವನವನ್ನು ಕುರಿತು ಬರೆಯಿರಿ.
2. ಪ್ಲೇಟೋರವರ ಶಿಕ್ಷಣ ಪದ್ಧತಿಯ ಲಕ್ಷಣಗಳನ್ನು ವಿವರಿಸಿ.
3. ತತ್ವಜ್ಞಾನಿ ಅರಸರ ಗುಣಲಕ್ಷಣಗಳನ್ನು ತಿಳಿಸಿ.
4. ಪ್ಲೇಟೋರವರ ಆಸ್ತಿ ಮತ್ತು ಪತ್ನಿಯ ಸಮತಾವಾದವನ್ನು ವಿವರಿಸಿ.

V. ಎಂಟು ಅಥವಾ ಹತ್ತು ವಾಕ್ಯಗಳಲ್ಲಿ ಉತ್ತರಿಸಿ:

1. ಪ್ಲೇಟೋರವರ 'ಆದರ್ಶ ರಾಜ್ಯ'ದ ಪರಿಕಲ್ಪನೆಯನ್ನು ಚರ್ಚಿಸಿ.

ಸಲಹಾತ್ಮಕ ಚಟುವಟಿಕೆಗಳು:

1. ಪ್ಲೇಟೋರವರ ಜೀವಿತಾವಧಿಯ ಗ್ರೀಕ್ ಇತಿಹಾಸವನ್ನು ಓದಿ ತಿಳಿಯಿರಿ.
2. ಪ್ಲೇಟೋರವರ 'ಆದರ್ಶ ರಾಜ್ಯ'ದ ಪರಿಕಲ್ಪನೆಯ ಮುಖ್ಯಾಂಶಗಳನ್ನು ಪಟ್ಟಿಮಾಡಿ.

ಅಧ್ಯಾಯ- 2 ಅರಿಸ್ಟಾಟಲ್ (Aristotle) (ಕ್ರಿ, ಪೂ. 384- 322)

ಕಲಿಕಾ ಉದ್ದೇಶಗಳು:

1. ರಾಜ್ಯಶಾಸ್ತ್ರದ ಪಿತಾಮಹ ಅರಿಸ್ಟಾಟಲ್‌ರವರ ಜೀವನ ಮತ್ತು ಕೃತಿಗಳ ಬಗ್ಗೆ ತಿಳಿಯುವುದು.
2. ಅರಿಸ್ಟಾಟಲ್‌ರವರ ಸರ್ಕಾರದ ವರ್ಗೀಕರಣವನ್ನು ಗುರುತಿಸುವುದು.
3. ಪ್ರಚಲಿತ ಸನ್ನಿವೇಶದಲ್ಲಿ ಅರಿಸ್ಟಾಟಲ್‌ರವರ ರಾಜಕೀಯ ಚಿಂತನೆಯ ಮಹತ್ವವನ್ನು ಅರಿಯುವುದು.
4. ಶುದ್ಧ ಮತ್ತು ಅಶುದ್ಧ ಸರ್ಕಾರಗಳ ವ್ಯತ್ಯಾಸವನ್ನು ಗುರ್ತಿಸುವುದು.

"ಅರಿಸ್ಟಾಟಲ್‌ರವರು ಪ್ರಪಂಚದ ಮಹಾನ್ ವಿಶ್ವಕೋಶಜ್ಞರಲ್ಲಿ ಮೊಟ್ಟಮೊದಲಿಗರು"

ಕ್ಯಾಟ್ಲಿಯಾ.


ಪೀಠಿಕೆ:

'ಪ್ಲೇಟೋರವರು ಆದರ್ಶವಾದಿಯಾಗಿದ್ದರೆ ಅರಿಸ್ಟಾಟಲ್ ನೈಜವಾದಿಗಳಾಗಿದ್ದರು'. ಅರಿಸ್ಟಾಟಲ್ ಪ್ಲೇಟೋರವರ ಪರಮ ಶಿಷ್ಯ. ವಿಶ್ವದ ಮಹಾನ್ ರಾಜಕೀಯ ಚಿಂತಕರಲ್ಲಿ ಅಗ್ರಗಣ್ಯರು. ಇವರ ಅಸಾಮಾನ್ಯ ಜ್ಞಾನಕೋಶ ಮತ್ತು ಪಾಂಡಿತ್ಯ ಅಗಾಧವಾದುದು.

ಅರಿಸ್ಟಾಟಲ್ ತಮ್ಮ ಚಿಂತನೆಯಲ್ಲಿ ವಿಶ್ಲೇಷಣಾತ್ಮಕ ಹಾಗೂ ವೈಜ್ಞಾನಿಕ ಮನೋಭಾವನೆಗಳನ್ನು ಅಳವಡಿಸಿಕೊಂಡಿದ್ದರು. ರಾಜ್ಯಶಾಸ್ತ್ರವನ್ನು ಪ್ರಥಮ ಬಾರಿಗೆ ವೈಜ್ಞಾನಿಕವಾಗಿ ಅಧ್ಯಯನ ಮಾಡಿದ್ದರು. ಆದುದರಿಂದ ಅರಿಸ್ಟಾಟಲ್‌ರವರನ್ನು 'ರಾಜ್ಯಶಾಸ್ತ್ರದ ಪಿತಾಮಹ' ಎಂದು ಕರೆಯಲಾಗಿದೆ. ಅರಿಸ್ಟಾಟಲ್‌ರವರು ತಮ್ಮ ಅಪಾರವಾದ ಜ್ಞಾನಸಂಪತ್ತಿನಿಂದ ತನ್ನ ನಂತರದ ಚಿಂತಕರ ಮೇಲೂ ಅಚ್ಚಳಿಯದ ಪ್ರಭಾವ ಬೀರಿದ್ದಾರೆ. ಇವರು ಜೀವವಿಜ್ಞಾನ, ಮನಃಶಾಸ್ತ್ರ, ತರ್ಕಶಾಸ್ತ್ರ, ನೀತಿಶಾಸ್ತ್ರ, ರಾಜ್ಯಶಾಸ್ತ್ರ, ಅರ್ಥಶಾಸ್ತ್ರ, ಕಾವ್ಯ, ಸೌಂದರ್ಯ ಮೀಮಾಂಸೆ ಮುಂತಾದ ವಿಷಯಗಳನ್ನು ಕುರಿತು ಉದಾತ್ತ ಕೃತಿಗಳನ್ನು ರಚಿಸಿದ್ದಾರೆ. ಆದುದರಿಂದ ಅರಿಸ್ಟಾಟಲ್‌ರನ್ನು ಚೈತನ್ಯಶೀಲ ವಿಶ್ವವಿದ್ಯಾಲಯ' ಎಂದು ಕರೆಯಲಾಗಿದೆ. ಪ್ರಖ್ಯಾತ ಕವಿ ಕೂಲ್‌ರಿಡ್ಜ್ "ಎಲ್ಲಾ ಚಿಂತಕರೂ ಪ್ಲೇಟೋರವರ ಇಲ್ಲವೇ ಅರಿಸ್ಟಾಟಲ್‌ರವರ ಅನುಯಾಯಿಗಳಾಗಿರುತ್ತಾರೆ" ಎಂದು ಉದ್ಗಾರಿಸಿರುವುದು ಸಮಂಜಸವಾಗಿದೆ.

ತಮ್ಮ ಬದುಕಿನ 62 ವರ್ಷಗಳಲ್ಲಿ ಅಗಾಧ ಸಾಧನೆಗೈದ ಅರಿಸ್ಟಾಟಲ್ ಉದಾತ್ತ ಚಿಂತನೆಯ ಮೂಲಕ ಇಂದಿಗೂ ಅಜರಾಮರರಾಗಿದ್ದಾರೆ. ಆದ್ದರಿಂದಲೇ ಇವರ ವೈವಿಧ್ಯಮಯ ಜೀವನ ಸೃಜನಶೀಲ ಚಿಂತಕರಾಗಲು ಪ್ರೇರಣೇಯವಾದುದು.

2.1 ಜೀವನ ಚಿತ್ರಣ:



ಅರಿಸ್ಟಾಟಲ್ ಕ್ರಿ. ಪೂ. 384 ರಲ್ಲಿ ಗ್ರೀಸ್‌ನ ಸ್ಟಾಯಿಗ್ರಾ (Staigra) ಎಂಬ ನಗರದಲ್ಲಿ ಜನಿಸಿದರು. ಇವರ ತಂದೆ ನಿಕೋಮ್ಯಾಕಸ್ (Nicomachs) ತಾಯಿ ಫೆಸ್ಟಿಸ್ (Phoestics). ಮ್ಯಾಸಿಡೋನಿಯಾದಲ್ಲಿ ಇವರ ತಂದೆ ರಾಜವೈದ್ಯರಾಗಿದ್ದರಿಂದ ಅರಿಸ್ಟಾಟಲ್‌ರಿಗೆ ರಾಜಮನೆತನದೊಂದಿಗಿನ ನಿಕಟ ಸಂಪರ್ಕದ ಜೊತೆಗೆ ವೈದ್ಯಕೀಯ ವಿಜ್ಞಾನದಲ್ಲಿ ಅಪಾರ ಪಾಂಡಿತ್ಯವನ್ನು ಪಡೆಯಲು ಸಾಧ್ಯವಾಯಿತು.

ಅರಿಸ್ಟಾಟಲ್ ಕ್ರಿ. ಪೂ. 367 ರಲ್ಲಿ ತತ್ವಶಾಸ್ತ್ರದ ಅಧ್ಯಯನಕ್ಕಾಗಿ ಪ್ಲೇಟೋರವರ 'ಅಕಾಡೆಮಿ' ಯನ್ನು ಸೇರಿದರು. ಬಹಳ ಬೇಗ ಅವರ ನೆಚ್ಚಿನ ಶಿಷ್ಯರಾಗಿ, ಅನುಯಾಯಿಯಾಗಿ ಅವರ ನಿಧನದವರೆಗೂ ಅಕಾಡೆಮಿಯಲ್ಲಿಯೇ ಉಳಿದರು. ಪ್ಲೇಟೋರವರೊಂದಿಗಿನ ದೀರ್ಘಕಾಲದ ಒಡನಾಟವೂ ಅರಿಸ್ಟಾಟಲ್‌ರ ಮೇಲೆ ಆಳವಾದ ಪರಿಣಾಮವನ್ನು ಬೀರಿತು.

ಪ್ಲೇಟೋರವರ ಮರಣಾನಂತರ ಅರಿಸ್ಟಾಟಲ್‌ರವರು ಅಥೆನ್ಸ್ ಅನ್ನು ಬಿಟ್ಟು ವಿವಿಧ ನಗರರಾಜ್ಯಗಳಲ್ಲಿ ಪ್ರವಾಸ ಮಾಡಿ ಅಲ್ಲಿಯ ರಾಜಕೀಯ ವ್ಯವಸ್ಥೆಗಳನ್ನು ಅಧ್ಯಯನ ಮಾಡಿದರು.

ಕ್ರಿ. ಪೂ. 335 ರಲ್ಲಿ ಅರಿಸ್ಟಾಟಲ್‌ರವರು ತಮ್ಮ ಚಿಂತನೆಯನ್ನು ಪ್ರಚುರಪಡಿಸಲು 'ಲೈಸಿಯಂ' ಎಂಬ ಶಾಲೆಯನ್ನು ಆರಂಭಿಸಿದರು. ಇದು ಬಹಳ ಬೇಗ ಶೈಕ್ಷಣಿಕ ಮತ್ತು ಸಂಶೋಧನಾ ಕೇಂದ್ರವಾಗಿ ಪರಿವರ್ತನೆಗೊಂಡಿತು. ಇದು ಮುಂದೆ ಪ್ರಸಿದ್ಧ ವಿಶ್ವವಿದ್ಯಾನಿಲಯವಾಗಿಯೂ ಮಾರ್ಪಾಡಾಯಿತು.

ಅರಿಸ್ಟಾಟಲ್‌ರವರು ಅಲೆಗ್ಸಾಂಡರ್ನ ಮರಣಾನಂತರ ಅಥೆನ್ಸ್ ಗಲಭೆಗೆ ತುತ್ತಾದ ಕಾರಣ ಅದನ್ನು ತ್ಯಜಿಸಬೇಕಾಯಿತು. ನಂತರ ಛಾಲ್ಸೀಸ್ ನಗರಕ್ಕೆ ಪ್ರಯಾಣ ಮಾಡಿ ಕ್ರಿ. ಪೂ. 322 ರಲ್ಲಿ ನಿಧನ ಹೊಂದಿದರು.

2.2 ಅರಿಸ್ಟಾಟಲ್‌ರವರ ಕೃತಿಗಳು: (Works)

'ಆಡುಮುಟ್ಟದ ಸೊಪ್ಪಿಲ್ಲ' ಎಂಬ ನಾಣ್ಣುಡಿಯಂತೆ ಅರಿಸ್ಟಾಟಲ್‌ರವರು ಅಧ್ಯಯನ ಮಾಡದಿರುವ ವಿಷಯವೇ ಇಲ್ಲ. ಮಾನವ ಸಂಬಂಧಿತ ಎಲ್ಲಾ ವಿಷಯಗಳಲ್ಲೂ ಅಪಾರವಾದ ಪಾಂಡಿತ್ಯ ಮತ್ತು ಪ್ರಬುದ್ಧತೆಯನ್ನು ಪಡೆದಿದ್ದರು. ಅರಿಸ್ಟಾಟಲ್ ಜಗತ್ತಿನ ಶ್ರೇಷ್ಠ ಚಿಂತಕರಲ್ಲಿ ಒಬ್ಬರಾಗಿದ್ದಾರೆ. ಅವರ ಪ್ರಮುಖ ಕೃತಿಗಳೆಂದರೆ:

1. ಕಾನ್‌ಸ್ಟಿಟ್ಯೂಷನ್
2. ಆನ್ ಮಾನಾರ್ಕಿ
3. ಅಲೆಕ್ಸಾಂಡರ್
4. ಎಥಿಕ್ಸ್
5. ಲಾಜಿಕ್
6. ಮೆಟಾ ಫಿಜಿಕ್ಸ್
7. ಆನ್ ಫಿಲಾಸಫಿ
8. ನ್ಯಾಚುರಲ್ ಹಿಸ್ಟರಿ
9. ದಿ ಪಾಲಿಟಿಕ್ಸ್
10. ಅಥೆನ್ಸ್ ಕಾನ್‌ಸ್ಟಿಟ್ಯೂಷನ್

11. ಪೂಯಟಿಕ್ಸ್

12. ದಿ ಹಿಸ್ಟರಿ ಆಫ್ ಅನಿಮಲ್ಸ್

13. ಆರ್ಗನಾನ್

ಅರಿಸ್ಟಾಟಲ್‌ರ ಕೃತಿಗಳಲ್ಲಿ 'ದಿ ಪಾಲಿಟಿಕ್ಸ್' ಎಂಬುದು ಅತಿ ಶ್ರೇಷ್ಠ ಕೃತಿ. ಅದು ಇಂದಿಗೂ ರಾಜ್ಯಶಾಸ್ತ್ರದ ಅಮೋಘ ಕೃತಿಯಾಗಿದ್ದು, ಇದು ಅರಿಸ್ಟಾಟಲ್‌ರಿಗೆ 'ರಾಜ್ಯಶಾಸ್ತ್ರದ ಪಿತಾಮಹ' ಎಂಬ ಬಿರುದನ್ನು ತಂದುಕೊಟ್ಟಿದೆ. 'ದಿ ಪಾಲಿಟಿಕ್ಸ್' ಸಂವಾದ ರೂಪದಲ್ಲಿರುವ ಕೃತಿಯಾಗಿದೆ. 158 ಸಂವಿಧಾನಗಳ ಅಧ್ಯಯನದ ಫಲವಾಗಿ ಈ ಕೃತಿಯನ್ನು ರಚಿಸಿದ್ದಾರೆ. ಇದರಲ್ಲಿ ನಗರರಾಜ್ಯ ರಾಜ್ಯದ ಕಾರ್ಯಗಳು, ಪೌರತ್ವ, ಉತ್ತಮ ರಾಜ್ಯ, ಗುಲಾಮಗಿರಿ, ಕುಟುಂಬ, ಆಸ್ತಿ, ಕ್ರಾಂತಿ ಮುಂತಾದ ವಿಷಯಗಳ ಬಗ್ಗೆ ಸುದೀರ್ಘವಾಗಿ ಚರ್ಚಿಸಿದ್ದಾರೆ.

ಅರಿಸ್ಟಾಟಲ್‌ರವರು ರಾಜ್ಯಶಾಸ್ತ್ರವನ್ನು ಒಂದು 'ಅತ್ಯುನ್ನತ ವಿಜ್ಞಾನ' ಎಂದು ಕರೆದಿದ್ದಾರೆ. ಮಾನವ ಸಮಾಜಜೀವಿ ಮತ್ತು ಸಂಘಜೀವಿ. ಅಂತೆಯೇ ರಾಜಕೀಯಜೀವಿಯೂ ಹೌದು. ಸಮಾಜದಲ್ಲಿ ಜೀವಿಸಲಾಗದ ಮಾನವ ದೇವರಾಗಿರಬೇಕು ಇಲ್ಲವೆ ಮೃಗವಾಗಿರಬೇಕು ಎಂದಿದ್ದಾರೆ.

ಅರಿಸ್ಟಾಟಲ್‌ರವರ ಪ್ರಕಾರ "ಮಾನವನ ಜೀವನದ ಅವಶ್ಯಕತೆಗಳನ್ನು ಪೂರೈಸಿಕೊಳ್ಳಲು ರಾಜ್ಯ ಹುಟ್ಟಿದೆ ಮತ್ತು ಅದು ಅವನ ಉತ್ತಮ ಜೀವನಕ್ಕಾಗಿ ಮುಂದುವರಿಯುತ್ತಿದೆ". ರಾಜ್ಯವು ನೈಸರ್ಗಿಕವಾಗಿ ಬೆಳೆದು ಬಂದ ಸಂಸ್ಥೆಯಾಗಿದೆ.

ಕುಟುಂಬ ವಿಸ್ತರಣೆಯಿಂದ ಗ್ರಾಮ, ಗ್ರಾಮಗಳ ವಿಸ್ತರಣೆಯಿಂದ ರಾಜ್ಯ ಸೃಷ್ಟಿಯಾಗಿದೆ. ರಾಜ್ಯವು ಸಮಾಜದಲ್ಲಿರುವ ಎಲ್ಲಾ ಸಂಘಸಂಸ್ಥೆಗಳಿಗಿಂತ ಶ್ರೇಷ್ಠವಾದುದಾಗಿದೆ. ಮಾನವ ಕೇವಲ ಸಾಮಾಜಿಕ ಜೀವಿ ಮಾತ್ರವಲ್ಲ ರಾಜಕೀಯ ಜೀವಿಯೂ ಆಗಿರುವುದರಿಂದ ರಾಜ್ಯ ಸೃಷ್ಟಿಯಾಯಿತು. ಮಾನವನನ್ನು ಸ್ವಯಂಪರಿಪೂರ್ಣನನ್ನಾಗಿ ಮಾಡಿ ಆತನು ಸುಖ, ಸಂತೋಷ ಹಾಗೂ ಗೌರವಯುತವಾದ ಜೀವನ ನಡೆಸುವ ಉದ್ದೇಶದಿಂದ ಸಂಘಟಿತವಾಗಿರುವುದೇ ರಾಜ್ಯ, ರಾಜ್ಯವು ವ್ಯಕ್ತಿಗಳ ಸಂರಕ್ಷಣೆಯ ಜೊತೆಗೆ ಕಲ್ಯಾಣ ಕಾರ್ಯಗಳನ್ನು ಕೈಗೊಳ್ಳಬೇಕು. ಯೋಗ್ಯ ಶಿಕ್ಷಣ ಮತ್ತು ತರಬೇತಿ ನೀಡಿ ಯುವಕರನ್ನು ರಾಜ್ಯದ ಶ್ರೇಷ್ಟ ಪ್ರಜೆಗಳನ್ನಾಗಿ ರೂಪಿಸಬೇಕು ಎಂಬುದು ಅರಿಸ್ಟಾಟಲ್‌ರವರ ಅಭಿಮತವಾಗಿದೆ. ಹೀಗೆ ಅರಿಸ್ಟಾಟಲ್‌ರವರು ರಾಜ್ಯಕ್ಕೆ ಅತಿಯಾದ ಪ್ರಾಮುಖ್ಯತೆ ನೀಡಿ, ರಾಜ್ಯವನ್ನು ಒಂದು 'ಶ್ರೇಷ್ಠ ಸಂಸ್ಥೆ' ಎಂದು ಕರೆದಿದ್ದಾರೆ.

2.3 ಸರ್ಕಾರದ ವರ್ಗೀಕರಣ: (Classification of Government)

ಸರ್ಕಾರದ ವರ್ಗೀಕರಣವು ಅರಿಸ್ಟಾಟಲ್‌ರವರು ರಾಜ್ಯಶಾಸ್ತ್ರಕ್ಕೆ ನೀಡಿರುವ ಅತ್ಯಮೂಲ್ಯ ಕೊಡುಗೆಯಾಗಿದೆ. ಇವರ ಸರ್ಕಾರದ ವರ್ಗೀಕರಣವು ಇಂದಿಗೂ ಪ್ರಸ್ತುತವೆನಿಸಿದೆ.

ಅರಿಸ್ಟಾಟಲ್‌ರವರು ರಾಜ್ಯ, ಸಂವಿಧಾನ, ಸರ್ಕಾರ ಎಂಬ ಪದಗಳನ್ನು ಒಂದೇ ಅರ್ಥದಲ್ಲಿ ಬಳಸಿದ್ದಾರೆ. ಇವರು ವಿಶ್ವದ 158 ಸಂವಿಧಾನಗಳನ್ನು ತೌಲನಿಕವಾಗಿ ಅಧ್ಯಯನ ಮಾಡಿ ಸರ್ಕಾರವನ್ನು ವರ್ಗೀಕರಿಸಿದ್ದಾರೆ.

ತಮ್ಮ ಕಾಲದ ಕ್ರಿಟ್, ಕಾರ್ಥೇಜ್, ಸ್ಪಾರ್ಟಾ, ಅಥೇನ್ಸ್ ಮುಂತಾದ ನಗರರಾಜ್ಯಗಳ ಸಂವಿಧಾನಗಳನ್ನು ಸಮಗ್ರವಾಗಿ ಅಧ್ಯಯನ ಮಾಡಿದ ನಂತರ ಅಲ್ಲಿನ ನ್ಯೂನತೆಗಳನ್ನು ವಿಶ್ಲೇಷಿಸಿ ಅವುಗಳಿಗೆ ಯಾವ ಸರ್ಕಾರ ಸೂಕ್ತ ಎಂಬುದಾಗಿ ಸಲಹೆಗಳನ್ನು ನೀಡಿದ್ದಾರೆ.

ಅರಿಸ್ಟಾಟಲ್‌ರವರ ಪ್ರಕಾರ 'ಕಾನೂನು ಮತ್ತು ನ್ಯಾಯ ಸಮುದಾಯ ಸಾಮೂಹಿಕ ತಿಳುವಳಿಕೆಯ ಫಲ.' ಒಂದು ಉತ್ತಮ ಸಂವಿಧಾನವು ಮೂರು ಪ್ರಮುಖ ಅಂಶಗಳನ್ನು ಒಳಗೊಂಡಿರುತ್ತದೆ. ಅವುಗಳೆಂದರೆ:

1. ಜನರ ಗುಣಮಟ್ಟ
2. ಜನರ ಆಸೆ ಮತ್ತು ಆಕಾಂಕ್ಷೆಗಳು
3. ರಾಜ್ಯದ ಗುರಿ ಮತ್ತು ಉದ್ದೇಶಗಳು

ಅರಿಸ್ಟಾಟಲ್‌ರವರ ಪ್ರಕಾರ ಸರ್ಕಾರದ ವರ್ಗೀಕರಣವು ಗುಣ ಮತ್ತು ಗಾತ್ರಗಳೆರಡನ್ನು ಅವಲಂಬಿಸಿದೆ. ರಾಜಕೀಯ ಅಧಿಕಾರವನ್ನು ಎಷ್ಟು ಜನ ಅಂದರೆ ಒಬ್ಬರು, ಕೆಲವರು ಅಥವಾ ಹಲವರು ಅನುಭವಿಸುತ್ತಾರೆ ಎಂದು ರಾಜ್ಯದ ಸ್ವರೂಪವನ್ನು ಸಂಖ್ಯಾತ್ಮಕವಾಗಿ ತೋರಿಸಿದರೆ ರಾಜ್ಯದ ಉದ್ದೇಶ ಹಾಗೂ ಸರ್ಕಾರದ ಸ್ಪೂರ್ತಿಯನ್ನು ಗುಣಾತ್ಮಕವಾಗಿ ವಿಶ್ಲೇಷಿಸುತ್ತದೆ.

ಒಂದು ರಾಜ್ಯ ಅಥವಾ ಸರ್ಕಾರವು ಸಾರ್ವಜನಿಕ ಹಿತಾಸಕ್ತಿಗಾಗಿ ಕಾರ್ಯಕ್ರಮಗಳನ್ನು ರೂಪಿಸಿ ಜನತೆಯ ಕ್ಷೇಮಾಭ್ಯುದಯವನ್ನೇ ಗುರಿಯಾಗಿರಿಸಿಕೊಂಡಿರುವ ಸರ್ಕಾರವನ್ನು ಶುದ್ಧ ಸರ್ಕಾರ (Pure Govt) ಎಂದು ಕರೆದಿದ್ದಾರೆ.

ಒಂದು ರಾಜ್ಯ ಅಥವಾ ಸರ್ಕಾರವು ಒಂದು ನಿರ್ದಿಷ್ಟ ವರ್ಗದ ಅಥವಾ ಗುಂಪಿನ ವೈಯಕ್ತಿಕ ಹಿತಾಸಕ್ತಿಗಳಿಗಾಗಿ ಕಾರ್ಯಕ್ರಮಗಳನ್ನು ರೂಪಿಸಿ ಸಾರ್ವಜನಿಕ ಹಿತಾಸಕ್ತಿಯನ್ನು ಕಡೆಗಣಿಸುವ ಸರ್ಕಾರವನ್ನು ಅಶುದ್ಧ ಸರ್ಕಾರ (Perverted Govt.) ಎಂದು ಕರೆದಿದ್ದಾರೆ.

ಅರಿಸ್ಟಾಟಲ್‌ರವರು ಈ ಕೆಳಕಂಡಂತೆ ಗುಣ ಮತ್ತು ಗಾತ್ರವನ್ನು ಆಧರಿಸಿ ಸರ್ಕಾರವನ್ನು 6 ವರ್ಗಗಳಾಗಿ ವಿಂಗಡಿಸಿದ್ದಾರೆ.

ಆಳುವವರ ಸಂಖ್ಯೆNumber of Rulers	ಶುದ್ಧಸರ್ಕಾರಗಳು Pure Governments	ಅಶುದ್ಧ ಸರ್ಕಾರಗಳು Perverted Governments
ಒಬ್ಬನ ಆಳ್ವಿಕೆ Rule of One	ರಾಜಪ್ರಭುತ್ವ Monarchy	ನಿರಂಕುಶ ಪ್ರಭುತ್ವ Tryranny

ಕೆಲವರ ಆಳ್ವಿಕೆ Rule by few	ಶ್ರೀಮಂತಪ್ರಭುತ್ವ Aristoreracy	ಮಿತಜನ ಪ್ರಭುತ್ವ Oligarchy
ಬಹು ಜನರ ಆಳ್ವಿಕೆ Rule of Man	ನಾಗರಿಕ ಪ್ರಭುತ್ವ Polity	ಪ್ರಜಾಪ್ರಭುತ್ವ Democracy

1. ರಾಜ ಪ್ರಭುತ್ವ (Monarchy)

ರಾಜಪ್ರಭುತ್ವದಲ್ಲಿ ಒಬ್ಬ ವ್ಯಕ್ತಿ ಆಳ್ವಿಕೆ ನಡೆಸುತ್ತಾನೆ. ಸಾರ್ವಜನಿಕ ಹಿತಾಸಕ್ತಿಗಳನ್ನು ಗಮನದಲ್ಲಿರಿಸಿಕೊಂಡು ಶ್ರಮಿಸುವ ರಾಜನು ಜನಸಾಮಾನ್ಯರ ಕಾನೂನಿಗೆ ಮಿಗಿಲಾದವನು. ಅಂದರೆ ರಾಜನ ಸದ್ಗುಣ ಮತ್ತು ಸಾಮರ್ಥ್ಯ ರಾಜ್ಯದ ಕಾನೂನು ಮತ್ತು ಜನರಿಗಿಂತ ಅಮೂಲ್ಯವಾದುದು ಎಂದು ಅರಿಸ್ಟಾಟಲ್ ಅಭಿಪ್ರಾಯಪಟ್ಟಿದ್ದಾರೆ.

"ಪ್ರಜೆಗಳನ್ನು ದಬ್ಬಾಳಿಕೆಯಿಂದ ರಕ್ಷಿಸುವುದು ರಾಜ್ಯದ ಪ್ರಮುಖ ಕರ್ತವ್ಯ" ಎಂದು ಅರಿಸ್ಟಾಟಲ್ ವಾದಿಸಿದ್ದಾರೆ. ಒಟ್ಟಿನಲ್ಲಿ ರಾಜಪ್ರಭುತ್ವಕ್ಕೆ ಪ್ರಥಮ ಆದ್ಯತೆ ನೀಡಿ ಇದು ಒಂದು 'ಆದರ್ಶಪ್ರಾಯದ ಸರ್ಕಾರ' ಎಂದು ಅರಿಸ್ಟಾಟಲ್ ಸಮರ್ಥಿಸಿಕೊಂಡಿದ್ದಾರೆ. ಈ ರಾಜಪ್ರಭುತ್ವವು ತನ್ನ ಆಳ್ವಿಕೆಯ ಸ್ವರೂಪದಿಂದ ವಿಕೃತಗೊಂಡಾಗ ನಿರಂಕುಶ ಪ್ರಭುತ್ವ ತಲೆ ಎತ್ತುತ್ತದೆ.

2. ನಿರಂಕುಶ ಪ್ರಭುತ್ವ (Tyranny)

ನಿರಂಕುಶ ಪ್ರಭುತ್ವದಲ್ಲಿಯೂ ರಾಜಪ್ರಭುತ್ವದಂತೆ ಒಬ್ಬನೇ ಆಳ್ವಿಕೆ ನಡೆಸುತ್ತಾನೆ. ಆದರೆ ಸಾರ್ವಜನಿಕ ಹಿತಾಸಕ್ತಿಗೆ ಬದಲಾಗಿ ತನ್ನ ವೈಯಕ್ತಿಕ ಹಿತಾಸಕ್ತಿ ಮತ್ತು ಲಾಭಕ್ಕಾಗಿ ಸರ್ಕಾರ ನಡೆಸುತ್ತಾನೆ. ನಿರಂಕುಶಾಧಿಕಾರಿ ರಾಜನು ತನ್ನ ಸ್ವಾರ್ಥ ಸಾಧನೆಗಾಗಿ ಯಾವುದಕ್ಕೂ ಹಿಂಜರಿಯುವುದಿಲ್ಲ. ಅರಿಸ್ಟಾಟಲ್ ನಿರಂಕುಶ ಪ್ರಭುತ್ವವನ್ನು "ಅತ್ಯಂತ ಕೆಟ್ಟ ಸರ್ಕಾರ" ಎಂದು ಕರೆದಿದ್ದಾರೆ. ಇಂತಹ ಸರ್ಕಾರದಲ್ಲಿ ಕಾನೂನು ಮತ್ತು ನ್ಯಾಯಕ್ಕೆ ಯಾವುದೇ ಬೆಲೆ ಇರುವುದಿಲ್ಲ. ಇದರ ಪರಿಣಾಮವಾಗಿ ಪ್ರಜೆಗಳು ಅನೇಕ ಕಷ್ಟಗಳನ್ನು ಎದುರಿಸಬೇಕಾಗುತ್ತದೆ. ಆದರೆ ಇಂತಹ ಸರ್ಕಾರ ತನ್ನ ಅತಿರೇಕದ ವರ್ತನೆಯಿಂದ ತಾನೇ ತಾನಾಗಿ ಅಧಃಪತನವನ್ನು ಕಂಡು ಶುದ್ಧ ಸರ್ಕಾರವಾದ ಶ್ರೀಮಂತ ಪ್ರಭುತ್ವಕ್ಕೆ ಎಡೆಮಾಡಿಕೊಡುತ್ತದೆ.

3. ಶ್ರೀಮಂತ ಪ್ರಭುತ್ವ (Aristocracy)

ಶ್ರೀಮಂತ ಪ್ರಭುತ್ವದಲ್ಲಿ ಪ್ರಜೆಗಳಿಗೆ ಮನ್ನಣೆ ಮತ್ತು ಗೌರವವನ್ನು ಅವರ ಗುಣ ಮತ್ತು ಸಾಮರ್ಥ್ಯದ ಆಧಾರದ ಮೇಲೆ ನೀಡಲಾಗುತ್ತದೆ. ಆದುದರಿಂದ ಸರ್ಕಾರವನ್ನು ನಡೆಸಲು ಅರ್ಹರಿಗೆ ಮಾತ್ರ ಮನ್ನಣೆ ಸಿಕ್ಕಂತಾಗುತ್ತದೆ. ಈ ಗುಣ ಮತ್ತು ಸಾಮರ್ಥ್ಯವು ಅನೇಕ ಜನರಲ್ಲಿ ಹಂಚಿಕೆಯಾಗಿರುತ್ತದೆ. ಅಂದರೆ ಇದು ಸಂಪೂರ್ಣವಾಗಿ "ಉತ್ತಮರಿಂದ ರಚಿಸಲ್ಪಟ್ಟ ಸರ್ಕಾರ" (ಪರಿಪೂರ್ಣ ಸರ್ಕಾರ) ಎಂದು ಅರಿಸ್ಟಾಟಲ್ ಪ್ರಶಂಸಿಸಿದ್ದಾರೆ.

ಆದರೆ ಶ್ರೀಮಂತ ಪ್ರಭುತ್ವವೂ ಕೂಡ ಶಾಶ್ವತವಾದುದಲ್ಲ. ಏಕೆಂದರೆ ಉತ್ತಮ ಆಡಳಿತಗಾರರೂ ಸಹ ಕಾಲಕ್ರಮೇಣ ಸ್ವಾರ್ಥಿಗಳೂ, ಭ್ರಷ್ಟರೂ, ದುಷ್ಟರೂ ಆಗಿ ಜನರ ಆಕ್ರೋಶಕ್ಕೆ ತುತ್ತಾಗುತ್ತಾರೆ. ತತ್ಪರಿಣಾಮವಾಗಿ ಶ್ರೀಮಂತ ಪ್ರಭುತ್ವವೂ ಅಶುದ್ಧ ರೂಪವಾದ ಮಿತಜನ ಪ್ರಭುತ್ವಕ್ಕೆ ಪರಿವರ್ತನೆಯಾಗುತ್ತದೆ.

4. ಮಿತಜನ ಪ್ರಭುತ್ವ (Oligarchy)

ಮಿತಜನ ಪ್ರಭುತ್ವದಲ್ಲಿ ಕೆಲವೇ ಅಲ್ಪಸಂಖ್ಯೆಯ ಶ್ರೀಮಂತ ವರ್ಗದ ಜನರು ಸರ್ಕಾರದ ನೀತಿ ನಿಯಮಗಳನ್ನು ತಮ್ಮ ಗುಂಪಿನ ಸ್ವಾರ್ಥಪರವಾದ ಹಿತಾಸಕ್ತಿಗಳನ್ನು ಈಡೇರಿಸಿಕೊಳ್ಳಲು ಬಳಸಿಕೊಳ್ಳುತ್ತಾರೆ. ಅಂದರೆ ಸರ್ಕಾರವು ಪ್ರಜೆಗಳ ಬೇಕು ಬೇಡಗಳನ್ನು ಪರಿಗಣಿಸದೆ ತಮ್ಮ ಸ್ವಾರ್ಥಕ್ಕನುಗುಣವಾದ ನಿರ್ಣಯಗಳನ್ನು ಕೈಗೊಳ್ಳುತ್ತದೆ. ಕೇವಲ ಕೆಲವೇ ಶ್ರೀಮಂತರು ತಮ್ಮ ಸಂಪತ್ತಿನ ಆಧಾರದ ಮೇಲೆ ಸರ್ಕಾರ ನಡೆಸುತ್ತಾರೆ. ಆದುದರಿಂದ 'ಮಿತಜನ ಪ್ರಭುತ್ವವನ್ನು ಅತ್ಯಂತ ಕೆಟ್ಟ ಸರ್ಕಾರ' (ದುರ್ಗುಣಿಗಳ ಸರ್ಕಾರ) ಎಂದು ಅರಿಸ್ಟಾಟಲ್ ಕರೆದಿದ್ದಾರೆ.

ಈ ಮಿತಜನ ಪ್ರಭುತ್ವ ಸರ್ಕಾರವು ಸಹ ದೀರ್ಘಕಾಲ ಅಧಿಕಾರದಲ್ಲಿರುವುದಿಲ್ಲ. ಏಕೆಂದರೆ ತನ್ನ ದೋಷಗಳ ಹೊರೆಯಿಂದಲೇ ಅಧಿಕಾರವನ್ನು ಕಳೆದುಕೊಂಡು ಶುದ್ಧ ಸರ್ಕಾರ ರೂಪವಾದ ನಾಗರಿಕ ಪ್ರಭುತ್ವಕ್ಕೆ ದಾರಿ ಮಾಡಿಕೊಡುತ್ತದೆ.

5. ನಾಗರಿಕ ಪ್ರಭುತ್ವ (Polity)


ಅರಿಸ್ಟಾಟಲ್‌ರವರು ಸಂವಿಧಾನಿಕ ಸರ್ಕಾರ ನಾಗರಿಕ ಪ್ರಭುತ್ವಕ್ಕೆ ವಿಶೇಷವಾದ ಸ್ಥಾನವನ್ನು ನೀಡಿದ್ದಾರೆ. ನಾಗರಿಕ ಪ್ರಭುತ್ವದಲ್ಲಿ ಅಧಿಕಾರವು ಮಧ್ಯಮ ವರ್ಗದ ಜನರ ಕೈಯಲ್ಲಿರುತ್ತದೆ. ಇದು ಸರ್ಕಾರ ನಡೆಸುವಾಗ ಶ್ರೀಮಂತ ವರ್ಗದ ಜನರ ಬೇಡಿಕೆ ಮತ್ತು ಮಧ್ಯಮವರ್ಗದ ಜನರ ಹಿತಾಸಕ್ತಿಯ ಸಂರಕ್ಷಣೆ ನಡುವೆ ಸಮತೋಲನವನ್ನು ಕಾಪಾಡುತ್ತದೆ. ಆದುದರಿಂದ ಸಂವಿಧಾನಾತ್ಮಕ ಸರ್ಕಾರವು (ನಾಗರಿಕ ಪ್ರಭುತ್ವ) ಬಡವರು ಮತ್ತು ಶ್ರೀಮಂತರ ಸ್ವಾತಂತ್ರ್ಯವನ್ನು ಯಾರೊಬ್ಬರಿಗೂ ಸಂಪೂರ್ಣ ಪ್ರಾತಿನಿಧ್ಯ ನೀಡದೇ ಒಂದುಗೂಡಿಸಲು ಪ್ರಯತ್ನಿಸುತ್ತದೆ ಎಂದು ಅರಿಸ್ಟಾಟಲ್ ಅಭಿಪ್ರಾಯಪಟ್ಟಿದ್ದಾರೆ. ನಾಗರಿಕ ಪ್ರಭುತ್ವವನ್ನು ಅರಿಸ್ಟಾಟಲ್ "ಅತ್ಯುತ್ತಮ ಸರ್ಕಾರ" ಅಥವಾ "ಮಾದರಿ ಸರ್ಕಾರ" ಎಂದು ಪ್ರಶಂಸಿಸಿದ್ದಾರೆ. ಅಲ್ಲದೆ ಮಧ್ಯಮ ವರ್ಗದವರ ಅಧಿಪತ್ಯ (Polity) ವನ್ನು 'ಸುವರ್ಣ ಮಾಧ್ಯಮ' (Golden Mean) ಎಂದು ಕರೆದಿದ್ದಾರೆ.

ಸಮಾಜದ 2 ಪ್ರಮುಖ ವರ್ಗಗಳನ್ನು ಓಲೈಸಿಕೊಂಡು ಆಡಳಿತ ನಡೆಸುವುದು ಸುಲಭ ಸಾಧ್ಯವಲ್ಲ. ಹೀಗಾಗಿ ಮಧ್ಯಮ ವರ್ಗದವರ ಸರ್ಕಾರವೂ ಕೂಡ ಜನರ ಬೆಂಬಲ ಕಳೆದುಕೊಂಡು ಅಶುದ್ಧ ಸರ್ಕಾರದ ರೂಪವಾದ ಪ್ರಜಾಪ್ರಭುತ್ವದ ಹುಟ್ಟಿಗೆ ನಾಂದಿಯಾಗುತ್ತದೆ.

6. ಪ್ರಜಾಪ್ರಭುತ್ವ (Democracy):

ಪ್ರಜಾಪ್ರಭುತ್ವ ಸರ್ಕಾರವು ದೊಂಬಿ ಆಡಳಿತ ವ್ಯವಸ್ಥೆಯಾಗಿದ್ದು, ಬಡಜನರು ಸರ್ಕಾರವನ್ನು ತಮ್ಮ ಸ್ವಾರ್ಥಕ್ಕೆ ಬಳಸಿಕೊಂಡು ಅತಿಯಾದ ತೆರಿಗೆಯನ್ನು ಶ್ರೀಮಂತರ ಭುಜಕ್ಕೇರಿಸಿ ಶೋಷಣೆ ಮಾಡುತ್ತಾರೆ. ಅಲ್ಲದೆ ಇದು ಕೆಳಹುಟ್ಟಿನ ಮತ್ತು ಆಸಕ್ತಿ ಇಲ್ಲದ ಹಾಗೂ ಕೀಳು ಉದ್ಯೋಗ ಮಾಡುವ ಜನರ ಕೈಯಲ್ಲಿರುತ್ತದೆ. ಆದುದರಿಂದ ಪ್ರಜಾಪ್ರಭುತ್ವ ಸರ್ಕಾರವು 'ಅತ್ಯಂತ ಕಳಪೆ ಗುಣಮಟ್ಟದ ಸರ್ಕಾರ' ಎಂದು ಅರಿಸ್ಟಾಟಲ್ ಅಭಿಪ್ರಾಯಪಟ್ಟಿದ್ದಾರೆ. ಸರ್ಕಾರದ ಎಲ್ಲಾ ವಿಧಗಳಲ್ಲಿ ಪ್ರಜಾಪ್ರಭುತ್ವವನ್ನು ಅತ್ಯಂತ ಕೆಟ್ಟ ಸರ್ಕಾರ ಎಂದು ಕರೆದು ಮೂರು ವಿಕೃತ ಸರ್ಕಾರದ ರೂಪಗಳಲ್ಲಿ 'ಅತೀ ಸಹಿಷ್ಣು ಸರ್ಕಾರ' ಎಂದಿದ್ದಾರೆ.

ಒಟ್ಟಿನಲ್ಲಿ ಮೇಲೆ ವಿಶ್ಲೇಷಿಸಿರುವ ಆರು ರೀತಿಯ ಸರ್ಕಾರಗಳಲ್ಲಿ ಕುಲ, ಸಂಪತ್ತು, ಜ್ಞಾನ ಮತ್ತು ಗುಣ ಈ ನಾಲ್ಕು ಅಂಶಗಳು ನಿರ್ಣಾಯಕ ಪಾತ್ರ ವಹಿಸುತ್ತವೆ. ಅಂದರೆ ರಾಜಪ್ರಭುತ್ವದಲ್ಲಿ ಕುಲ ಹಾಗೂ ಗುಣ, ಶ್ರೀಮಂತಪ್ರಭುತ್ವದಲ್ಲಿ ಜ್ಞಾನ ಮತ್ತು ಗುಣ, ಮಿತಜನಪ್ರಭುತ್ವದಲ್ಲಿ ಸಂಪತ್ತು ಇತ್ಯಾದಿ. ಆದುದರಿಂದ ಯಾವ ವಿಧದ ಸರ್ಕಾರವೂ ಶಾಶ್ವತವಲ್ಲ. ಸರ್ಕಾರಗಳು ಕಾಲದಿಂದ ಕಾಲಕ್ಕೆ ನಿರಂತರವಾಗಿ ಬದಲಾಗುತ್ತಿರುತ್ತವೆ ಎಂದು ಅರಿಸ್ಟಾಟಲ್ ಅಭಿಪ್ರಾಯಪಟ್ಟಿದ್ದಾರೆ. ಈ ಬದಲಾವಣೆಯ ಪ್ರಕ್ರಿಯೆಯಲ್ಲಿ ಶುದ್ಧ ಸರ್ಕಾರಗಳು ಅಶುದ್ಧ ಸರ್ಕಾರಗಳಾಗಿ, ಅಶುದ್ಧ ಸರ್ಕಾರಗಳು ಶುದ್ಧ ಸರ್ಕಾರಗಳಾಗಿ ಪರಿವರ್ತನೆಗೊಳ್ಳುತ್ತವೆ ಎಂದಿದ್ದಾರೆ.



'ಅರಸೊತ್ತಿಗೆ' ನಿರಂಕುಶ ಪ್ರಭುತ್ವವಾಗಿಯೂ

‘ಶ್ರೀಮಂತ ಪ್ರಭುತ್ವ’ ಮಿತಜನ ಪ್ರಭುತ್ವವಾಗಿಯೂ

‘ನಾಗರಿಕ ಪ್ರಭುತ್ವ’ ಪ್ರಜಾಪ್ರಭುತ್ವವಾಗಿಯೂ ಪರಿವರ್ತನೆಗೊಳ್ಳುತ್ತದೆ. ಹಾಗೆಯೇ,

‘ಪ್ರಜಾಪ್ರಭುತ್ವವು’ ನಾಗರಿಕ ಪ್ರಭುತ್ವವಾಗಿ

‘ಮಿತಜನ ಪ್ರಭುತ್ವವು’ ಶ್ರೀಮಂತ ಪ್ರಭುತ್ವವಾಗಿ

‘ನಿರಂಕುಶ ಪ್ರಭುತ್ವವು’ ಅರಸೊತ್ತಿಗೆಯಾಗಿಯೂ ಪರಿವರ್ತನೆಗೊಳ್ಳುತ್ತದೆ.

ಸರ್ಕಾರದ ಈ ಬದಲಾವಣೆಯ ಪ್ರಕ್ರಿಯೆಯು ನಿರಂತರವಾಗಿ ಮುಂದುವರಿಯುತ್ತಿರುತ್ತದೆ ಎಂಬುದು ಅರಿಸ್ಟಾಟಲ್‌ರವರ ಅಭಿಪ್ರಾಯವಾಗಿದೆ. ಒಟ್ಟಿನಲ್ಲಿ ಹೇಳುವುದಾದರೆ ಸರ್ಕಾರದ ವರ್ಗೀಕರಣವು ಅರಿಸ್ಟಾಟಲ್‌ರವರು ರಾಜ್ಯಶಾಸ್ತ್ರಕ್ಕೆ ನೀಡಿರುವ ಅತ್ಯಮೂಲ್ಯ ಕೊಡುಗೆಯಾಗಿದೆ.

ಅಭ್ಯಾಸ

I. ಒಂದೊಂದು ವಾಕ್ಯದಲ್ಲಿ ಉತ್ತರಿಸಿ:

1. ಅರಿಸ್ಟಾಟಲ್‌ರವರು ಯಾವಾಗ ಜನಿಸಿದರು ?
2. ಅರಿಸ್ಟಾಟಲ್‌ರವರ ಗುರು ಯಾರು ?
3. ಅರಿಸ್ಟಾಟಲ್‌ರವರು ಸ್ಥಾಪಿಸಿದ ಶಾಲೆಯ ಹೆಸರೇನು ?
4. ಅರಿಸ್ಟಾಟಲ್‌ರವರ ಶ್ರೇಷ್ಠ ಕೃತಿಯನ್ನು ಹೆಸರಿಸಿ.
5. ಅರಿಸ್ಟಾಟಲ್‌ರವರು ಯಾವ ಸರ್ಕಾರವನ್ನು ಅತ್ಯುತ್ತಮ ಸರ್ಕಾರ ಎಂದು ಕರೆದಿದ್ದಾರೆ ?

II. ಖಾಲಿ ಬಿಟ್ಟ ಸ್ಥಳಗಳಲ್ಲಿ ಸರಿಯಾದ ಉತ್ತರಗಳನ್ನು ಬರೆಯಿರಿ:

1. ಅರಿಸ್ಟಾಟಲ್‌ರವರು _______ ಎಂಬಲ್ಲಿ ಜನಿಸಿದರು.
2. ಅರಿಸ್ಟಾಟಲ್‌ರವರು ರಾಜ್ಯಶಾಸ್ತ್ರವನ್ನು ಒಂದು _______ ವಿಜ್ಞಾನ ಎಂದು ಕರೆದಿದ್ದಾರೆ.
3. ಅರಿಸ್ಟಾಟಲ್‌ರವರು ರಾಜ್ಯವನ್ನು ಒಂದು _______ ಸಂಸ್ಥೆ ಎಂದು ಕರೆದಿದ್ದಾರೆ.

4. ಅರಿಸ್ಟಾಟಲ್‌ರವರು _______ ಸಂವಿಧಾನಗಳನ್ನು ತೌಲಾನಿಕವಾಗಿ ಅಧ್ಯಯನ ಮಾಡಿ ಸರ್ಕಾರವನ್ನು ವರ್ಗೀಕರಿಸಿದ್ದಾರೆ.

5. ಅರಿಸ್ಟಾಟಲ್‌ರವರು ಮಧ್ಯಮ ವರ್ಗದವರ ಆಧಿಪತ್ಯವನ್ನು _______ ಮಾಧ್ಯಮವೆಂದು ಕರೆದಿದ್ದಾರೆ.

III. ಎರಡು ಅಥವಾ ಮೂರು ವಾಕ್ಯಗಳಲ್ಲಿ ಉತ್ತರಿಸಿ:

1. ರಾಜಪ್ರಭುತ್ವ ಎಂದರೇನು ?
2. ನಿರಂಕುಶ ಪ್ರಭುತ್ವ ಎಂದರೇನು ?
3. ಸುವರ್ಣ ಮಾಧ್ಯಮ ಎಂದರೇನು ?
4. ಅರಿಸ್ಟಾಟಲ್‌ರವರು ಪ್ರಜಾಪ್ರಭುತ್ವವನ್ನು ಅತ್ಯಂತ ಕಳಪೆ ಮಟ್ಟದ ಸರ್ಕಾರ ಎಂದು ಏಕೆ ಕರೆದಿದ್ದಾರೆ ?

IV. ಎಂಟು ಅಥವಾ ಹತ್ತು ವಾಕ್ಯಗಳಲ್ಲಿ ಉತ್ತರಿಸಿ:

1. ಅರಿಸ್ಟಾಟಲ್‌ರವರ ಸರ್ಕಾರದ ವರ್ಗೀಕರಣವನ್ನು ವಿವರಿಸಿ.

ಸಲಹಾತ್ಮಕ ಚಟುವಟಿಕೆಗಳು:

1. ಅರಿಸ್ಟಾಟಲ್‌ರವರ ಜೀವಿತಾವಧಿಯ ಗ್ರೀಕ್ ಇತಿಹಾಸವನ್ನು ಓದಿ ತಿಳಿಯಿರಿ.
2. ಅರಿಸ್ಟಾಟಲ್‌ರವರ ಸರ್ಕಾರದ ವರ್ಗೀಕರಣವನ್ನು ಆಧುನಿಕ ಸರ್ಕಾರಕ್ಕೆ ಹೋಲಿಸಿ ನೋಡಿ.

ಅಧ್ಯಾಯ- 3 ಮಹಾತ್ಮಗಾಂಧಿ

(ಕ್ರಿ, ಶ. 1869-1948) Mahatma Gandhi)

ಕಲಿಕಾ ಉದ್ದೇಶಗಳು:

ಂಧೀಜಿಯವರ ಜೀವನ ಚರಿತ್ರೆಯನ್ನು ತಿಳಿಯುವುದು.

ಂಧೀತತ್ವಗಳ ಪ್ರಾಮುಖ್ಯತೆಯನ್ನು ಅರ್ಥಮಾಡಿಕೊಳ್ಳುವುದು.

ತ್ಯಾಗ್ರಹದ ಅರ್ಥ, ಮಹತ್ವ ಮತ್ತು ತಂತ್ರಗಳನ್ನು ಅರಿಯುವುದು.

ಸ್ಪೃಶ್ಯತೆಯ ನಿವಾರಣೆಗೆ ಗಾಂಧೀಜಿಯವರು ನೀಡಿದ ಕೊಡುಗೆಗಳನ್ನು ಮೆಚ್ಚಿಕೊಳ್ಳುವುದು.

ರ್ವೋದಯ ಪರಿಕಲ್ಪನೆಯನ್ನು ಮನನ ಮಾಡಿಕೊಳ್ಳುವುದು.

"ಅಹಿಂಸೆ ನನ್ನ ನಂಬಿಕೆಯ ಮೊದಲನೆಯ ಮತ್ತು ನನ್ನ ಧರ್ಮದ ಕೊನೆಯ ವಿಧಿ". **ಗಾಂಧೀಜಿ**

"ಮುಂದಿನ ಪೀಳಿಗೆಗಳು ಗಾಂಧಿಯಂತಹ ಒಬ್ಬ ಮಹಾನ್ ವ್ಯಕ್ತಿ ಈ ಭೂಮಿಯ ಮೇಲೆ ನಡೆದಾಡಿದ್ದನೆಂಬ ಮಾತನ್ನು ಬಹುಶಃ ನಂಬುವುದಿಲ್ಲ". **ವಿಜ್ಞಾನಿ ಅಲ್ಬರ್ಟ್ ಐನ್‌ಸ್ಟೈನ್**


ಪೀಠಿಕೆ:

ಮೋಹನದಾಸ್ ಕರಮಚಂದ್ ಗಾಂಧಿ ಅಂದರೆ ನಮ್ಮೆಲ್ಲರ ನೆಚ್ಚಿನ ಬಾಪು. ಇಡೀ ಜಗತ್ತಿನ ಗಮನ ಸೆಳೆದ ಮಹಾತ್ಮ. ಮಾತುಗಳನ್ನು ಕೃತಿಗಳಲ್ಲಿ ಮೂಡಿಸುವ ಮೂಲಕ ಇವರು ಕೋಟ್ಯಾಂತರ ಹೃದಯಗಳನ್ನು ಗೆದ್ದರಲ್ಲದೆ ವಿಶ್ವದ ಮೆಚ್ಚುಗೆಗೆ ಪಾತ್ರರಾದರು. ಸತ್ಯ ಮತ್ತು ಅಹಿಂಸೆಗಳೆಂಬ ಸಾಧನಗಳ ಮೂಲಕ ಬ್ರಿಟಿಷರ ವಿರುದ್ಧ ಹೋರಾಡಿ ಭಾರತಕ್ಕೆ ಸ್ವಾತಂತ್ರ್ಯ ತಂದುಕೊಟ್ಟರು. ರಾಷ್ಟ್ರಪಿತ ಎನಿಸಿದರು. ರಾಜಕೀಯವನ್ನು ಧಾರ್ಮಿಕವನ್ನಾಗಿಯೂ ಮತ್ತು ಧರ್ಮವನ್ನು ಲೌಕಿಕವನ್ನಾಗಿಯೂ (Spirtualised Politics and Secularised Religion) ಮಾಡಿದ ಜಗತ್ತಿನ ಏಕೈಕ ವ್ಯಕ್ತಿ ಎಂದರೆ ಗಾಂಧೀಜಿ. "ಧರ್ಮವಿಲ್ಲದ ರಾಜಕೀಯವು ಮಾನವನ ಆತ್ಮವನ್ನೇ ಕೊಲ್ಲುತ್ತದೆ" ಎನ್ನುವ ಮೂಲಕ ರಾಜಕೀಯ ಜೀವನವು ಧಾರ್ಮಿಕವಾಗಿರಬೇಕು ಎಂಬ ಅವರ ಚಿಂತನೆ ಇಂದಿಗೂ ಹೆಚ್ಚು ಪ್ರಸ್ತುತ. ಈ ಹಿನ್ನೆಲೆಯಲ್ಲಿ ಗಮನಿಸಿದಾಗ ವಿಜ್ಞಾನಿ ಅಲ್ಬರ್ಟ್ ಐನ್‌ಸ್ಟೈನ್‌ರವರು "ಮುಂದಿನ ಪೀಳಿಗೆಗಳು ಗಾಂಧಿಯಂತಹ ಒಬ್ಬ ಮಹಾನ್ ವ್ಯಕ್ತಿ ಈ ಭೂಮಿಯ ಮೇಲೆ ನಡೆದಾಡಿದ್ದಾನೆಂಬ

ಮಾತನ್ನು ಬಹುಶಃ ನಂಬುವುದಿಲ್ಲ” ಎಂಬ ಹೇಳಿಕೆ ಗಾಂಧೀಜಿಯವರ ತ್ಯಾಗ, ಬಲಿದಾನ, ಘನತೆ ಹಾಗೂ ವ್ಯಕ್ತಿತ್ವವನ್ನು ಪ್ರತಿಬಿಂಬಿಸುತ್ತದೆ. ಗಾಂಧಿತತ್ವಗಳು ಸತ್ಯ.

ಅಹಿಂಸೆ ಮತ್ತು ಧರ್ಮದ ತಳಹದಿಯ ಮೇಲೆ ರೂಪಿತವಾಗಿವೆ. ಸಾಮಾಜಿಕ, ರಾಜಕೀಯ, ಆರ್ಥಿಕ, ಸಾಂಸ್ಕೃತಿಕ ಮತ್ತು ಆಧ್ಯಾತ್ಮಿಕ ವಿಷಯಗಳನ್ನು ಇವು ಒಳಗೊಂಡಿವೆ. ಇವರ ವ್ಯಕ್ತಿತ್ವದ ಬಗ್ಗೆ ಆಳವಾಗಿ ಅಧ್ಯಯನ ಮಾಡಿದವರು ಗಾಂಧೀಜಿಯವರನ್ನು ಸಂತರಲ್ಲಿ ರಾಜಕಾರಣಿ ಮತ್ತು ರಾಜಕಾರಣಿಗಳಲ್ಲಿ ಸಂತ ಎಂದು ಬಣ್ಣಿಸಿದ್ದಾರೆ.

3.1 ಜೀವನ ಚಿತ್ರಣ (Life Sketch)



ಮೋಹನದಾಸ್ ಕರಮಚಂದ್ ಗಾಂಧಿಯವರು ಅಕ್ಟೋಬರ್ 2, 1869 ರಂದು ಗುಜರಾತಿನ ಪೋರಬಂದರಿನಲ್ಲಿ ಜನಿಸಿದರು. ಇವರ ತಂದೆ ಕರಮ್‌ಚಂದ್ ಗಾಂಧಿ ಹಾಗೂ ತಾಯಿ ಪುತಳೀಬಾಯಿ. ಇವರು ಇಂಗ್ಲೆಂಡಿಗೆ ತೆರಳಿ 1891 ರಲ್ಲಿ ಕಾನೂನು ಪದವಿಯನ್ನು ಪಡೆದರು. ಭಾರತಕ್ಕೆ ಮರಳಿದ ಬಳಿಕ ಬಾಂಬೆ ಮತ್ತು ಖಾಥೇವಾಡಗಳಲ್ಲಿ ವಕೀಲ ವೃತ್ತಿಯನ್ನು ಆರಂಭಿಸಿದರು. ಒಂದು ಮೊಕದ್ದಮೆಗೆ ಸಂಬಂಧಿಸಿದಂತೆ 1893 ರಲ್ಲಿ ದಕ್ಷಿಣ ಆಫ್ರಿಕಾಕ್ಕೆ ಹೋಗಿದ್ದಾಗ ಅಲ್ಲಿ ಆಚರಣೆಯಲ್ಲಿದ್ದ ಕರಿಯರನ್ನು ಬಿಳಿಯರು ಕೀಳಾಗಿ ಕಾಣುವ ವರ್ಣಭೇದ ನೀತಿಯ ವಿರುದ್ಧ ಹೋರಾಟ ನಡೆಸಿದರು. ದಕ್ಷಿಣ ಆಫ್ರಿಕಾದಲ್ಲಿ ಅವರು

ಅಹಿಂಸೆಯ ಅಸ್ತ್ರವಾದ ಸತ್ಯಾಗ್ರಹವನ್ನು ಪ್ರಥಮ ಬಾರಿಗೆ ಪ್ರಯೋಗಿಸಿದರು. ವಕೀಲ ವೃತ್ತಿಯಲ್ಲಿ ತಾವು ಗಳಿಸಿದ್ದ ಹೇರಳ ಸಂಪತ್ತನ್ನು ಅಲ್ಲಿನ ಭಾರತೀಯರ ಉದ್ಧಾರಕ್ಕಾಗಿ ಬಳಸಿದರು ಮತ್ತು ಸರಳವಾದ ಜೀವನವನ್ನು ನಡೆಸಿದರು.

ಗಾಂಧೀಜಿಯವರು 1914 ರಲ್ಲಿ ಭಾರತಕ್ಕೆ ಹಿಂತಿರುಗಿದರು. ಕೆಲವು ವರ್ಷಗಳ ಕಾಲ ಬ್ರಿಟಿಷರ ವಿರುದ್ಧ ಇಲ್ಲಿ ನಡೆಯುತ್ತಿದ್ದ ಸ್ವಾತಂತ್ರ್ಯ ಹೋರಾಟದ ಪರಿಸ್ಥಿತಿಯನ್ನು ಅವಲೋಕಿಸಿದರು. ಸಬರಮತಿಯಲ್ಲಿ ಸತ್ಯಾಗ್ರಹಾಶ್ರಮವನ್ನು ಸ್ಥಾಪಿಸಿ ಸತ್ಯಾಗ್ರಹಿಗಳಿಗೆ ಅಹಿಂಸಾತ್ಮಕ ಪ್ರತಿಭಟನೆಯ ತರಬೇತಿಯನ್ನು ನೀಡಿದರು. ವರ್ಧಾದ ಹತ್ತಿರ ಸೇವಾಗ್ರಾಮದಲ್ಲಿ ಮತ್ತೊಂದು ಆಶ್ರಮವನ್ನು ಸ್ಥಾಪಿಸಿದರು. ಕ್ರಿ. ಶ. 1919 ರಲ್ಲಿ ಭಾರತದ ರಾಜಕೀಯ ಜೀವನವನ್ನು ನೇರವಾಗಿ ಪ್ರವೇಶಿಸಿ ಸ್ವಾತಂತ್ರ್ಯ ಸಿಗುವವರೆಗೂ ತಾವೇ ಹೋರಾಟದ ನಾಯಕರಾದರು. ಆದುದರಿಂದ 1919 ರಿಂದ 1947 ರ ವರೆಗಿನ ಅವಧಿಯನ್ನು ಗಾಂಧಿಯುಗವೆಂದೇ ಕರೆಯಲಾಗಿದೆ. ಸತ್ಯ ಮತ್ತು ಅಹಿಂಸೆಗಳ ಮೂಲಕ ಬ್ರಿಟಿಷ್ ಸಾಮ್ರಾಜ್ಯದ ವಿರುದ್ಧ ಹೋರಾಟ ನಡೆಸಿ 1947 ರಲ್ಲಿ ಭಾರತಕ್ಕೆ ಸ್ವಾತಂತ್ರ್ಯ ತಂದುಕೊಟ್ಟರು. ಆದುರಿಂದಲೇ ಇವರನ್ನು 'ರಾಷ್ಟ್ರಪಿತ' ಎಂದು ಕರೆಯಲಾಗುತ್ತದೆ.

ಗಾಂಧೀಜಿಯವರು ರಾಮಾಯಣ, ಮಹಾಭಾರತ, ಭಗವದ್ಗೀತೆ, ಕುರಾನ್ ಮತ್ತು ಬೈಬಲ್‌ಗಳಿಂದ ಪ್ರಭಾವಿತರಾಗಿದ್ದರು. ರಸ್ಕಿನ್‌ರವರ 'ಅನ್ ಟು ದಿ ಲಾಸ್ಟ್', ಲಿಯೋ ಟಾಲ್‌ಸ್ಟಾಯ್‌ರವರ 'ಅನ್ನಾ ಕರೆನಿನ' ಹಾಗೂ ಡೇವಿಡ್ ಥೋರೊರವರ ಕೆಲವು ಕೃತಿಗಳು ಸಹಾ ಇವರ ಮೇಲೆ ಅಪಾರ ಪ್ರಭಾವ ಬೀರಿದವು. ಗಾಂಧೀಜಿಯವರು 'ಯಂಗ್ ಇಂಡಿಯಾ' ಮತ್ತು 'ಹರಿಜನ' ಎಂಬ ಪತ್ರಿಕೆಗಳನ್ನು ಬಹುಕಾಲ ಪ್ರಕಟಿಸಿದರು.

ಗಾಂಧೀಜಿಯವರು ಭಾರತೀಯ ಸಮಾಜದಲ್ಲಿದ್ದ ಅಸ್ಪೃಶ್ಯತಾ ಆಚರಣೆಯನ್ನು ಬಲವಾಗಿ ವಿರೋಧಿಸಿದರು. ಅಸ್ಪೃಶ್ಯತೆಯು ಒಂದು ಪಾಪ. ಇದರ ನಿವಾರಣೆಯು ಮೇಲ್ಜಾತಿಗಳ ಜವಾಬ್ದಾರಿ ಎಂದು ಅವರು ಅಭಿಪ್ರಾಯಪಟ್ಟರು. ಅಸ್ಪೃಶ್ಯತೆಗೆ ಒಳಗಾದವರನ್ನು ಇವರು 'ಹರಿಜನ' ಎಂದು ಕರೆದರು. ಇವರ ಉದ್ಧಾರಕ್ಕಾಗಿ ಗಾಂಧೀಜಿಯವರು ಅನೇಕ ಕಾರ್ಯಕ್ರಮಗಳನ್ನು ಹಮ್ಮಿಕೊಂಡರು.

ಗಾಂಧೀಜಿಯವರು ಜನವರಿ 30, 1948 ರಂದು ಪ್ರಾರ್ಥನಾ ಸಭೆಗೆ ಹೋಗುತ್ತಿದ್ದಾಗ ನಾಥುರಾಮ್ ಗೋಡ್ಸೆ ಎಂಬ ಯುವಕನ ಗುಂಡಿಗೆ ಬಲಿಯಾದರು. 'ಹೇ ರಾಮ್' ಎನ್ನುತ್ತಾ ತಮ್ಮ ಕೊನೆಯುಸಿರು ಎಳೆದರು. ನಾವು ಪ್ರತೀ ವರ್ಷ ಜನವರಿ 30 ನ್ನು 'ಹುತಾತ್ಮರ ದಿನ' ವನ್ನಾಗಿ ಆಚರಿಸುತ್ತಿದ್ದೇವೆ.

3.2 ಮಹಾತ್ಮ ಗಾಂಧೀಜಿಯವರ ಪ್ರಮುಖ ಕೃತಿಗಳು.

1. ದಿ ಸ್ಟೋರಿ ಆಫ್ ಮೈ ಎಕ್ಸಪರಿಮೆಂಟ್ ವಿತ್ ಟ್ರೂಥ್ (ನನ್ನ ಸತ್ಯಾನ್ವೇಷಣೆ)
2. ಇಂಡಿಯನ್ ಹೋಂ ರೂಲ್ ಅಥವಾ ಹಿಂದ್ ಸ್ವರಾಜ್

3. ಎಕನಾಮಿಕ್ಸ್ ಆಫ್ ಖಾದಿ
4. ವುಮೆನ್ ಆಂಡ್ ಸೋಷಿಯಲ್ ಜಸ್ಟಿಸ್
5. ಗೀತಾ ದಿ ಮದರ್
6. ಸತ್ಯಾಗ್ರಹ ಇನ್ ಸೌತ್ ಆಫ್ರಿಕಾ
7. ಟುವರ್ಡ್ಸ್ ನಾನ್ ವಾಯಲೆಂಟ್ ಸೊಸೈಟಿ
8. ನಾನ್ ವೈಯೊಲೆನ್ಸ್ ಇನ್ ಪೀಸ್ ಅಂಡ್ ವಾರ್ (ಶಾಂತಿ ಮತ್ತು ಸಮರದಲ್ಲಿ ಅಹಿಂಸೆ)

ನನ್ನ ಸತ್ಯಾನ್ವೇಷಣೆ:

ಇದು ಗಾಂಧೀಜಿಯವರ ಆತ್ಮಚರಿತ್ರೆಯಾಗಿದೆ. ಗಾಂಧೀಜಿಯವರು ಇದಕ್ಕೆ 'ದಿ ಸ್ಟೋರಿ ಆಫ್ ಮೈ ಎಕ್ಸ್‌ಪರಿಮೆಂಟ್ ವಿತ್ ಟ್ರೂಥ್' ಎಂದು ಹೆಸರಿಟ್ಟಿರುವರು. ಈ ಕೃತಿಯ ಮುನ್ನುಡಿಯಲ್ಲಿ ಗಾಂಧೀಜಿಯವರು "ಯಥಾವತ್ತಾದ ಆತ್ಮಕಥೆಯನ್ನು ಬರೆಯಲು ಪ್ರಯತ್ನಿಸುವುದು ನನ್ನ ಉದ್ದೇಶವಲ್ಲ. ನಾನು ಹೇಳಬಯಸುವುದು ಸತ್ಯಶೋಧನೆಯ ನನ್ನ ಅನೇಕ ಪ್ರಯೋಗಗಳ ಕಥೆಯನ್ನು ಮಾತ್ರ. ನನ್ನ ಜೀವನ ಈ ಪ್ರಯೋಗಗಳ ಹೊರತು ಮತ್ತೇನೂ ಅಲ್ಲ. ವಯಸಾದವರಿಗೆ ಹೇಗೋ ಹಾಗೆಯೇ ಮಕ್ಕಳಿಗೂ ಸಹ ಅರ್ಥವಾಗುವ ಧಾರ್ಮಿಕ ವಿಷಯಗಳು ಈ ಕಥೆಯಲ್ಲಿ ಸೇರಿಸಲ್ಪಟ್ಟಿವೆ" ಎಂದಿದ್ದಾರೆ. ಆಧ್ಯಾತ್ಮ ಕ್ಷೇತ್ರದಲ್ಲಿ ತಾವು ನಡೆಸಿದ ಪ್ರಯೋಗಗಳನ್ನು ವಿವರಿಸುವ ಉದ್ದೇಶದಿಂದ ಗಾಂಧೀಯವರು ಈ ಕೃತಿಯನ್ನು ರಚಿಸಿದ್ದಾರೆ. ಇಂಡಿಯನ್ ಹೋಂ ರೂಲ್ ಅಥವಾ ಹಿಂದ್ ಸ್ವರಾಜ್ ಕೂಡಾ ಗಾಂಧೀಜಿಯವರು ರಚಿಸಿದ ಶ್ರೇಷ್ಠ ಕೃತಿಗಳಾಗಿವೆ. ಸ್ವಯಂ ಆಡಳಿತದ ಬಗ್ಗೆ ಸವಿವರ ಚರ್ಚೆ ಇದರಲ್ಲಿದೆ.

3.3 ಸತ್ಯಾಗ್ರಹ:

ಸತ್ಯಾಗ್ರಹದ ಪರಿಕಲ್ಪನೆಯು ಗಾಂಧಿವಾದದ ಆತ್ಮ ಮತ್ತು ಹೃದಯವಿದ್ದಂತೆ. ಗಾಂಧೀಜಿಯವರ ಇತರ ಪರಿಕಲ್ಪನೆಗಳು ಸತ್ಯಾಗ್ರಹವನ್ನು ಆಧರಿಸಿವೆ. ಸತ್ಯಕ್ಕಾಗಿ ಅಂದರೆ ನ್ಯಾಯಕ್ಕಾಗಿ ಒತ್ತಾಯಿಸುವುದೇ ಸತ್ಯಾಗ್ರಹ. ಇದು ಮೋಸ, ವಂಚನೆ, ದೌರ್ಜನ್ಯ, ಹಿಂಸೆ, ದಬ್ಬಾಳಿಕೆ, ಅನ್ಯಾಯ ಮುಂತಾದ ಎಲ್ಲ ಕೆಡುಕುಗಳ ವಿರುದ್ಧ ಪ್ರತಿಭಟಿಸುವ ಒಂದು ಅತ್ಯಂತ ಶಕ್ತಿಶಾಲಿ ಸಾಧನವಾಗಿದೆ. ಆದರೆ ಹಿಂಸಾತ್ಮಕ ವಿಧಾನವನ್ನು ಅಳವಡಿಸಲು ಇಲ್ಲಿ ಅವಕಾಶವಿಲ್ಲ. ಸತ್ಯಾಗ್ರಹಿಯಾದವನು ತಾನೇ ಕಷ್ಟವನ್ನು ಅನುಭವಿಸುತ್ತಾ ತನ್ನ ವಿರೋಧಿಗಳನ್ನು ಪ್ರೀತಿಸಿ ಅವರ ಹೃದಯವನ್ನು ಪರಿವರ್ತಿಸುವ ಮೂಲಕ ಜಯ ಸಾಧಿಸುತ್ತಾನೆ. ಆದುರಿಂದ

ಸತ್ಯಾಗ್ರಹವು ಎಲ್ಲಾ ಕೆಡುಕುಗಳ ವಿರುದ್ಧ ಹೋರಾಡಲು ಅಳವಡಿಸಿಕೊಳ್ಳಬಹುದಾದ ಆತ್ಮಶಕ್ತಿಯಿಂದ ಕೂಡಿದ ಒಂದು ನೈತಿಕ ಅಸ್ತ್ರವಾಗಿದೆ. ಇದು ಧೈರ್ಯಶಾಲಿ ಹಾಗೂ ಶಕ್ತಿಶಾಲಿಗಳ ಅಸ್ತ್ರವೇ ಹೊರತು ಹೇಡಿಗಳ ಕೈಯಲ್ಲಿರುವ ಆಯುಧವಲ್ಲ.

ಸತ್ಯಾಗ್ರಹದ ತಂತ್ರಗಳು:

ಗಾಂಧೀಜಿಯವರು ಸತ್ಯಾಗ್ರಹವನ್ನು ಬಲಪ್ರಯೋಗಕ್ಕಿಂತ ಶ್ರೇಷ್ಠವಾದ ಶಕ್ತಿ ಎಂದಿದ್ದಾರೆ. ಈ ಮಾರ್ಗವನ್ನು ಅನುಸರಿಸುವವನು ಆತ್ಮಪರಿಶುದ್ಧತೆಯೊಂದಿಗೆ ನೈತಿಕ ಸ್ಥೈರ್ಯ, ಸತ್ಯನಿಷ್ಠೆ, ಕಷ್ಟಸಹಿಷ್ಣುತೆ ಮುಂತಾದ ಸದ್ಗುಣಗಳನ್ನು ಹೊಂದಿರಬೇಕು. ಅನ್ಯಾಯದ ವಿರುದ್ಧ ಹೋರಾಡಲು ಸತ್ಯಾಗ್ರಹಿಯು ಕೆಲವು ಮಾರ್ಗಗಳನ್ನು ಅನುಸರಿಸಬೇಕಾಗುತ್ತದೆ. ಈ ಮಾರ್ಗಗಳೇ ಸತ್ಯಾಗ್ರಹದ ತಂತ್ರಗಳು. ಅವುಗಳೆಂದರೆ:

1. ಅಸಹಕಾರ (Non Co-operation)

ಸಾರ್ವಜನಿಕ ಹಿತಕಾಯಬೇಕಾದ ಸರ್ಕಾರ ಅನ್ಯಾಯ, ದಬ್ಬಾಳಿಕೆ, ವಂಚನೆ, ಸ್ವಜನಪಕ್ಷಪಾತ ಮುಂತಾದ ತಪ್ಪುದಾರಿ ಹಿಡಿದಾಗ ಜನರು ಸರ್ಕಾರಕ್ಕೆ ನೀಡುತ್ತಿದ್ದ ಸಹಕಾರವನ್ನು ಹಿಂತೆಗೆದುಕೊಳ್ಳುವುದೇ ಅಸಹಕಾರ. ಈ ಮೂಲಕ ಆಡಳಿತ ಯಂತ್ರವನ್ನು ನಿಷ್ಕ್ರಿಯಗೊಳಿಸಬಹುದು. ಸರ್ಕಾರ ತನ್ನ ತಪ್ಪನ್ನು ತಿದ್ದಿಕೊಂಡು ಜನರಿಗೆ ನ್ಯಾಯ ನೀಡುವವರೆಗೆ ಅಸಹಕಾರವನ್ನು ಮುಂದುವರಿಸಬೇಕು. ಗಾಂಧೀಜಿಯವರು ಅಸಹಕಾರದ ಪ್ರಾಮುಖ್ಯತೆಯನ್ನು ಈ ಮಾತುಗಳಲ್ಲಿ ಹೇಳಿದ್ದಾರೆ- "ಎಂಥಹ ನಿರಂಕುಶ ಸರ್ಕಾರವೂ ಜನರ ಇಚ್ಛೆಯಿಲ್ಲದೆ ಅಧಿಕಾರದಲ್ಲಿ ಉಳಿಯಲಾರದು, ಅದು ಅಸಹಕಾರ ನೀತಿಯನ್ನು ಅನುಸರಿಸುತ್ತಿರುವ ಸತ್ಯಾಗ್ರಹಿಗಳಿಗೆ ಮಣಿಯಲೇಬೇಕಾಗುತ್ತದೆ". ಸತ್ಯಾಗ್ರಹಿಯು ಈ ಕೆಳಗಿನ ವಿಧಾನಗಳ ಮೂಲಕ ಅಸಹಕಾರ ಚಳುವಳಿಯನ್ನು ನಡೆಸಬಹುದು.

ಎ. ಹರತಾಳ (Hartal)

ಸರ್ಕಾರದ ದಮನಕಾರಿ ನೀತಿಗಳು, ದುರಾಡಳಿತ, ದಬ್ಬಾಳಿಕೆ, ಅನ್ಯಾಯದ ವಿರುದ್ಧದ ಪ್ರತಿಭಟನೆಯ ಸಂಕೇತವಾಗಿ ಜನರು ತಮ್ಮ ಕೆಲಸ ಕಾರ್ಯಗಳನ್ನು ಮತ್ತು ವಾಣಿಜ್ಯ ಚಟುವಟಿಕೆಗಳನ್ನು ಒಂದು ನಿರ್ದಿಷ್ಟ ಅವಧಿಯವರೆಗೆ ಸ್ಥಗಿತಗೊಳಿಸಿ ಪ್ರತಿಭಟಿಸುವುದೇ ಹರತಾಳ.

ಬಿ. ಸಾಮಾಜಿಕ ಬಹಿಷ್ಕಾರ (Social boycots)

ಸತ್ಯಾಗ್ರಹದಲ್ಲಿ ತೊಡಗಿದವರಿಗೆ ಯಾರು ಸಹಕಾರ ನೀಡುವುದಿಲ್ಲವೋ ಅಂತಹವರ ಜೊತೆ ಯಾವುದೇ ಮಾತು, ವ್ಯವಹಾರವಿಲ್ಲದೆ ದೂರವಿಡುವುದೇ ಸಾಮಾಜಿಕ ಬಹಿಷ್ಕಾರ.

ಇದು ಅಸಹಕಾರ ನೀಡಿದ ವ್ಯಕ್ತಿಗೆ ಬುದ್ಧಿ ಕಲಿಸುವ ಪ್ರಯತ್ನವಾಗಬೇಕೇ ಹೊರತು ಅವಮಾನಿಸುವ ಗುರಿ ಹೊಂದಿರಬಾರದು.

ಸಿ. ತಡೆಕಾವಲು (Picketing):

ವಿವಿಧ ಸಂಸ್ಥೆಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ವ್ಯಕ್ತಿಗಳನ್ನು ಕರ್ತವ್ಯಕ್ಕೆ ಹಾಜರಾಗದಂತೆ ತಡೆಯುವುದನ್ನು 'ತಡೆಕಾವಲು' ಎಂದು ಕರೆಯುತ್ತಾರೆ. ಆದರೆ ಇದಕ್ಕಾಗಿ ಬೆದರಿಕೆ ಒಡ್ಡುವುದು, ಅಸಭ್ಯವಾಗಿ ವರ್ತಿಸುವುದು, ದಬ್ಬಾಳಿಕೆ ನಡೆಸುವುದು ಇತ್ಯಾದಿ ಮಾಡಕೂಡದು.

2. ಕಾಯ್ದೆಭಂಗ ಚಳುವಳಿ (Civil Dis-obedience Movement):

ಸರ್ಕಾರವು ಕೈಗೊಳ್ಳುವ ನ್ಯಾಯಯುತವಲ್ಲದ ಹಾಗೂ ಸಮಾಜ ವಿರೋಧಿ ಕಾನೂನುಗಳನ್ನು ಉಲ್ಲಂಘಿಸುವುದನ್ನು 'ಕಾಯ್ದೆಭಂಗ' ಎಂದು ಗಾಂಧೀಜಿ ಕರೆದಿದ್ದಾರೆ. ಇದನ್ನು 'ನಾಗರಿಕ ಸವಿನಯ ನಿಯಮೋಲ್ಲಂಘನ' ಎಂದೂ ಹೇಳಲಾಗಿದೆ. ಇದೊಂದು ಪರಿಪೂರ್ಣ, ಪರಿಣಾಮಕಾರಿ, ರಕ್ತಪಾತರಹಿತ ವಿಧಾನ. ಈ ಉಲ್ಲಂಘನೆ ಯಾವುದೇ ಹಿಂಸೆಯಿಲ್ಲದೆ ಶಾಂತಿಯುತವಾಗಿರಬೇಕು. ಅಪಾಯಕಾರಿ ಕಾನೂನುಗಳು ರದ್ದಾಗುವವರೆಗೆ ಈ ಹೋರಾಟವನ್ನುಮುಂದುವರಿಸಬೇಕು. ಉದಾಹರಣೆಗೆ ಗಾಂಧೀಜಿಯವರು ದಂಡಿ ಸತ್ಯಾಗ್ರಹದಲ್ಲಿ ಉಪ್ಪನ್ನು ತಯಾರಿಸುವುದರ ಮೂಲಕ ಬ್ರಿಟಿಷ್ ಸರ್ಕಾರದ ಕಾಯ್ದೆಯನ್ನು ಉಲ್ಲಂಘಿಸಿದರು.

3. ಸ್ವಯಂ ಗಡಿಪಾರು: (ಹಿಜ್ರತ್- Hijrat)

ಸರ್ಕಾರ ಅಥವಾ ವ್ಯಕ್ತಿಗಳ ದಬ್ಬಾಳಿಕೆಯಿಂದ ಪಾರಾಗಲು ಸ್ವಇಚ್ಛೆಯಿಂದ ತನ್ನ ಸ್ವಂತ ವಾಸಸ್ಥಳವನ್ನು ತ್ಯಜಿಸಿ ಬೇರೆ ಪ್ರದೇಶಕ್ಕೆ ಹೋಗಿ ನೆಲೆಸುವುದಕ್ಕೆ 'ಹಿಜ್ರತ್' ಎಂದು ಕರೆಯುತ್ತಾರೆ. ಅನ್ಯಾಯದ ವಿರುದ್ಧ ಸತ್ಯಾಗ್ರಹವನ್ನು ಕೈಗೊಳ್ಳಲು ಸಾಧ್ಯವಿಲ್ಲದಿದ್ದಾಗ ಮಾತ್ರ ಒಬ್ಬ ವ್ಯಕ್ತಿಯು ಈ ಮಾರ್ಗವನ್ನು ಅನುಸರಿಸಬಹುದು. ಇದನ್ನು ಕೈಗೊಳ್ಳುವುದಕ್ಕೆ ಅಪಾರ ಧೈರ್ಯ, ಸ್ಥೈರ್ಯ, ಮಾನಸಿಕ ಸ್ಥಿರತೆ ಹಾಗೂ ತ್ಯಾಗ ಮನೋಭಾವನೆ ಬೇಕಾಗುತ್ತದೆ.

4. ಉಪವಾಸ (Fasting)

ಗಾಂಧೀಜಿಯವರ ಪ್ರಕಾರ ಉಪವಾಸವು ಅತ್ಯಂತ ಪರಿಣಾಮಕಾರಿ ಹಾಗೂ ತೀಕ್ಷ್ಣವಾದ ಸತ್ಯಾಗ್ರಹದ ತಂತ್ರವಾಗಿದೆ. ಅನ್ಯಾಯ, ದೌರ್ಜನ್ಯ, ಶೋಷಣೆ ಮುಂತಾದ ದುಷ್ಕೃತ್ಯಗಳಲ್ಲಿ ತೊಡಗಿದವರ ಹೃದಯವನ್ನು ಪರಿವರ್ತಿಸಿ ಸನ್ಮಾರ್ಗದಲ್ಲಿ ನಡೆಯುವಂತೆ ಪ್ರೇರೇಪಿಸಲು ಸತ್ಯಾಗ್ರಹಿಯು ಉಪವಾಸವನ್ನು ಕೈಗೊಳ್ಳಬೇಕು. ಉಪವಾಸವನ್ನು ಕೈಗೊಳ್ಳುವ ವ್ಯಕ್ತಿಯು ಶಾರೀರಿಕವಾಗಿ ಮತ್ತು ಮಾನಸಿಕವಾಗಿ ಸದೃಢನಾಗಿರಬೇಕು. ಸತ್ಯ, ನೀತಿ, ಪರಿಶುದ್ಧ ಮನಸ್ಸು, ಪ್ರಾಮಾಣಿಕತೆ, ಶಿಸ್ತು ಹಾಗೂ ಸೌಜನ್ಯ ಮುಂತಾದ ಸದ್ಗುಣಗಳಿಂದ ಕೂಡಿದ ವ್ಯಕ್ತಿಯಿಂದ ಮಾತ್ರ ಉಪವಾಸ ಸತ್ಯಾಗ್ರಹ ಕೈಗೊಳ್ಳಲು ಸಾಧ್ಯ ಎಂಬುದು ಗಾಂಧೀಜಿಯವರ

ಅಭಿಪ್ರಾಯ. ಉಪವಾಸ ಸತ್ಯಾಗ್ರಹವು ಅತ್ಯಂತ ಅಪಾಯಕಾರಿ. ಪ್ರತಿಭಟನೆಯ ಎಲ್ಲಾ ವಿಧಾನಗಳು ವಿಫಲವಾದ ನಂತರ ಮಾತ್ರ ಅಂತಿಮ ಅಸ್ತ್ರವಾಗಿ ಇದನ್ನು ಬಳಸಿಕೊಳ್ಳಬೇಕು ಎಂದು ಗಾಂಧೀಜಿಯವರು ಎಚ್ಚರಿಸಿದ್ದಾರೆ.

5. ಮುಷ್ಕರ (Strike)

ತಮ್ಮ ನ್ಯಾಯಯುತವಾದ ಬೇಡಿಕೆಗಳನ್ನು ಈಡೇರಿಸಿಕೊಳ್ಳಲು ಕಾರ್ಮಿಕರು ಬಳಸುವ ಪ್ರತಿಭಟನೆಯ ಅಸ್ತ್ರವೇ ಮುಷ್ಕರ. ಬೇಡಿಕೆಯು ನ್ಯಾಯಯುತವಾಗಿರಬೇಕು. ಮುಷ್ಕರವನ್ನು ಪದೇ ಪದೇ ಕೈಗೊಳ್ಳುವುದರಿಂದ ಅದರ ಮೌಲ್ಯ ಕುಸಿಯುತ್ತದೆ. ಮುಷ್ಕರವು ಹಿಂಸಾತ್ಮಕ ರೂಪವನ್ನು ತಾಳದೆ ಶಾಂತಿಯುತವಾಗಿರಬೇಕು. ಮುಷ್ಕರದಿಂದ ಅಗತ್ಯ ಸೇವೆಗಳಿಗೆ ಧಕ್ಕೆಯುಂಟಾಗಬಾರದು. ಸಾರ್ವಜನಿಕ ಆಸ್ತಿಗಳನ್ನು ಹಾನಿ ಮಾಡಬಾರದು. ಮುಷ್ಕರದ ಮೇಳೆ ವೈಯಕ್ತಿಕ ದ್ವೇಷ ಸಾಧನೆ ಸಲ್ಲದು ಎಂದು ಗಾಂಧೀಜಿಯವರು ಎಚ್ಚರಿಸಿದ್ದಾರೆ.

ಒಟ್ಟಿನಲ್ಲಿ ಸತ್ಯಾಗ್ರಹವು ಅನ್ಯಾಯ, ದಬ್ಬಾಳಿಕೆ, ಶೋಷಣೆಗಳ ವಿರುದ್ಧ ಹೋರಾಡುವ ಪರಿಣಾಮಕಾರಿ ನೈತಿಕ ಅಸ್ತ್ರವಾಗಿದೆ. ಇದರ ಉದ್ದೇಶ ವಿರೋಧಿಗಳ ಮನ ಪರಿವರ್ತನೆಯೇ ಹೊರತು ಪ್ರತೀಕಾರವಲ್ಲ. ಆಧುನಿಕಯುಗದಲ್ಲಿ ಸತ್ಯಾಗ್ರಹ ಪ್ರಸ್ತುತತೆಯನ್ನು ಅರಿತ ಸ್ಟ್ಯಾನಿಜೋನ್ಸ್‌ರವರು "ಸತ್ಯಾಗ್ರಹವನ್ನು ಮಹಾತ್ಮಗಾಂಧಿಯವರು ವಿಶ್ವಕ್ಕೆ ನೀಡಿದ ಮಹಾನ್ ಕೊಡುಗೆ" ಎಂದು ಕೊಂಡಾಡಿದ್ದಾರೆ.

3.4 ಸರ್ವೋದಯ (Sarvodaya)

ಸರ್ವೋದಯವೆಂದರೆ ಎಲ್ಲರ ಏಳಿಗೆ ಅಥವಾ ಅಭ್ಯುದಯ. ಸರ್ವೋದಯ ಎಂಬ ಪದವನ್ನು ಗಾಂಧೀಜಿಯವರು 1904 ರಲ್ಲಿ ಜಾನ್‌ರಸ್ಕಿನ್‌ರವರು ಬಳಸಿದ 'ಅನ್ ಟು ದಿ ಲಾಸ್ಟ್' ಎಂಬ ಪದಕ್ಕೆ ಪರ್ಯಾಯವಾಗಿ ಬಳಸಿದರು. ಸರ್ವೋದಯವು ಗಾಂಧಿವಾದ ಮತ್ತು ಸಮಾಜವಾದಗಳ ಮಿಶ್ರಣವಾಗಿದೆ. ಇದು ಗಾಂಧೀಜಿಯವರ ನಿಧನದ ನಂತರ ಮುಂದುವರಿದ ಗಾಂಧಿತತ್ವಗಳ ವಿಸ್ತೃತ ರೂಪ ಎನ್ನಬಹುದು. ಏಕೆಂದರೆ ಗಾಂಧಿ ವಿಚಾರಧಾರೆಗಳನ್ನು ಅವರ ಜೀವಿತಕಾಲದಲ್ಲಿ ಸಕ್ರಿಯ ಚಿಂತನಾ ವ್ಯವಸ್ಥೆ ಎಂದು ಗುರುತಿಸಲಾಗಲಿಲ್ಲ. ಗಾಂಧೀಜೀಯವರೇ ಹೇಳಿರುವಂತೆ "ಗಾಂಧಿವಾದ ಅಥವಾ ಗಾಂಧಿತತ್ವ ಎಂಬುವುದು ಇಲ್ಲ. ನಾನು ಶಾಶ್ವತವಾದ ಸತ್ಯವನ್ನು ನಮ್ಮ ಜೀವನಕ್ಕೆ ಅಳವಡಿಸಿಕೊಳ್ಳಲು ಮಾತ್ರ ಬೋಧಿಸಲು ಪ್ರಯತ್ನ ಪಡುತ್ತಿದ್ದೇನೆ."

ಗಾಂಧೀಜಿಯವರ ಅನುಯಾಯಿಗಳ ಒಳವಲಯವು ಅಧಿಕಾರ ಮತ್ತು ರಾಜಕೀಯದಿಂದ ದೂರ ಉಳಿದು ಅವರ ಉದಾತ್ತ ಆದರ್ಶ ಮತ್ತು ಚಿಂತನೆಗಳಿಗೆ ಬದ್ಧವಾಗಿತ್ತು. ವಿನೋಬಾ ಭಾವೆ, ಕಾಕಾ ಕಾಲೇಲ್ಕರ್, ಜಯಪ್ರಕಾಶ್ ನಾರಾಯಣ್ ಮುಂತಾದವರು ಇವರಲ್ಲಿ ಸೇರಿದ್ದಾರೆ. ಇವರೇ ಸರ್ವೋದಯ ತತ್ವಗಳ ಅನುಷ್ಠಾನಕಾರರು.

ಸರ್ವೋದಯವು ಯಾವುದೇ ಜಾತಿ, ಮತ, ಧರ್ಮ, ಬಡವ, ಶ್ರೀಮಂತ ಮುಂತಾದ ಭೇದವಿಲ್ಲದೇ ಸಮಾಜದ ಎಲ್ಲ ವರ್ಗಗಳ ಏಳಿಗೆಯನ್ನು ಸಾಧಿಸುವ ಗುರಿಯನ್ನು ಹೊಂದಿದೆ. ಸಾಮಾಜಿಕ, ಆರ್ಥಿಕ, ರಾಜಕೀಯ ಮತ್ತು ನೈತಿಕ ಸ್ವಾತಂತ್ರ್ಯವನ್ನು ಪಡೆಯುವುದು ಸರ್ವೋದಯ ತತ್ವದ ಬಹುಮುಖ ಉದ್ದೇಶವಾಗಿತ್ತು. ಇದು ದೀನ-ದಲಿತರ ಸೇವೆಯ ಮೂಲಕ ದೈವ ಸಾಕ್ಷಾತ್ಕಾರ ಸಾಧ್ಯವೆಂದು ಪ್ರತಿಪಾದಿಸುತ್ತದೆ. ಆಚಾರ್ಯ ವಿನೋಬಾ ಭಾವೆಯವರು ಭೂದಾನ ಚಳುವಳಿಯ ಮೂಲಕ ಸರ್ವೋದಯ ಸಿದ್ಧಾಂತವನ್ನು ಅನುಷ್ಠಾನಗೊಳಿಸಿದರು.

ಸರ್ವೋದಯ ಸಿದ್ಧಾಂತದ ಪ್ರಮುಖ ಲಕ್ಷಣಗಳು (ತತ್ವಗಳು)

1. ರಾಜ್ಯರಹಿತ ಸಮಾಜ (Stateless Society)

ಜನರನ್ನು ಹಿಂಸೆ ಮತ್ತು ಬಲಪ್ರಯೋಗದಿಂದ ಮುಕ್ತಗೊಳಿಸಲು ರಾಜ್ಯರಹಿತ ಸಮಾಜದ ನಿರ್ಮಾಣ ಅತ್ಯಗತ್ಯ ಎಂಬ ಅಂಶವನ್ನು ಸರ್ವೋದಯವು ಪ್ರತಿಪಾದಿಸುತ್ತದೆ.

2. ಪಕ್ಷರಹಿತ ಪ್ರಜಾಪ್ರಭುತ್ವ (Partyless Democracy)

ರಾಜಕೀಯ ಪಕ್ಷಪದ್ಧತಿಯು ದೇಶವನ್ನು ಅನೇಕ ಶತ್ರು ಪಾಳಯಗಳಾಗಿ ವಿಭಜಿಸುತ್ತದೆ. ಇದರಿಂದ ರಾಷ್ಟ್ರೀಯ ಏಕತೆಗೆ ಧಕ್ಕೆ ಬರುತ್ತದೆ. ಇದು ಅಲ್ಪಸಂಖ್ಯಾತರನ್ನು ನಿರ್ಲಕ್ಷಿಸಿ ಬಹುಸಂಖ್ಯಾತರ ಸರ್ವಾಧಿಕಾರಕ್ಕೂ ಎಡೆ ಮಾಡಿಕೊಡುತ್ತದೆ.

3. ಅಧಿಕಾರ ವಿಕೇಂದ್ರೀಕರಣ (De-centralisation of Power)

ಅಧಿಕಾರವು ಕೇಂದ್ರ ಹಾಗೂ ರಾಜ್ಯಗಳಲ್ಲಿ ಕೇಂದ್ರಿಕೃತವಾಗದೆ ಎಲ್ಲಾ ಗ್ರಾಮಗಳಿಗೂ ತಲುಪಬೇಕೆನ್ನುವುದೇ ಈ ಸಿದ್ಧಾಂತದ ಆಶಯವಾಗಿದೆ. ಪ್ರಜೆಗಳಿಗೆ ಆಡಳಿತದ ವಿವಿಧ ಹಂತಗಳಲ್ಲಿ ಭಾಗವಹಿಸಲು ಅವಕಾಶ ನೀಡುವ ಸಲುವಾಗಿ ಇದು ಪಂಚಾಯತ್‌ರಾಜ್ ವ್ಯವಸ್ಥೆಯನ್ನು ಸಮರ್ಥಿಸುತ್ತದೆ.

4. ಗ್ರಾಮಗಳ ಸ್ವಾಯತ್ತತೆ (Autonomy to Villages)

ಸ್ವಾವಲಂಬಿ ಮತ್ತು ಸ್ವಾಯತ್ತ ಗ್ರಾಮಗಳ ಸ್ಥಾಪನೆಯೇ ಸರ್ವೋದಯ ತತ್ವದ ಮೂಲ ಉದ್ದೇಶವಾಗಿದೆ. ಆಹಾರ, ಬಟ್ಟೆ, ಆಡಳಿತ, ರಕ್ಷಣೆ ಮುಂತಾದ ಅಗತ್ಯಗಳಿಗಾಗಿ ಗ್ರಾಮಗಳು ರಾಜ್ಯ ಅಥವಾ ಕೇಂದ್ರ ಸರ್ಕಾರವನ್ನು ಅವಲಂಬಿಸದೆ ಅವುಗಳನ್ನು ತಾವೇ ಪೂರೈಸಿಕೊಳ್ಳುವಂತಾಗಬೇಕು. 'ಗಾಂಧೀಜಿಯವರ ಚರಕ' ಸ್ವಾವಲಂಬನೆಯ ಹೆಗ್ಗುರತಾಗಬೇಕೆಂಬುದು ಸರ್ವೋದಯದ ಪ್ರತಿಪಾದನೆಯಾಗಿದೆ.

5. ಸಾಮೂಹಿಕ ಆಸ್ತಿ (Common Property)

ಸರ್ವೋದಯ ಖಾಸಗಿ ಆಸ್ತಿಗೆ ಬದಲಾಗಿ ಸಾಮೂಹಿಕ ಆಸ್ತಿಯ ಪರಿಕಲ್ಪನೆಯನ್ನು ಪ್ರತಿಪಾದಿಸುತ್ತದೆ. ಪ್ರತಿಯೊಬ್ಬನೂ ತನ್ನ ಸಾಮರ್ಥ್ಯಕ್ಕನುಗುಣವಾಗಿ ಕೆಲಸ ಮಾಡಬೇಕು ಮತ್ತು ತನ್ನ ಅವಶ್ಯಕತೆಗೆ ಅನುಗುಣವಾಗಿ ಸಮಾಜದಿಂದ ಪ್ರತಿಫಲವನ್ನು ಪಡೆಯಬೇಕು. ಈ ತತ್ವವನ್ನು 'ಧರ್ಮದರ್ಶಿತ್ವ' ಟ್ರಸ್ಟಿಶಿಪ್) ಎಂದು ಕರೆಯಲಾಗುತ್ತದೆ.

6. ಅಹಿಂಸೆ (Non Violence)

ಸರ್ವೋದಯವು ಮಾನವನ ಹೃದಯವನ್ನು ಪರಿವರ್ತಿಸುವ ಚಳುವಳಿಯಾಗಿರುವುದರಿಂದ ಹಿಂಸೆಗೆ ಇಲ್ಲಿ ಅವಕಾಶವಿಲ್ಲ. ಶೋಷಣೆ ಮತ್ತು ಅನ್ಯಾಯಗಳಿಂದ ಮುಕ್ತವಾದ ಸಮಾಜ ನಿರ್ಮಾಣವೇ ಈ ಚಳುವಳಿಯ ಮುಖ್ಯ ಉದ್ದೇಶವಾಗಿದೆ.

7. ಭೂದಾನ (Bhoodhana)

ಆಸ್ತಿವಂತರು ತಮ್ಮ ಆಸ್ತಿಯ ಒಂದು ಭಾಗವನ್ನು ಭೂರಹಿತ ಕಾರ್ಮಿಕರಿಗೆ ಸ್ವ-ಇಚ್ಛೆಯಿಂದ ದಾನ ಮಾಡಬೇಕು. ಈ ಮೂಲಕ ಸಮಾಜದಲ್ಲಿ ಎಲ್ಲಾ ವಿಧದ ಆರ್ಥಿಕ ಅಸಮಾನತೆಯನ್ನು ಸರಿಪಡಿಸಬಹುದೆಂಬುದು ಸರ್ವೋದಯ ತತ್ವದ ಅನುಷ್ಠಾನಕಾರರಾದ ಆಚಾರ್ಯ ವಿನೋಬಾಭಾವೆಯವರ ಅಭಿಮತವಾಗಿದೆ. ಜಯಪ್ರಕಾಶ್ ನಾರಾಯಣ್‌ರವರ ಪ್ರಕಾರ ಭೂದಾನವು ಪರಿವರ್ತನೆಯ ಬೃಹತ್ ಸಾಮೂಹಿಕ ಚಳುವಳಿ ಮತ್ತು ಚಿಂತನೆಯ ಸೃಷ್ಟಿಯಾಗಿದೆ. ಸರ್ವೋದಯವು ಉನ್ನತ ಉದ್ದೇಶ ಹಾಗೂ ಉದಾತ್ತ ಆದರ್ಶಗಳನ್ನು ಹೊಂದಿದೆ ಎನ್ನುವುದರಲ್ಲಿ ಎರಡು ಮಾತಿಲ್ಲ.

ಗಾಂಧೀಜಿಯವರ ಅಭಿಪ್ರಾಯಗಳನ್ನು ಹಲವರು ಟೀಕಿಸಿದ್ದಾರೆ. ಆದರೆ ಗಾಂಧೀಜಿಯವರು ಪ್ರತಿಪಾದಿಸಿರುವ ಮೌಲ್ಯಗಳು, ಸತ್ಯಾಗ್ರಹ ಮತ್ತು ಅಹಿಂಸೆಯ ಪರಿಕಲ್ಪನೆಗಳನ್ನು ನೋಡಿದಲ್ಲಿ ಜಗತ್ತಿನ ಬೇರಾವ ವ್ಯಕ್ತಿಯೂ ಇಷ್ಟು ಉನ್ನತ ಮಟ್ಟಕ್ಕೆ ಮುಟ್ಟಿಲ್ಲ ಎಂದು ಹೇಳಬಹುದು, ಗಾಂಧೀಜಿ ಕೇವಲ ವ್ಯಕ್ತಿಯಾಗಿರದೆ ಶಕ್ತಿಯಾಗಿದ್ದರು. ಈ ತತ್ವವನ್ನು ಅಳವಡಿಸಿ ರಾಜನೀತಿಯ ಸ್ವರೂಪವನ್ನೇ ಅವರು ಬದಲಿಸಿದರು. ಅವರು ರಾಮರಾಜ್ಯದ ಸುಂದರ ಕಲ್ಪನೆಯನ್ನು ನಮಗೆ ನೀಡಿರುವರು. ಅವರ ರಾಮರಾಜ್ಯವು ಪ್ರಜಾಪ್ರಭುತ್ವವೇ ಆಗಿರುತ್ತದೆ. ಅಲ್ಲಿ ಪ್ರಜೆಗಳೆಲ್ಲರು ಶಿಸ್ತಿನಿಂದಲೂ, ಸತ್ಯಮಾರ್ಗದಿಂದಲೂ ಮತ್ತು ಅಹಿಂಸಾತ್ಮಕವಾಗಿಯೂ ಸ್ವಯಂಪ್ರೇರಿತವಾಗಿ ಜೀವಿಸುತ್ತಾರೆ. ಇದೊಂದು ನೈತಿಕತೆಯಿಂದ ಕೂಡಿದ ರಾಜಕೀಯ ಆದರ್ಶವೇ ಸರಿ. ಒಟ್ಟಿನಲ್ಲಿ ಧರ್ಮ, ನ್ಯಾಯ, ಸಮಾನತೆ ಮತ್ತು ಸಂತೋಷದಿಂದ ಕೂಡಿದ ಸುಖೀ ಸಾಮ್ರಾಜ್ಯ ಸ್ಥಾಪನೆಯಾಗಬೇಕೆಂಬುದು ಅವರ ಮನದಾಳದ ಇಂಗಿತವಾಗಿತ್ತು. ಗಾಂಧೀಜಿ ಕೇವಲ ಒಬ್ಬ ಆದರ್ಶವಾದಿಯಲ್ಲ, ನುಡಿದಂತೆ ನಡೆದು ಸಾಧಿಸಿ ತೋರಿಸಿದ ವಾಸ್ತವಿಕವಾದಿ- ಮಹಾತ್ಮ.

ಅಭ್ಯಾಸ

I. ಒಂದೊಂದು ವಾಕ್ಯದಲ್ಲಿ ಉತ್ತರಿಸಿ:

1. ಗಾಂಧೀಜಿಯವರು ಯಾವಾಗ ಜನಿಸಿದರು?
2. ಗಾಂಧೀಜಿಯವರ ಜನ್ಮಸ್ಥಳ ಯಾವುದು?
3. ಗಾಂಧೀಜಿಯವರ ಆತ್ಮಚರಿತ್ರೆಯ ಹೆಸರೇನು?
4. ಗಾಂಧೀಜಿಯವರ ಮೇಲೆ ಪ್ರಭಾವ ಬೀರಿದ ಎರಡು ಧಾರ್ಮಿಕ ಗ್ರಂಥಗಳಾವುವು?
5. ಗಾಂಧೀಜಿಯವರು ಯಾವಾಗ ನಿಧನ ಹೊಂದಿದರು?
6. ಗಾಂಧೀಜಿಯವರು ಪ್ರಕಟಿಸಿದ ಎರಡು ಪತ್ರಿಕೆಗಳ ಹೆಸರೇನು?

II. ಖಾಲಿ ಬಿಟ್ಟ ಸ್ಥಳಗಳಲ್ಲಿ ಸರಿಯಾದ ಉತ್ತರಗಳನ್ನು ಬರೆಯಿರಿ:

1. ಗಾಂಧೀಜಿಯವರ ಪೂರ್ಣ ಹೆಸರು _______ .
2. ಗಾಂಧೀಜಿಯವರ ತಾಯಿಯ ಹೆಸರು _______ .
3. ಭೂದಾನ ಚಳುವಳಿಯ ಮುಖಂಡರು _______ .
4. ಗಾಂಧೀಜಿಯವರು ಅಹಿಂಸೆಯ ಅಸ್ತ್ರವಾದ ಸತ್ಯಾಗ್ರಹವನ್ನು ಪ್ರಥಮ ಬಾರಿಗೆ ದಲ್ಲಿ _______ ಪ್ರಯೋಗಿಸಿದರು.
5. ‘ಅನ್ ಟು ದಿ ಲಾಸ್ಟ್’ ಕೃತಿಯನ್ನು ರಚಿಸಿದವರು _______.
6. ಪ್ರತಿವರ್ಷ ಜನವರಿ 30 ನ್ನು _______ ದಿನವನ್ನಾಗಿ ಆಚರಿಸುತ್ತೇವೆ.

III. ಎರಡು ಅಥವಾ ಮೂರು ವಾಕ್ಯಗಳಲ್ಲಿ ಉತ್ತರಿಸಿ:

1. ಸತ್ಯಾಗ್ರಹ ಅರ್ಥ ತಿಳಿಸಿ.
2. ಹರತಾಳ ಎಂದರೇನು?
3. ತಡೆಕಾವಲು (ಪಿಕೇಟಿಂಗ್) ಎಂದರೇನು?
4. ಕಾಯ್ದೆಭಂಗ ಚಳುವಳಿಯ ಸ್ವರೂಪ ತಿಳಿಸಿ.
5. ಸತ್ಯಾಗ್ರಹಿಯಲ್ಲಿರಬೇಕಾದ ಉತ್ತಮ ಗುಣಗಳಾವುವು?
6. ಸರ್ವೋದಯ ಎಂದರೇನು?

IV. ಐದು ಅಥವಾ ಆರು ವಾಕ್ಯಗಳಲ್ಲಿ ಉತ್ತರಿಸಿ:

1. ಗಾಂಧೀಜಿಯವರ ಕೃತಿಗಳನ್ನು ಪಟ್ಟಿಮಾಡಿ.
2. ಅಸಹಕಾರ ಎಂದರೇನು? ಇದರ ವಿಧಗಳಾವುವು?
3. ಉಪವಾಸ ಮುಷ್ಕರದ ಬಗ್ಗೆ ಟಿಪ್ಪಣಿ ಬರೆಯಿರಿ.
4. ಗ್ರಾಮಗಳ ಸ್ವಾಯತ್ತತೆ ಎಂದರೇನು? ವಿವರಿಸಿ.

V. ಎಂಟು ಅಥವಾ ಹತ್ತು ವಾಕ್ಯಗಳಲ್ಲಿ ಉತ್ತರಿಸಿ:

1. ಸತ್ಯಾಗ್ರಹದ ತಂತ್ರಗಳಾವುವು? ವಿವರಿಸಿ.
2. ಸರ್ವೋದಯದ ಲಕ್ಷಣಗಳನ್ನು ವಿವರಿಸಿ.
3. "ಗಾಂಧೀಜಿಯವರು ಒಬ್ಬ ವ್ಯಕ್ತಿಯಲ್ಲ ಅವರೊಂದು ಶಕ್ತಿ" ಈ ಹೇಳಿಕೆಯನ್ನು ನಿಮ್ಮ ಮಾತುಗಳಲ್ಲಿ ಸಮರ್ಥಿಸಿ.

ಸಲಹಾತ್ಮಕ ಚಟುವಟಿಕೆಗಳು:

1. "ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿ ಗಾಂಧೀಜಿಯವರ ಪಾತ್ರ" ಈ ವಿಷಯದ ಕುರಿತು ಒಂದು ಕಿರು ಪ್ರಬಂಧ ಸಿದ್ಧಪಡಿಸಿ.

2. "ಸಮಕಾಲೀನ ಪ್ರಪಂಚದಲ್ಲಿ ಗಾಂಧಿತತ್ವಗಳ ಔಚಿತ್ಯ" ವಿಷಯದ ಕುರಿತು ಸಂವಾದ ಅಥವಾ ಚರ್ಚಾ ಸ್ಪರ್ಧೆ ಏರ್ಪಡಿಸಿ.

ಅಧ್ಯಾಯ- 4 ಡಾ. ಬಾಬಾ ಸಾಹೇಬ್ ಬಿ. ಆರ್. ಅಂಬೇಡ್ಕರ್

(Dr. Baba Saheb B.R. Ambedkar 1891-1956)

ಕಲಿಕಾ ಉದ್ದೇಶಗಳು:

1. ಡಾ. ಬಿ. ಆರ್. ಅಂಬೇಡ್ಕರ್ ರವರ ಜೀವನ ಮತ್ತು ಸಾಧನೆಯನ್ನು ಅರಿಯುವುದು.
2. ಅಂಬೇಡ್ಕರ್ ರವರ ಕೃತಿಗಳನ್ನು ಪರಿಚಯಿಸಿಕೊಳ್ಳುವುದು.
3. ಅಂಬೇಡ್ಕರ್ ರವರ ಹೋರಾಟಗಳಿಂದ ಪ್ರೇರಣೆ ಪಡೆಯುವುದು.
4. ಅಂಬೇಡ್ಕರ್ ರವರ ರಾಜಕೀಯ ಚಿಂತನೆಯನ್ನು ಮನನ ಮಾಡಿಕೊಳ್ಳುವುದು.
5. ಭಾರತದ ಸಂವಿಧಾನಕ್ಕೆ ಅಂಬೇಡ್ಕರ್ ರವರ ಕೊಡುಗೆಯನ್ನು ಮೆಚ್ಚಿಕೊಳ್ಳುವುದು.

ಡಾ. ಬಿ. ಆರ್. ಅಂಬೇಡ್ಕರ್ ರವರು "ಸಾಮಾಜಿಕ ನ್ಯಾಯಕ್ಕಾಗಿ ಸಮರ ಸಾರಿದ ವ್ಯಕ್ತಿ. ಇವರು ಸ್ವಾತಂತ್ರ್ಯ, ಸಮಾನತೆ, ಸಹೋದರತೆ ಮತ್ತು ಜೀವನದ ನ್ಯಾಯಸಮ್ಮತ ಅನುಕೂಲಗಳಿಗಾಗಿ ಹೋರಾಟ ನಡೆಸಿದರು. ಭಾರತದ ಇತಿಹಾಸದಲ್ಲಿ ಇವರಿಗೆ ಅಜರಾಮರ ಸ್ಥಾನವಿದೆ."

-ಲಾರ್ಡ್ ಮೌಂಟ್ ಬ್ಯಾಟನ್.

ಪೀಠಿಕೆ:

ಭಾರತ ಕಂಡ ಶ್ರೇಷ್ಠ ಚಿಂತಕರಲ್ಲಿ 'ಭಾರತ ರತ್ನ' ಡಾ. ಬಾಬಾ ಸಾಹೇಬ್ ಬಿ. ಆರ್. ಅಂಬೇಡ್ಕರ್ ಅಗ್ರ ಮಾನ್ಯರು. ಇವರು ಬದುಕಿದ 65 ವರ್ಷಗಳಲ್ಲಿ ನೊಂದ ಸಮುದಾಯಕ್ಕೆ ಬೆಳಕಾದರು. ಮಾನವೀಯತೆ ಮತ್ತು ಮೇದಾವಿತನವನ್ನು ಮೈಗೂಡಿಸಿಕೊಂಡು ವೈರುಧ್ಯಮಯ ಸಮಾಜವನ್ನು ವೈಜ್ಞಾನಿಕವಾಗಿ ವಿಶ್ಲೇಷಿಸಿದರು. ಆದ್ದರಿಂದಾಗಿಯೇ 'ಭಾರತದ ಸಮಾಜ ವಿಜ್ಞಾನಗಳ ಪಿತಾಮಹ' ರೂ ಆದರು. ಜಾತಿ, ಲಿಂಗ, ಧರ್ಮ ಮತ್ತು ಮತಗಳ ಆಧಾರದ ಮೇಲೆ ಪೆಡಂಭೂತವಾಗಿ ಬೆಳೆದ ಅನ್ಯಾಯ, ಅಸಮಾನತೆ, ಶೋಷಣೆ ಮತ್ತು ದಬ್ಬಾಳಿಕೆಗಳಿಂದ ಕೂಡಿದ ಸಮಾಜಕ್ಕೆ ಸವಾಲಾದರು. ಅಸಮಾನತೆಯ ಸಮಾಜಕ್ಕೆ ಸ್ವಾತಂತ್ರ್ಯ, ಸಮಾನತೆ, ಭ್ರಾತೃತ್ವ, ನ್ಯಾಯ ಮತ್ತು ವ್ಯಕ್ತಿಘನತೆಯ ಧೀಕ್ಷೆ ನೀಡಿದ ದಾರ್ಶನಿಕರು ಮತ್ತು ಸುಧಾರಕರು ಆದರು. ತಮ್ಮ ಮೌಲ್ಯ ಭರಿತ ಚಿಂತನೆ, ಚಳುವಳಿ, ಸಂವಿಧಾನ ಮತ್ತು ಕಾನೂನಿನ ಮೂಲಕ ಪರಿಹಾರ ಸೂಚಿಸಿ ಪರಿವರ್ತನೆಯ ಹರಿಕಾರರಾದರು.

ಮಾನವೀಯತೆ ಮತ್ತು ಮೇಧಾವಿತನದಿಂದಲೆ ವಿಶ್ವಮಾನ್ಯ ಶಕ್ತಿಯಾಗಿ ಬೆಳೆದ ಡಾ. ಬಿ. ಆರ್. ಅಂಬೇಡ್ಕರ್ ಮನುಕುಲವು ಮರೆಯದ ಧ್ರುವತಾರೆಯಾಗಿದ್ದಾರೆ. ಆದ್ದರಿಂದಲೇ ವಿಶ್ವಸಂಸ್ಥೆಯೂ ಇವರು ಹುಟ್ಟಿದ ದಿನವನ್ನು 'ವಿಶ್ವಜ್ಞಾನ ದಿನ' (World Knowledge Day)

ವನ್ನಾಗಿ ಆಚರಿಸಲು ಕರೆನೀಡಿದೆ. ಇವರ ಪರಿಶ್ರಮದ ಜೀವನ ಅನುಪಮ ಧ್ಯೇಯ, ಚಿಂತನೆ, ಚಳುವಳಿಗಳು ಮತ್ತು ಕೊಡುಗೆಗಳೆಲ್ಲವೂ ನಮ್ಮೆಲ್ಲರಿಗೂ ಎಂದೂ ಬತ್ತದ ಅವಿಸ್ಮರಣೀಯ ಸ್ಫೂರ್ತಿಯ ಚಿಲುಮೆಗಳಾಗಿವೆ.

ಜೀವನ ಚಿತ್ರಣ:



ಭೀಮರಾವ್ ರಾಮ್‌ಜೀ ಅಂಬೇಡ್ಕರ್ ಅವರು ಏಪ್ರಿಲ್ 14, 1891 ರಲ್ಲಿ ಮಧ್ಯಪ್ರದೇಶದ ಮಾಹೊ ಎಂಬ ಗ್ರಾಮದಲ್ಲಿ ಜನಿಸಿದರು. ತಂದೆ ರಾಮ್‌ಜೀ ಸಕ್ಪಾಲ್, ತಾಯಿ ಭೀಮಾಬಾಯಿಯವರ 14 ನೇ ಮಗನಾಗಿದ್ದರು. ಇವರು ಮೂಲತ: ಮಹರ್ ಎಂಬ ಜಾತಿಗೆ ಸೇರಿದವರು. ಇವರ ತಂದೆ ರಾಮ್‌ಜೀ ಸಕ್ಪಾಲ್‌ರು ಸ್ವಭಾವತಃ ನೇರ ನಡೆ-ನುಡಿಯುಳ್ಳವರಾಗಿದ್ದರು ಮತ್ತು ಅವರಿಗೆ ಇಂಗ್ಲೀಷ್ ಭಾಷೆಯು ತಿಳಿದಿತ್ತು. ಇವರು ಸೈನ್ಯ ತರಬೇತಿ ಶಾಲೆಯಲ್ಲಿ 14 ವರ್ಷಗಳ ಕಾಲ ಬೋಧಕರಾಗಿ ಸೇವೆ ಸಲ್ಲಿಸಿದ್ದರು.

ಭೀಮರಾವ್ ಅವರು 5 ವರ್ಷದ ಬಾಲಕನಾಗಿದ್ದಾಗ ದಾಪೋಲಿಯ ಮರಾಠಿ ಶಾಲೆಗೆ ವಿದ್ಯಾಭ್ಯಾಸಕ್ಕಾಗಿ ಸೇರಿದರು. ಇವರು 6 ನೇ ವಯಸ್ಸಿನಲ್ಲಿದ್ದಾಗಲೇ ತಾಯಿ ಭೀಮಾಭಾಯಿ

ನಿಧನರಾದರು. ನಂತರ ತಂದೆ ರಾಮ್‌ಜೀ ಸಕ್ಪಾಲ್ ಹಾಗೂ ಅವರ ಚಿಕ್ಕಮ್ಮ ಮೀರಾಬಾಯಿಯವರ ಪಾಲನೆ ಪೋಷಣೆಯಲ್ಲಿ ಬೆಳೆದರು. ನಂತರ ದಾಪೋಲಿಯಿಂದ ಸತಾರಕ್ಕೆ ಬಂದು ಪ್ರೌಢಶಾಲೆಯಲ್ಲಿ ವಿದ್ಯಾಭ್ಯಾಸ ಮಾಡುತ್ತಿರುವಾಗ ಇವರ ಸುದೈವವೆನ್ನುವಂತೆ 'ಅಂಬೇವಾಡೆಕರ್' ಎಂಬ ಶಿಕ್ಷಕರ ಅಪಾರ ಪ್ರೀತಿ, ವಾತ್ಸಲ್ಯ ಮತ್ತು ಜ್ಞಾನದ ಕೃಪಾಕಟಾಕ್ಷಕ್ಕೆ ಪಾತ್ರರಾದರು.ಈ ಶಿಕ್ಷಕರು ತಮ್ಮ ಮನೆತನದ ಹೆಸರಾದ ಅಂಬೇವಾಡೆಕರ್ ಎಂಬುದನ್ನು ಅಂಬೇಡ್ಕರ್ ಎಂದು ಪರಿವರ್ತಿಸಿ 'ಭೀಮ್‌ರಾವ್ ರಾಮ್‌ಜೀ ಅಂಬೇಡ್ಕರ್' ಎಂದು ನಾಮಕರಣ ಮಾಡಿದರು.

ಅಂಬೇಡ್ಕರ್ ರವರು ತಮ್ಮ ಜೀವನುದುದ್ದಕ್ಕೂ ಅನೇಕ ಕಷ್ಟ-ನಷ್ಟ, ಅವಮಾನಗಳನ್ನು ಎದುರಿಸಬೇಕಾಯಿತು. ಇವರು ಓದುತ್ತಿದ್ದ ಶಾಲೆಯಲ್ಲಿ ಮನೆಯಿಂದ ತಂದ ಹರಿದ ಗೋಣಿಚೀಲವನ್ನು ನೆಲಕ್ಕೆ ಹಾಸಿಕೊಂಡು ಅದರ ಮೇಲೆ ಪ್ರತ್ಯೇಕವಾಗಿ ಕುಳಿತುಕೊಂಡು ಪಾಠ ಪ್ರವಚನ ಕೇಳಬೇಕಿತ್ತು. ಇತರ ಮಕ್ಕಳ ಸಾಲಿನಲ್ಲಿ ಪೀಠೋಪಕರಣಗಳ ಮೇಲೆ ಕುಳಿತುಕೊಳ್ಳಲು ಅವಕಾಶವಿರಲಿಲ್ಲ. ಮನೆಯಿಂದ ತಂದ ಊಟದ ಡಬ್ಬಿಗಳನ್ನು ಸಹ ಇತರ ಮಕ್ಕಳ ಊಟದ ಡಬ್ಬಿಗಳ ಸಾಲಿನಲ್ಲಿ ಇಡುವಂತಿರಲಿಲ್ಲ. ಆ ಮಕ್ಕಳೊಂದಿಗೆ ಬೆರೆತು ಮಾತನಾಡುವ ಮತ್ತು ಆಟವಾಡುವ ಬಾಲ್ಯ ಸಹಜ ಸೌಭಾಗ್ಯವು ಅವರಿಗೆ ಇರಲಿಲ್ಲ. ಶಿಕ್ಷಕರ ಅಸ್ಪೃಶ್ಯತೆಯ ಆಚರಣೆಯಿಂದಾಗಿ ಸಂಸ್ಕೃತ ಭಾಷೆಯನ್ನು ಕಲಿಯುವ ಅವರ ಮಹದಾಸೆಯು ಮಣ್ಣುಪಾಲಾಯಿತು. ಆದ್ದರಿಂದ ಅನಿವಾರ್ಯವಾಗಿ ಅಂಬೇಡ್ಕರ್ ಪರ್ಷಿಯನ್ ಭಾಷೆಯನ್ನು ದ್ವಿತೀಯ ಭಾಷೆಯನ್ನಾಗಿ ಅಭ್ಯಾಸ ಮಾಡುವಂತಾಯಿತು. ಇವೆಲ್ಲವೂ ಬಾಲಾವಸ್ಥೆಯಲ್ಲಿದ್ದ ಅಂಬೇಡ್ಕರ್ ರವರ ಸಂವೇದನಾಶೀಲ ಮನಸ್ಸಿನ ಮೇಲೆ ಅಗಾಧ ಪರಿಣಾಮವನ್ನುಂಟು ಮಾಡಿದವು. ಮುಂದೆ ಇವರು ಮೇಧಾವಿ ಮತ್ತು ಶ್ರೇಷ್ಠ ಮಾನವತಾವಾದಿಯಾಗಲು ನೆರವಾಯಿತು. ಭೀಮರಾವ್ ರಾಮ್‌ಜೀ ಅಂಬೇಡ್ಕರ್ ವಿದ್ಯಾಭ್ಯಾಸ ಮಾಡುತ್ತಿರುವಾಗಲೇ ಬಿಕ್ಕು ವಾಲಂಕರ್ ಎಂಬುವರ ಮಗಳಾದ ರಮಾಬಾಯಿಯವರನ್ನು ತಮ್ಮ 15 ನೇ ವಯಸ್ಸಿನಲ್ಲಿ ವಿವಾಹವಾದರು. ರಮಾಬಾಯಿಯವರು ಅಂಬೇಡ್ಕರ್ ರವರ ಪ್ರತಿ ಸಾಧನೆಗೂ ಬೆನ್ನೆಲುಬಾಗಿ ಪ್ರೇರಣೆಯಾದರು.

ವಿದ್ಯಾಭ್ಯಾಸ (Education):

ಅಂಬೇಡ್ಕರ್ ರವರಿಗೆ ಬಾಲ್ಯದಲ್ಲಿಯೇ ವಿದ್ಯಾಭ್ಯಾಸದ ಬಗ್ಗೆ ಅಪಾರ ಆಸಕ್ತಿಯಿತ್ತು. ಆದ್ದರಿಂದಲೇ ಇವರು ತಮ್ಮ ಅಸಾಧಾರಣ ಪ್ರತಿಭೆ ಮತ್ತು ಪರಿಶ್ರಮದ ಫಲವಾಗಿ 1907 ರಲ್ಲಿ ಮುಂಬಯಿಯ ಎಲ್ಫಿನ್‌ಸ್ಟನ್ ಪ್ರೌಢಶಾಲೆಯಲ್ಲಿ ಮೆಟ್ರಿಕ್ಯುಲೇಷನ್ ಪರೀಕ್ಷೆಯಲ್ಲಿ ಉತ್ತೀರ್ಣರಾದ ಪ್ರಪ್ರಥಮ ಅಸ್ಪೃಶ್ಯ ವಿದ್ಯಾರ್ಥಿ ಎಂಬ ಕೀರ್ತಿಗೆ ಬಾಜನರಾದರಲ್ಲದೇ ತಂದೆಯ ಮಹಾದಾಸೆಯನ್ನು ಪೂರೈಸಿದರು. ನಂತರ ಮುಂಬಯಿಯ ಎಲ್ಫಿನ್‌ಸ್ಟನ್ ಕಾಲೇಜಿಗೆ ಪ್ರವೇಶ ಪಡೆದು ಇಂಟರ್ ಮಿಡಿಯೇಟ್ ಪರೀಕ್ಷೆಯಲ್ಲಿ ತೇರ್ಗಡೆಯಾದರು. ಬರೋಡಾದ ಮಹಾರಾಜರಾದ ಸಯ್ಯಾಜೀರಾವ್ ಗಾಯಕ್‌ವಾಡರು ಅಂಬೇಡ್ಕರ್ ರ ಶೈಕ್ಷಣಿಕ ಸಾಧನೆಯನ್ನು ಮೆಚ್ಚಿ ತಿಂಗಳಿಗೆ 25 ರೂಪಾಯಿ ವಿದ್ಯಾರ್ಥಿವೇತನ ಘೋಷಿಸಿದರು. ನಂತರ 1913 ರಲ್ಲಿ ಎಲ್ಫಿನ್‌ಸ್ಟನ್ ಕಾಲೇಜಿನಲ್ಲಿ ಬಿ. ಎ. ಪದವಿಯಲ್ಲಿ ರಾಜಕೀಯ ಅರ್ಥಶಾಸ್ತ್ರ,

ಮಾನವಶಾಸ್ತ್ರ, ಇತಿಹಾಸ ವಿಷಯಗಳನ್ನು ಐಚ್ಛಿಕ ವಿಷಯಗಳನ್ನಾಗಿ ಹಾಗೂ ಪರ್ಷಿಯನ್ ಮತ್ತು ಇಂಗ್ಲೀಷ್ ವಿಷಯಗಳನ್ನು ಭಾಷಾ ವಿಷಯಗಳನ್ನಾಗಿ ಅಭ್ಯಸಿಸಿದರು.

1915 ರಲ್ಲಿ ಅಮೇರಿಕದ ಕೊಲಂಬಿಯಾ ವಿಶ್ವವಿದ್ಯಾನಿಲಯದಲ್ಲಿ ರಾಜಕೀಯ ಅರ್ಥಶಾಸ್ತ್ರ ವಿಷಯದಲ್ಲಿ ಸ್ನಾತಕೋತ್ತರ ಪದವಿಯನ್ನು, ಅರ್ಥಶಾಸ್ತ್ರದಲ್ಲಿ ಪಿ. ಎಚ್. ಡಿ ಪದವಿಯನ್ನು, ಅರ್ಥಶಾಸ್ತ್ರದಲ್ಲಿಯೇ ಡಿ. ಎಸ್ಸಿ ಪದವಿಯನ್ನು ಪಡೆದುಕೊಂಡರು. ಅದರಂತೆಯೇ ಲಂಡನ್ ನ ಗ್ರೇಸ್ ಇನ್ ಲಂಡನ್ ಲಾ ಸ್ಕೂಲ್ ನಲ್ಲಿ ಬಾರ್- ಅಟ್- ಲಾ ಮತ್ತು ಅರ್ಥಶಾಸ್ತ್ರದಲ್ಲಿಯೇ ಎಂ. ಎಸ್ಸಿ ಪದವಿಯನ್ನು ಪಡೆದುಕೊಂಡರು.

ಈ ಸಂದರ್ಭದಲ್ಲಿ ಇವರು ವ್ಯಾಸಂಗದುದ್ದಕ್ಕೂ ಗ್ರಂಥಾಲಯವನ್ನು ಸಮರ್ಥಕವಾಗಿ ಬಳಸಿಕೊಳ್ಳುತ್ತಿದ್ದರು. ಇವರು ಗ್ರಂಥಾಲಯಕ್ಕೆ ಹೋಗುವ ಪ್ರಥಮ ವ್ಯಕ್ತಿ ಮತ್ತು ಗ್ರಂಥಾಲಯದಿಂದ ನಿರ್ಗಮಿಸುವ ಕೊನೆಯ ವ್ಯಕ್ತಿಯೆಂದೇ ಸುಪರಿಚಿತರಾದರು. ತತ್ಪರಿಣಾಮವಾಗಿ ಖ್ಯಾತ ಅರ್ಥಶಾಸ್ತ್ರಜ್ಞ ಹಾಗೂ ಪ್ರಾಧ್ಯಾಪಕರೂ ಆದ ಆರ್. ಎಂ. ಸೆಲಗ್ಮನ್ ಅವರ ಅಚ್ಚುಮೆಚ್ಚಿನ ಶಿಷ್ಯರಾದರು.

ಡಾ. ಬಿ. ಆರ್ ಅಂಬೇಡ್ಕರ್ ರವರ ಶೈಕ್ಷಣಿಕ ಸಾಧನೆಯ ವಿವರ

ಪದವಿ	**ಪ್ರಬಂಧದ ಶೀರ್ಷಿಕೆ**	**ಪಡೆದ ವರ್ಷ**	**ನೀಡಿದ ವಿಶ್ವವಿದ್ಯಾನಿಲಯ**
ಎಂ. ಎ.	ಆಡ್ಮಿನಿಸ್ಟ್ರೆಶನ್ ಆಂಡ್ ಪೈನಾನ್ಸ ಆಪ್ ದಿ ಈಷ್ಟ್ ಇಂಡಿಯಾ ಕಂಪನಿ	1915	ಕೊಲಂಬಿಯಾ ವಿಶ್ವವಿದ್ಯಾನಿಲಯ
ಪಿ. ಹೆಚ್. ಡಿ	ದಿ ನ್ಯಾಷನಲ್ ಡಿವಿಡೆಂಟ್ ಆಪ್ ಇಂಡಿಯಾ: ಏ ಹಿಸ್ಟೋರಿಕಲ್ ಆಂಡ್ ಅನಾಲಿಟಿಕಲ್ ಸ್ಟಡಿ	1917	ಕೊಲಂಬಿಯಾ ವಿಶ್ವವಿದ್ಯಾನಿಲಯ
ಎಂ. ಎಸ್. ಸಿ	ಪ್ರಾವಿನ್ಸಿಯಲ್ ಡಿಸೆಂಟ್ರಲೈಜೇಸನ್ ಆಪ್ ಇಂಪಿರಿಯಲ್ ಪೈನಾನ್ಸ ಇನ್ ಬ್ರಿಟಿಷ್ ಇಂಡಿಯಾ	1921	ಲಂಡನ್ ವಿಶ್ವವಿದ್ಯಾನಿಲಯ
ಡಿ. ಎಸ್. ಸಿ	ದಿ ಪ್ರಾಬ್ಲಮ್ ಆಪ್ ರೂಪಿ-	1923	ಕೊಲಂಬಿಯಾ

	ಇಟ್ ಓರಿಜಿನ್ ಅಂಡ್ ಇಟ್ಸ್ ಸೆಲ್ಯೂಷನ್		ವಿಶ್ವವಿದ್ಯಾನಿಲಯ

ಇಂಗ್ಲೆಂಡ್‌ನ ಲಂಡನ್ ಸ್ಕೂಲ್ ಆಫ್ ಎಕನಾಮಿಕ್ಸ್ ಅಂಡ್ ಪೊಲಿಟಿಕಲ್ ಸೈನ್ ಕಾಲೇಜಿನಲ್ಲಿ ನ್ಯಾಯ ಶಾಸ್ತ್ರದಲ್ಲಿ ವಿಶೇಷ ಅಧ್ಯಯನ ಮಾಡಿದರು. ಅರ್ಥಶಾಸ್ತ್ರದಲ್ಲಿ ಹೆಚ್ಚಿನ ಅಧ್ಯಯನವನ್ನು ಜರ್ಮನಿಯ ಬಾನ್ ವಿಶ್ವವಿದ್ಯಾನಿಲಯದಲ್ಲಿ ಮಾಡಿದರು. ಇವರು ಮುಂಬಯಿಯ ಸಿಡನ್ ಹ್ಯಾಮ್ ಕಾಲೇಜಿನಲ್ಲಿ ರಾಜಕೀಯ ಅರ್ಥಶಾಸ್ತ್ರದ ಪ್ರಾಧ್ಯಾಪಕರಾಗಿ ವೃತ್ತಿ ಜೀವನ ಆರಂಭಿಸಿದರು. ನಂತರ 1924 ರಲ್ಲಿ ಮುಂಬಯಿ ಹೈಕೋರ್ಟ್‌ನಲ್ಲಿ ವಕೀಲರಾಗಿ, 1928 ರಲ್ಲಿ ಮುಂಬಯಿ ಸರಕಾರಿ ಕಾನೂನು ಕಾಲೇಜಿನಲ್ಲಿ ಪ್ರಾಧ್ಯಾಪಕರಾಗಿ ಅದೇ ಕಾಲೇಜಿನ ಪ್ರಾಂಶುಪಾಲರಾದರು. ಅಲ್ಲದೇ 'ಪೆರ್ರೀ ಪ್ರೊಪೆಸರ್ ಆಪ್ ಜುರಿಸ್ಪ್ರುಡೆನ್ಸ್' ಆಗಿಯೂ ದಕ್ಷತೆ ಮತ್ತು ಪ್ರಾಮಾಣಿಕತೆಯಿಂದ ಕಾರ್ಯ ನಿರ್ವಹಿಸಿದರು.

1942 ರಲ್ಲಿ ಕಾರ್ಮಿಕ ಮಂತ್ರಿಯಾಗಿ ಕಾರ್ಮಿಕರ ಕಲ್ಯಾಣಕ್ಕೆ ಹಲವಾರು ಸುಧಾರಣ ಕ್ರಮಗಳನ್ನು ಸೂಚಿಸಿದರು. 1946 ರಲ್ಲಿ ಅಸ್ತಿತ್ವಕ್ಕೆ ಬಂದ ಮಧ್ಯಂತರ ಸರ್ಕಾರದಲ್ಲಿ ಕಾನೂನು ಮಂತ್ರಿಯಾಗಿ ಉತ್ತಮವಾಗಿ ಕಾರ್ಯ ನಿರ್ವಹಿಸಿದ್ದಾರೆ. 1952 ರಲ್ಲಿ ರಾಜ್ಯಸಭೆಗೆ ಆಯ್ಕೆಯಾಗಿ ಜವಹಾರ್ ಲಾಲ್ ನೆಹರುರವರ ಪ್ರಥಮ ಮಂತ್ರಿಮಂಡಲದಲ್ಲಿಯೂ ಕಾನೂನು ಮಂತ್ರಿಯಾಗಿ ದಕ್ಷತೆಯಿಂದ ಕಾರ್ಯ ನಿರ್ವಹಿಸಿದರು. ಇದೇ ಸಮಯದಲ್ಲಿ ಕೊಲಂಬಿಯಾ ವಿಶ್ವವಿದ್ಯಾನಿಲಯವು ಇವರ ಸಾಧನೆ, ನಾಯಕತ್ವ ಮತ್ತು ಸಂವಿಧಾನ ರಚನೆಗೆ ನೀಡಿದ ಕೊಡುಗೆಯನ್ನು ಮೆಚ್ಚಿ ಎಲ್. ಎಲ್. ಡಿ. ಪದವಿ ನೀಡಿ ಗೌರವಿಸಿದೆ. ಇದೇ ಕಾರಣಕ್ಕಾಗಿ 1953 ರಲ್ಲಿ ಹೈದರಾಬಾದ್‌ನ ಉಸ್ಮಾನಿಯಾ ವಿಶ್ವವಿದ್ಯಾನಿಲಯ ಇವರಿಗೆ ಡಿ. ಲಿಟ್. ಪದವಿಯನ್ನು ನೀಡಿ ತನ್ನ ಘನತೆ ಗೌರವವನ್ನು ಹೆಚ್ಚಿಸಿಕೊಂಡಿತು. ಅಲ್ಲದೆ 1993 ರಲ್ಲಿ ಭಾರತ ಸರ್ಕಾರದ ಅತ್ಯುನ್ನತ ಪ್ರಶಸ್ತಿಯಾದ "ಭಾರತ ರತ್ನ" ಪ್ರಶಸ್ತಿಯನ್ನು ಮರಣೋತ್ತರವಾಗಿ ನೀಡಿ ಗೌರವಿಸಿದೆ.

ಡಾ. ಬಿ. ಆರ್ ಅಂಬೇಡ್ಕರ್ ಅವರು ತನ್ನ ಕನಸಿನ ಪ್ರಬುದ್ಧ ಭಾರತದ ನಿರ್ಮಾಣಕ್ಕಾಗಿ ವಿದ್ಯಾರ್ಥಿಯಾಗಿದ್ದಾಗಲೇ ಶ್ರೇಷ್ಠ ಕೃತಿಗಳನ್ನು ರಚಿಸಿದ್ದರು. ಬೌದ್ಧಧರ್ಮದ ತತ್ವ ಚಿಂತನೆಗಳಿಂದ ಪ್ರಭಾವಿತರಾಗಿ ಬೌದ್ಧ ಧರ್ಮ ಸ್ವೀಕರಿಸಿದರು, ನಂತರ 6 ನೇ ಡಿಸೆಂಬರ್ 1956 ರಂದು ಪರಿನಿರ್ವಾಹಣ ಹೊಂದಿದರು.

ಡಾ. ಬಿ. ಆರ್. ಅಂಬೇಡ್ಕರ್ ರಚಿಸಿದ ಪ್ರಮುಖ ಕೃತಿಗಳು: (WORKS)

ಹೂ ವರ್ ದ ಶೂದ್ರಸ್?

ಆನ್‌ಹಿಲೇಷನ್ ಆಫ್ ಕ್ಯಾಸ್ಟ್

ದ ಬುದ್ಧ ಅಂಡ್ ಹಿಸ್ ಧಮ್ಮ.

ದ ಅನ್‌ಟಚಬಲ್ಸ್

ಾಸ್ಟ್ ಇನ್ ಇಂಡಿಯಾ.

ಾಟ್ ಕಾಂಗ್ರೇಸ್ ಅಂಡ್ ಗಾಂಧಿ ಹ್ಯಾವ್ ಡನ್ ಟು ದಿ ಅನ್‌ಟಚೆಬಲ್ಸ್

೩. ಗಾಂಧಿ ಅಂಡ್ ದಿ ಎಮ್ಯಾನ್ಸಿಪೇಷನ್ ಆಫ್ ಅನ್‌ಟಚೆಬಲ್ಸ್

ಃನ್ ಪಾರ್ಲಿಮೆಂಟರಿ ಡೆಮಾಕ್ರಸಿ.

ುದ್ಧ ಅಂಡ್ ಕಾರ್ಲ್‌ಮಾರ್ಕ್ಸ್.

ಿಡರೇಷನ್ ವರ್ಸಸ್ ಫ್ರೀಡಮ್.

ಾನಡೆ, ಗಾಂಧಿ ಅಂಡ್ ಜಿನ್ನಾ

ೇಟ್ಸ್ ಅಂಡ್ ಮೈನಾರಿಟೀಸ್.

ಾಟ್ಸ್ ಆನ್ ಲಿಂಗ್ವಿಸ್ಟಿಕ್ ಪ್ರಾವಿನ್ಸ್

ಿ ರೈಸ್ ಅಂಡ್ ಫಾಲ್ ಆಫ್ ದಿ ಹಿಂದೂ ಉಮನ್.

ಾಕಿಸ್ತಾನ್ ಆರ್ ಪಾರ್ಟಿಷಿಯನ್ ಆಫ್ ಇಂಡಿಯಾ.

4.2 ಕೃತಿ ಪರಿಚಯ:

ಡಾ. ಬಿ. ಆರ್. ಅಂಬೇಡ್ಕರ್ ರವರು ಮಹಾನ್ ಪುಸ್ತಕಪ್ರೇಮಿ. ಇವರ ಚಿಂತನೆಯಿಂದ ರಚನೆಗೊಂಡ ಅನೇಕ ಪುಸ್ತಕಗಳು ಮತ್ತು ಲೇಖನಗಳು ವಿಷಮತೆಯ ಸಮಾಜಕ್ಕೆ ಸಮತೆಯ ಸಂದೇಶವನ್ನು ಸಾರಿವೆ. ಅವುಗಳಲ್ಲಿ ಪ್ರಮುಖವಾದವುಗಳೆಂದರೆ,

1. ದ ಅನ್‌ಟಚಬಲ್ಸ್ (The Untouchables):

ಈ ಕೃತಿಯಲ್ಲಿ ಅಸ್ಪೃಶ್ಯತೆಯ ಹುಟ್ಟು ಮತ್ತು ಬೆಳವಣಿಗೆಯನ್ನು ಚಿತ್ರಿಸಿದ್ದಾರೆ. ಅಸ್ಪೃಶ್ಯರು ಊರಿನಿಂದ ಹೊರಗಿರಲು ಕಾರಣಗಳೇನು? ಮತ್ತು ಬುದ್ಧನ ನಿಧನದ ನಂತರ ಜಾತಿವಾದಿ ಹಿಂದುಗಳು ಅಸ್ಪೃಶ್ಯತೆಯನ್ನು ಏಕೆ ಬೆಳೆಸಿದರು ಎಂಬುವುದರ ಕುರಿತು ಸುಧೀರ್ಘವಾಗಿ ವಿಶ್ಲೇಷಿಸಿದ್ದಾರೆ.

2. ಹೂ ವರ್ ದ ಶೂದ್ರಸ್ (Who were the Shudras):

ಈ ಗ್ರಂಥದಲ್ಲಿ ಶೂದ್ರರು ಎಂದರೇ ಯಾರು? ಮುಗ್ಧ ಜನರು ಶೂದ್ರರಾಗಿದ್ದು ಏಕೆ? ಶ್ರೇಣಿಕೃತ ವ್ಯವಸ್ಥೆಯಲ್ಲಿ ಶೂದ್ರರ ಸಾಮಾಜಿಕ ಮತ್ತು ಧಾರ್ಮಿಕ ಸ್ಥಾನಮಾನಗಳೇನು? ಮನು ಧರ್ಮಶಾಸ್ತ್ರದ ಪ್ರಕಾರ ಶೂದ್ರರನ್ನು ಯಾವ ರೀತಿ ತುಚ್ಚವಾಗಿ ನಡೆಸಿಕೊಳ್ಳಲಾಗುತ್ತಿತ್ತು. ಚಾತುರ್ವರ್ಣ ವ್ಯವಸ್ಥೆಯಲ್ಲಿ ಎಲ್ಲಾ ಅವಹೇಳನಗಳಿಗೂ ತುತ್ತಾದವರು ಶೂದ್ರರು, ಇದೆಲ್ಲವನ್ನು ಶೂದ್ರರಿಗೆ ಮನವರಿಕೆ ಮಾಡಿಕೊಡುವುದೇ ಈ ಕೃತಿಯ ಧ್ಯೇಯವಾಗಿತ್ತು.

3. ಬುದ್ಧ ಅಂಡ್ ಹಿಸ್ ದಮ್ಮ (Budda And his Damma):

ಈ ಕೃತಿಯಲ್ಲಿ ಪ್ರಜ್ಞಾ, ಕರುಣಾ ಮತ್ತು ಸಮತಾ ಎಂಬ ಬೌದ್ಧ ಧರ್ಮದ 3 ಮುಖ್ಯ ತತ್ವಗಳ ಬಗ್ಗೆ ಚರ್ಚಿಸಿದ್ದಾರೆ. ಈ ಮೂರು ತತ್ವಗಳು ಶಾಂತಿ ಮತ್ತು ನೆಮ್ಮದಿಯ ಜೀವನಕ್ಕೆ ನೆರವಾಗುತ್ತವೆ. ಬುದ್ಧನ ಅಷ್ಟಾಂಗ ಮಾರ್ಗಗಳು ಇಡೀ ವಿಶ್ವಕ್ಕೆ ಮಾದರಿಯಾಗಿವೆ ಎಂಬ ಅಂಶಗಳನ್ನೆಲ್ಲಾ ಒತ್ತಿ ಹೇಳುತ್ತದೆ.

4.3 ಸಾಮಾಜಿಕ ಹೋರಾಟಗಳು:

ಡಾ. ಬಿ. ಆರ್. ಅಂಬೇಡ್ಕರ್ ರವರು ಕೇವಲ ಬರಹ ಮತ್ತು ಭಾಷಣಗಳನ್ನು ಮಾಡುವ ಮೇಧಾವಿ ಚಿಂತಕರಾಗಿರಲಿಲ್ಲ. ತನ್ನ ಧ್ಯೇಯ ಸಾಧನೆಗಾಗಿ ಹೋರಾಟ ಮಾಡಲು ಬೇಕಾದ ಸಂಸ್ಥೆಗಳನ್ನು ಸ್ಥಾಪನೆ ಮಾಡಿ ನೊಂದ ಜನರ ಬಂಧುವಾದರು.

ಡಾ. ಬಿ. ಆರ್. ಅಂಬೇಡ್ಕರ್ ರವರು 31 ಜನವರಿ 1920 ರಲ್ಲಿ ದುರ್ಬಲ ವರ್ಗಗಳ ಹಿತರಕ್ಷಣೆಗಾಗಿ 'ಮೂಕನಾಯಕ' ಎಂಬ ಮರಾಠಿ ಪತ್ರಿಕೆಯನ್ನು ಆರಂಭಿಸಿದರು. ಇದರಲ್ಲಿ ಅಸಮಾನತೆಯನ್ನು ವಿರೋಧಿಸಿ ಅನೇಕ ಲೇಖನಗಳನ್ನು ಬರೆದರು. ದಲಿತೊದ್ಧಾರಕ್ಕಾಗಿ 'ಬಹಿಷ್ಕೃತ ಭಾರತ ಹಿತಕಾರಿಣಿ ಸಭಾ' ಎಂಬ ಸಂಸ್ಥೆಯನ್ನು ಸ್ಥಾಪಿಸಿದರು. 'ಶಿಕ್ಷಣ,ಸಂಘಟನೆ, ಹೋರಾಟ' ಎಂಬ 3 ಧ್ಯೇಯ ವಾಕ್ಯಗಳನ್ನು ಜನಜಾಗೃತಿಗಾಗಿ ಜನಪ್ರಿಯಗೊಳಿಸಿದರು. ಗ್ರಾಮೀಣ ಪ್ರದೇಶದ ಹಿಂದುಳಿದ ಮತ್ತು ದಲಿತ ವರ್ಗದ ಬಡ ವಿದ್ಯಾರ್ಥಿಗಳ ಶೈಕ್ಷಣಿಕ ಪ್ರಗತಿಗಾಗಿ ಬಾರ್ಷಿಯಲ್ಲಿ ವಿದ್ಯಾರ್ಥಿನಿಲಯ ಆರಂಭಿಸಿದರು. ಕೊಲಾಬಾ ಜಿಲ್ಲೆಯ ಮಹದ್ ನಗರದಲ್ಲಿ ಚೌಡರ್ ಕೆರೆಯ ಮೇಲಿನ ಅಸ್ಪೃಶ್ಯರ ಹಕ್ಕುಗಳಿಗಾಗಿ ಸತ್ಯಾಗ್ರಹ ಆರಂಭಿಸಿದರು. ಸುಧೀರ್ಘ ಹೋರಾಟದ ಫಲವಾಗಿ ನ್ಯಾಯಾಲಯ ಚೌಡರ್ ಕೆರೆಯ ನೀರನ್ನು ಬಳಸಲು ಅಸ್ಪೃಶ್ಯರಿಗೂ ಹಕ್ಕಿದೆ ಎಂದು ತೀರ್ಪು ನೀಡಿತು. ಅಜ್ಞಾನ, ಅಸ್ಪೃಶ್ಯತೆ, ಜಾತಿಪದ್ಧತಿ, ಸ್ತ್ರೀ ಶೋಷಣೆಯಂತಹ ಅಸಮಾನತೆಗಳನ್ನು ಪ್ರತಿಬಿಂಬಿಸಿದ ಮನುಸ್ಮೃತಿಯನ್ನು ಬಹಿರಂಗವಾಗಿ ಪ್ರತಿಭಟಿಸಿದರು.

ದಲಿತರು ಮತ್ತು ಹಿಂದುಳಿದವರನ್ನು ಒಂದೇ ವೇದಿಕೆಯ ಮೇಲೆ ಸಂಘಟಿಸುವ ಸಲುವಾಗಿ ಸಮತಾ ಸಮಾಜ ಸಂಘವನ್ನು ಸ್ಥಾಪಿಸಿದರು. ನಾಸಿಕ್‌ನ ಕಾಳರಾಂ ದೇವಾಲಯಕ್ಕೆ ಅವಕಾಶ ವಂಚಿತರ ಪ್ರವೇಶಕ್ಕೆ ಆಗ್ರಹಿಸಿ ಸತ್ಯಾಗ್ರಹ ನೆಡೆಸಿದರು. 'ಅಸ್ಪೃಶ್ಯರ ಪ್ರತಿನಿಧಿಯಾಗಿ ಲಂಡನ್‌ನಲ್ಲಿ ನಡೆದ ಮೂರು ದುಂಡು ಮೇಜಿನ ಸಮ್ಮೇಳನದಲ್ಲಿ ಭಾಗವಹಿಸಿದ ಏಕೈಕ ಭಾರತೀಯ ವ್ಯಕ್ತಿಯಾಗಿದ್ದು ದಲಿತರಿಗಾಗಿ ಪ್ರತ್ಯೇಕ ಮತ ಕ್ಷೇತ್ರಗಳಿಗಾಗಿ ಬೇಡಿಕೆ ಇಟ್ಟರು. ಕಾರ್ಮಿಕರ ಏಳಿಗೆಗಾಗಿ ಸ್ವತಂತ್ರ 'ಕಾರ್ಮಿಕ ಪಕ್ಷ' ಮತ್ತು 'ರಿಪಬ್ಲಿಕ್ ಪಕ್ಷವನ್ನು ಹುಟ್ಟು ಹಾಕಿದರು. ಮುಂಬೈನಲ್ಲಿ ಪುರಸಭಾ ಕಾರ್ಮಿಕರ ಯುನಿಯನ್ ಸ್ಥಾಪಿಸಿದರು. ಬಾಂಬೆಯಲ್ಲಿ ಪಿಪಲ್ ಎಜುಕೇಷನ್ ಸೊಸೈಟಿ ಮತ್ತು ಮುಂಬೈನಲ್ಲಿ ಸಿದ್ಧಾರ್ಥ ಆರ್ಟ್ಸ್ ಮತ್ತು ವಿಜ್ಞಾನ ಕಾಲೇಜನ್ನು ಸ್ಥಾಪಿಸುವ ಮೂಲಕ ಬಡ ವಿದ್ಯಾರ್ಥಿಗಳ ಉನ್ನತ ಶಿಕ್ಷಣದ ಕನಸನ್ನು ನನಸಾಗಿಸಿದರು. ಬಿ. ಆರ್. ಅಂಬೇಡ್ಕರ್ ರವರು ಈ ಸಂಘ ಸಂಸ್ಥೆಗಳ ಸ್ಥಾಪನೆ ಮತ್ತು ಹೋರಾಟಗಳ ಮೂಲಕ ಸಾಮಾಜಿಕ ಪರಿವರ್ತನೆಯ ಹರಿಕಾರರಾದರು.

ಡಾ. ಬಿ. ಆರ್. ಅಂಬೇಡ್ಕರ್ ರ ರಾಜಕೀಯ ಚಿಂತನೆಗಳು:

ರಾಜ್ಯದ ಪರಿಕಲ್ಪನೆ:

ಡಾ. ಬಿ. ಆರ್. ಅಂಬೇಡ್ಕರ್ ಅವರು ಪ್ರಸಿದ್ಧ ಅರ್ಥ ಶಾಸ್ತ್ರಜ್ಞರು ಕಾನೂನು ಪಂಡಿತರಷ್ಟೇ ಅಲ್ಲದೇ ಭಾರತದ ಅಗ್ರ ಪಂಕ್ತೀಯ ರಾಜಕೀಯ ಚಿಂತಕರೂ ಆಗಿದ್ದರು. ಆದ್ದರಿಂದಲೇ ರಾಜಕೀಯ ವಿಚಾರಗಳಲ್ಲಿ ಒಂದಾದ ರಾಜ್ಯದ ಮೇಲು ಸಹ ಬೆಳಕು ಚೆಲ್ಲಿದ್ದಾರೆ. 'ಸಮಾಜಕ್ಕೆ ಅಧೀನವಾದ, ಸಂವಿಧಾನಕ್ಕೆ ಬದ್ಧವಾದ, ಪರಮಾಧಿಕಾರ, ಜಾತ್ಯತೀತತೆ, ಸಮಾಜವಾದ ಮತ್ತು ಪ್ರಜಾಪ್ರಭುತ್ವ ದಂತಹ ಆದರ್ಶಗಳನ್ನು ಜೀವಂತಗೊಳಿಸುವ ರಾಜಕೀಯ ಸಂಸ್ಥೆಯೇ ರಾಜ್ಯ' ಎಂದು **ಡಾ. ಬಿ. ಆರ್. ಅಂಬೇಡ್ಕರ್** ವ್ಯಾಖ್ಯಾನಿಸಿದ್ದಾರೆ.

ಇವರ ಕನಸಿನ ರಾಜ್ಯವು ಸರ್ವರ ಸಮಾನತೆಯನ್ನು ಪ್ರತಿಪಾದಿಸುತ್ತದೆ. ರಾಜ್ಯವು ಪ್ರಜಾಪ್ರಭುತ್ವ, ಸಮಾಜವಾದ ಮತ್ತು ದೀನದಲಿತರ, ಹಿಂದುಳಿದವರ, ಅಲ್ಪಸಂಖ್ಯಾತರ ಕ್ಷೇಮಾಭಿವೃದ್ದಿಯ ಗುರಿಸಾಧನೆಗಾಗಿ ಅನ್ಯಾಯವನ್ನು ತಡೆಗಟ್ಟಿ ಸೇವಕನಂತೆ ಕಾರ್ಯನಿರ್ವಹಿಸುವ ಸಂಸ್ಥೆಯಾಗಿರಬೇಕೆಂದು ಬಲವಾಗಿ ಪ್ರತಿಪಾದಿಸಿದರು. ಇವರ ಕನಸಿನ ರಾಜ್ಯವು ಮೂರು ಮುಖ್ಯ ಗುರಿಗಳನ್ನು ಹೊಂದಿದೆ. ಅವುಗಳೆಂದರೆ,

1. ರಾಜ್ಯವು ವ್ಯಕ್ತಿ ಸ್ವಾತಂತ್ರ್ಯದ ಸಂರಕ್ಷಣೆ ಮಾಡುವುದು.
2. ಸಾಮಾಜಿಕ ಮತ್ತು ಆರ್ಥಿಕ ಅಸಮಾನತೆಗಳನ್ನು ನಿರ್ಮೂಲನೆ ಮಾಡುವುದು.
3. ರಾಷ್ಟ್ರಕ್ಕೆ ಆಂತರಿಕ ಮತ್ತು ಬಾಹ್ಯ ಭದ್ರತೆಯನ್ನು ಒದಗಿಸುವುದು.

ಪ್ರಜಾಪ್ರಭುತ್ವದ ಪರಿಕಲ್ಪನೆ:

"ಜನತೆಯ ಸಾಮಾಜಿಕ ಮತ್ತು ಆರ್ಥಿಕ ಜೀವನದಲ್ಲಿ ರಕ್ತ ರಹಿತ ಕ್ರಾಂತಿಕಾರಿ ಬದಲಾವಣೆಯನ್ನು ತರುವ ಸರ್ಕಾರದ ಪ್ರಕಾರ ಮತ್ತು ರಾಜಕೀಯ ವಿಧಾನವೇ ಪ್ರಜಾಪ್ರಭುತ್ವ" ಎಂದು ಡಾ. ಬಿ. ಆರ್. ಅಂಬೇಡ್ಕರ್ ವ್ಯಾಖ್ಯಾನಿಸಿದ್ದಾರೆ. ಇವರು ಸಂಸದೀಯ ಪ್ರಜಾಪ್ರಭುತ್ವದ ರೂವಾರಿಗಳಾಗಿದ್ದರು. ಅನುವಂಶಿಯ ಪ್ರಭುತ್ವವನ್ನು ವಿರೋಧಿಸಿದರು. ಪ್ರಜಾಸತಾತ್ಮಕ ಮೌಲ್ಯಗಳನ್ನು ಮೈಗೂಡಿಸಿಕೊಂಡ ಸಮಾನತಾ ಸಮಾಜದ ನಿರ್ಮಾಣಕ್ಕಾಗಿ ಪ್ರಜಾಸತಾತ್ಮಾಕ ಸಮಾಜವಾದವನ್ನು ಪ್ರತಿಪಾದಿಸಿದರು.ಇವರ ದೃಷ್ಠಿಯಲ್ಲಿ ಪ್ರಜಾಪ್ರಭುತ್ವವು ಕೆಳಕಂಡ ಅಗತ್ಯಾಂಶಗಳನ್ನು ಹೊಂದಿದೆ.

1. ಸಮಾನತಾ ಸಮಾಜ ನಿರ್ಮಾಣ.
2. ಮತದಾರರಿಗೆ ಆಯ್ಕೆಯ ಸ್ವಾತಂತ್ರ್ಯ
3. ಬಹುಪಕ್ಷ ಪದ್ಧತಿ.
4. ಸಮರ್ಥ ವಿರೋಧ ಪಕ್ಷ.
5. ಕಾನೂನನ್ನು ರಚಿಸಲು ನಿರ್ಭಿತ ಮತ್ತು ನಿಷ್ಪಕ್ಷಪಾತ ಶಾಸಕಾಂಗ.
6. ಸಾರ್ವಜನಿಕ ನೀತಿಯನ್ನು ಅನುಷ್ಠಾನಗೊಳಿಸಲು ರಾಜಕೀಯ ಮತ್ತು ಶಾಶ್ವತ ಕಾರ್ಯಾಂಗ.

ಇಂತಹ ಅಗತ್ಯಾಂಶಗಳನು ಒಳಗೊಂಡ ರಾಜಕೀಯ ವ್ಯವಸ್ಥೆ ಆಳವಾಗಿ ಬೇರೂರಿದರೆ, ಸರ್ವರ ಸುಖಮಯ ಜೀವನದ ಕನಸನ್ನು ನನಸನ್ನಾಗಿಸುವ **ಡಾ. ಬಿ. ಆರ್. ಅಂಬೇಡ್ಕರ್** ಅವರ ಪರಿಕಲ್ಪನೆಯ ಪ್ರಜಾಪ್ರಭುತ್ವವು ಯಶಸ್ವಿಯಾಗುವುದರಲ್ಲಿ ಸಂದೇಹವಿಲ್ಲ.

ರಾಜ್ಯ ಸಮಾಜವಾದ ಪರಿಕಲ್ಪನೆ:

ಡಾ. ಬಿ. ಆರ್ ಅಂಬೇಡ್ಕರ್ ರ ರಾಜಕೀಯ ವಿಚಾರಗಳಲ್ಲಿ ರಾಜ್ಯ ಸಮಾಜವಾದವು ಗಮನಾರ್ಹವಾದುದು. 1947 ರಲ್ಲಿಯೇ ರಾಜ್ಯ ಸಮಾಜವಾದವನ್ನು ಭಾರತದ ಸಂವಿಧಾನದಲ್ಲಿ ಸೇರಿಸಬೇಕೆಂದು ಸಲಹೆ ನೀಡಿದ್ದರು. ಡಾ. ಅಂಬೇಡ್ಕರ್ ರವರ ಪ್ರಕಾರ 'ರಾಜ್ಯದ ನೇರ ಒಡೆತನ, ನಿಯಂತ್ರಣ ಮತ್ತು ನಿರ್ವಹಣೆಯ ಅಡಿಯಲ್ಲಿ ಕೃಷಿ ಮತ್ತು ಕೈಗಾರಿಕಾ ವಲಯಗಳನ್ನು ಸಕಲ ಸಂಪತ್ತಿನ ನ್ಯಾಯಯುತ ಹಂಚಿಕೆಗೆ ನೆರವಾಗುವಂತೆ ಸಂವಿಧಾನ ಬದ್ಧ, ಸಮಾಜವಾದಿ ಕಾರ್ಯಕ್ರಮಗಳನ್ನು ರಾಜ್ಯ ಅನುಷ್ಠಾನಗೊಳಿಸುವ ವಿಧಾನವೇ ರಾಜ್ಯ ಸಮಾಜವಾದ.' ಸಾಮಾಜಿಕ ಮತ್ತು ಆರ್ಥಿಕ ಜೀವನದಲ್ಲಿ ರಕ್ತರಹಿತ ಕ್ರಾಂತಿಯನ್ನುಂಟುಮಾಡಿ ಬಡತನ ಮತ್ತು ಅಸಮಾನತೆಯನ್ನು ನಿರ್ಮೂಲನೆ ಮಾಡುವುದು ಇದರ ಉದ್ದೇಶವಾಗಿದೆ. ಈ ಉದ್ದೇಶದ ಕಾರ್ಯಸಾಧನೆಗಾಗಿ ಕೆಲವು ಕಾರ್ಯ ತಂತ್ರಗಳನ್ನು ತಿಳಿಸಿದ್ದಾರೆ. ಅವುಗಳೆಂದರೆ,

1. ನ್ಯಾಯ ಹಂಚಿಕೆಗಾಗಿ ಕೈಗಾರಿಕೆಗಳ ರಾಷ್ಟ್ರೀಕರಣ.
2. ಸಮಾನ ಭೂ ಹಂಚಿಕೆಗಾಗಿ ಕೃಷಿ ವಲಯದ ರಾಷ್ಟ್ರೀಕರಣ.
3. ರಾಜ್ಯ ಸಮಾಜವಾದ ಕಾರ್ಯಕ್ರಮಗಳನ್ನು ಸಂವಿಧಾನದಲ್ಲಿ ಸೇರಿಸುವುದು.

ಭಾರತ ಸಂಸದೀಯ ಮಾದರಿಯ ಪ್ರಜಾಪ್ರಭುತ್ವ ರಾಷ್ಟ್ರವಾಗಿದೆ. ಇಲ್ಲಿ ಯಾವ ರಾಜಕೀಯ ಪಕ್ಷವೂ ಶಾಶ್ವತವಾಗಿ ಅಧಿಕಾರದಲ್ಲಿ ಇರುವುದಿಲ್ಲ. ಆದ್ದರಿಂದ ರಾಜ್ಯ ಸಮಾಜವಾದದ ಕಾರ್ಯಕ್ರಮಗಳನ್ನು ಸಂವಿಧಾನದಲ್ಲಿ ಸೇರಿಸಿದರೆ ಅಧಿಕಾರಕ್ಕೆ ಬರುವ ರಾಜಕೀಯ ಪಕ್ಷಗಳು ಅವುಗಳನ್ನು ಕಡ್ಡಾಯವಾಗಿ ಅನುಷ್ಠಾನಗೊಳಿಸುತ್ತವೆ ಎಂಬುವುದು ಇವರ ಅಭಿಪ್ರಾಯವಾಗಿದೆ.

ಸಾಮಾಜಿಕ ನ್ಯಾಯದ ಪರಿಕಲ್ಪನೆ:

ಡಾ. ಬಿ. ಆರ್. ಅಂಬೇಡ್ಕರ್ ಅವರಿಂದ ಪ್ರತಿಪಾದಿಸಲ್ಪಟ್ಟ ರಾಜಕೀಯ ಚಿಂತನೆಗಳಲ್ಲಿ ಸಾಮಾಜಿಕ ನ್ಯಾಯವು ಅಗ್ರಮಾನ್ಯವಾದುದಾಗಿದೆ. ಎಲ್ಲಾ ತತ್ವ ಸಿದ್ಧಾಂತಗಳು ಆಯಾ ಪರಿಸರ ಮತ್ತು ಪರಿಸ್ಥಿತಿಯ ಸೃಷ್ಟಿಯಾಗಿರುತ್ತವೆ. ಇವರು ಪ್ರತಿಪಾದಿಸಿದ ಸಾಮಾಜಿಕ ನ್ಯಾಯವು ಭಾರತದ ಶ್ರೇಣಿಕೃತ ಸಾಮಾಜಿಕ ವ್ಯವಸ್ಥೆಗೆ ಪ್ರತಿಕ್ರಿಯೆಯಾಗಿ ಹುಟ್ಟಿಕೊಂಡ ವಿಮೋಚನಾ ಸಿದ್ಧಾಂತವಾಗಿದೆ. ಡಾ. ಬಿ. ಆರ್. ಅಂಬೇಡ್ಕರ್ ರವರು ವಿವಿಧ ಆಯಾಮಗಳುಳ್ಳ ಸಾಮಾಜಿಕ ನ್ಯಾಯವನ್ನು ಹೀಗೆ ವ್ಯಾಖ್ಯಾನಿಸಿದ್ದಾರೆ. 'ಕಾನೂನಿನ ಮೂಲಕ ಸಾಮಾಜಿಕ ಮತ್ತು ಆರ್ಥಿಕ ಅಸಮಾನತೆಗಳನ್ನು ನಿರ್ಮೂಲನೆ ಮಾಡಿ, ಸರ್ವರಿಗೂ ಸಮಾನ ಹಕ್ಕುಗಳು ಮತ್ತು

ಅವಕಾಶಗಳನ್ನು ದೊರಕಿಸಿಕೊಡುವ ಪರಿವರ್ತನಾ ಶೀಲ, ಅನುಷ್ಠಾನಯೋಗ್ಯ, ವಿಮೋಚನೆಯ ತತ್ವ ನೀತಿಯೇ ಸಾಮಾಜಿಕ ನ್ಯಾಯ' ಎಂದಿದ್ದಾರೆ.

ಭಾರತದಲ್ಲಿ ಶತಶತಮಾನಗಳಿಂದಲೂ ತುಳಿತಕ್ಕೊಳಗಾದ ಮಹಿಳೆಯರು, ದೀನದಲಿತರು, ಅಲ್ಪಸಂಖ್ಯಾತರು,ದುರ್ಬಲವರ್ಗದವರು ಮತ್ತು ಶೋಷಿತರ ಸಾಮಾಜಿಕ, ಆರ್ಥಿಕ ವಿಮೋಚನೆಗಾಗಿ ಸಾಮಾಜಿಕ ನ್ಯಾಯವನ್ನು ಅನುಷ್ಠಾನಗೊಳಿಸಬೇಕೆಂದು ತಮ್ಮ ಕೊನೆ ಉಸಿರು ಇರುವವರೆಗೂ ಪ್ರತಿಪಾದಿಸಿದರು.ಇವರು ತಮ್ಮ ಸಾಮಾಜಿಕ ನ್ಯಾಯವನ್ನು ಸಾಕಾರಗೊಳಿಸಲು ಅನೇಕ ಸಲಹೆಗಳನ್ನು ನೀಡಿದ್ದರು. ಅವು ಕೆಳಕಂಡಂತಿವೆ-

1. ಅಸ್ಪೃಶ್ಯತೆಯ ನಿವಾರಣೆ:

ಸಾಮಾಜಿಕ ನ್ಯಾಯದ ಅನುಷ್ಠಾನಕ್ಕಾಗಿ ಅಸ್ಪೃಶ್ಯತೆಯ ನಿವಾರಣೆ ಅತ್ಯಗತ್ಯ ಎಂದು ಪ್ರತಿಪಾದಿಸಿದರು. ಇದಕ್ಕಾಗಿ ಭಾರತ ಸಂವಿಧಾನದ 17 ನೇ ವಿಧಿಯಲ್ಲಿ ಅಸ್ಪೃಶ್ಯತೆಯ ಆಚರಣೆಯ ರದ್ದತಿಯನ್ನು ಸೇರಿಸಿ ವಿಧಿಬದ್ಧಗೊಳಿಸಿದರು.

2. ಸಮಾನತಾ ಸಮಾಜದ ಸ್ಥಾಪನೆ:

ಭಾರತದ ಶ್ರೇಣಿಕೃತ ಸಾಮಾಜಿಕ ವ್ಯವಸ್ಥೆಯು ಮೇಲ್ಜಾತಿ, ಕೆಳಜಾತಿ, ಉಚ್ಚ-ನೀಚ, ಸ್ಪೃಶ್ಯ-ಅಸ್ಪೃಶ್ಯಗಳೆಂಬ ಬೇಧಭಾವಗಳ ತೊಟ್ಟಿಲಾಗಿದೆ. ಆದ್ದರಿಂದ ಇದು ಸಾಮಾಜಿಕ ಅಸಮಾನತೆಗೆ ಜ್ವಲಂತ ಉದಾಹರಣೆಯಾಗಿದೆ. ಇದರಲ್ಲಿರುವ ಅಮಾನವೀಯ ಅಸಮಾನತೆಗಳನ್ನು ಹೋಗಲಾಡಿಸಿ ಸರ್ವರಿಗೂ ಸಾಮಾಜಿಕ ನ್ಯಾಯ ದೊರಕುವಂತೆ ಮಾಡಲು ಕಾನೂನಿನನ್ವಯವೇ ಸಮಾನತಾ ಸಮಾಜದ ಸ್ಥಾಪನೆಗೆ ರಾಜ್ಯ ಕ್ರಮಕೈಗೊಳ್ಳಬೇಕೆಂದು ಸಲಹೆ ನೀಡಿದರು.

3.ಸ್ತ್ರೀ ವಿಮೋಚನೆ:

ಭಾರತದ ಪುರುಷ ಪ್ರಧಾನ ಸಮಾಜದಲ್ಲಿ ಸರಿಸುಮಾರು ಅರ್ಧಭಾಗದಷ್ಟಿರುವ ಸ್ತ್ರೀಯರು ಸಹ ನಿರ್ಲಕ್ಷಕ್ಕೆ ಒಳಗಾಗಿದ್ದಾರೆ. ಇದನ್ನು ಅರಿತ ಅಂಬೇಡ್ಕರ್ ಅವರು ಸ್ತ್ರೀ ಸಮಾನತೆ ಮತ್ತು ಸ್ತ್ರೀ ನ್ಯಾಯಕ್ಕಾಗಿ ಮಹಿಳೆಯರಿಗೂ ಶಿಕ್ಷಣ ಮತ್ತು ಉದ್ಯೋಗದಲ್ಲಿ ಮೀಸಲಾತಿ ನೀಡಲು ಕಾನೂನುಗಳನ್ನು ಅನುಷ್ಠಾನಗೊಳಿಸಬೇಕೆಂದು ತಿಳಿಸಿದರು.

4. ಮೀಸಲಾತಿ:

ಶತಮಾನಗಳುದ್ದಕ್ಕೂ ಅನೇಕರು ಅವಕಾಶ ವಂಚಿತರಾಗಿದ್ದಾರೆ. ಅವರೆಲ್ಲರೂ ಸುಶಿಕ್ಷಿತರಾಗಿ ಸ್ವಾವಲಂಬಿಗಳಾಗಲು ಮೀಸಲಾತಿ ಅತ್ಯಗತ್ಯ ಎಂದು ಪ್ರತಿಪಾದಿಸಿದರು. ಇದಕ್ಕಾಗಿ ರಾಜಕೀಯ, ಶಿಕ್ಷಣ ಮತ್ತು ಉದ್ಯೋಗದಲ್ಲಿ ದಲಿತರು ಮತ್ತು ಹಿದುಳಿದ ವರ್ಗಗಳಿಗೆ ಮೀಸಲಾತಿ ನೀಡಲು ಆಗ್ರಹ ಪಡಿಸಿದರು.

5. ಕಾರ್ಮಿಕರ ಭದ್ರತೆ:

‘ಕಾರ್ಮಿಕರೇ ದೇಶದ ಬೆನ್ನೆಲುಬು’ ಅವರಿಲ್ಲದೇ ದೇಶದ ಪ್ರಗತಿ ಸಾಧ್ಯವಿಲ್ಲ ಎಂಬುವುದನ್ನು ಅಂಬೇಡ್ಕರ್ ಮನಗಂಡಿದ್ದರು. ಆದ್ದರಿಂದಲೇ ಶ್ರಮಿಕ ವರ್ಗದ ಕ್ಷೇಮಾಭಿವೃದ್ಧಿಗಾಗಿ ಉದ್ಯೋಗ ವಿನಿಮಯ ಕೇಂದ್ರ ಮತ್ತು ಕಾರ್ಮಿಕ ನ್ಯಾಯಾಲಯಗಳ ಸ್ಥಾಪನೆಯಾಗಬೇಕೆಂದು ಸಲಹೆ ನೀಡಿದರು. ಕಾರ್ಮಿಕರ ಸಾಮಾಜಿಕ ಭದ್ರತೆಗಾಗಿ ಉದ್ಯಮಿಗಳು ಸಕಾರಾತ್ಮಕವಾಗಿ ಸ್ಪಂದಿಸುವಂತೆ ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಸೂಚಿಸಿದರು.

6. ಸಮಾನ ಭೂ ಹಂಚಿಕೆ:

ಭಾರತದಲ್ಲಿ ಕೇವಲ ಕೆಲವೇ ಕೆಲವು ಉಳ್ಳವರ ವಶದಲ್ಲಿ ಬಹುಪಾಲು ಭೂಮಿ ಕೇಂದ್ರಿಕೃತವಾಗಿದೆ. ಬಹುಸಂಖ್ಯಾತರು ಕೇವಲ ಅತ್ಯಲ್ಪ ಭೂಮಿಯನ್ನು ಹೊಂದಿದ್ದಾರೆ. ಇದು ಭೂ ಹಂಚಿಕೆಯ ಅಸಮಾನತೆಗೆ ಸಾಕ್ಷಿಯಾಗಿದೆ. ಆದ್ದರಿಂದ ಸರಕಾರಗಳು ಸಮಾನ ಭೂ ಹಂಚಿಕೆಗೆ ಉಪಕ್ರಮಗಳನ್ನು ಕೈಗೊಳ್ಳಬೇಕೆಂದು ಸೂಚಿಸಿದ್ದಾರೆ.

7. ಕಾನೂನು ಪಾಲನೆ:

ಕಾನೂನು ಸಾಮಾಜಿಕ ನ್ಯಾಯದ ಭದ್ರಬುನಾದಿ. ಕಾನೂನು ಪಾಲನೆಯಿಂದ ಎಲ್ಲರ ಹಕ್ಕು ಸ್ವಾತಂತ್ರ್ಯಗಳು ಸುರಕ್ಷಿತವಾಗಿರುತ್ತವೆ. ಅನ್ಯಾಯ ಮತ್ತು ಅಸಮಾನತೆಗಳು ಸಮಾಜದಿಂದ ಮೂಲೋಚ್ಚಾಟನೆಯಾಗುತ್ತವೆ. ಶಾಂತಿ ಸುವ್ಯವಸ್ಥೆ ನೆಲೆಗೊಳ್ಳುತ್ತದೆ. ಸೌಹಾರ್ದಯುತ ಬದುಕು ಸಾಧ್ಯವಾಗುತ್ತದೆ. ಕಾನೂನು ಪಾಲನೆಯಿಂದಲೇ ಸಾಮಾಜಿಕ ನ್ಯಾಯ ವ್ಯಕ್ತಿಗಳಲ್ಲಿ ಸ್ವಭಾವ ಸಹಜಗೊಳ್ಳುತ್ತದೆ. ಸಮಾಜದಲ್ಲಿಯೂ ಆಳವಾಗಿ ಬೇರೂರುತ್ತವೆ.

8. ಪಂಚಸೂತ್ರ ಪಾಲನೆ:

ದಲಿತರು ಮತ್ತು ಹಿಂದುಳಿದವರು ಸಹ ಸ್ವಯಂ ಸುಧಾರಣೆ, ಸ್ವಯಂ ಪ್ರಗತಿ, ಸ್ವಾವಲಂಬನೆ, ಸ್ವಾಭಿಮಾನ ಮತ್ತು ಆತ್ಮ ವಿಶ್ವಾಸಗಳೆಂಬ ಪಂಚಸೂತ್ರಗಳನ್ನು ಜೀವನದಲ್ಲಿ ಅಳವಡಿಸಿಕೊಂಡು ತಮ್ಮ ಬದುಕನ್ನು ಕಟ್ಟಿಕೊಂಡರೆ ಸಾಮಾಜಿಕ ನ್ಯಾಯವು ಸುಭದ್ರವಾಗುತ್ತದೆಂದು ವಸ್ತುನಿಷ್ಠತೆಯಿಂದ ಸಲಹೆ ನೀಡಿದ್ದಾರೆ.

ಅಂಬೇಡ್ಕರ್‌ರಿಂದ ಸೂಚಿಸಲ್ಪಟ್ಟ ಈ ಸುಧಾರಣಾ ಕ್ರಮಗಳ ದಕ್ಷ ಹಾಗೂ ಬದ್ಧ ಅನುಷ್ಠಾನದಿಂದ ಮಾತ್ರ ಸಾಮಾಜಿಕ ನ್ಯಾಯವು ಫಲಪ್ರದವಾಗುತ್ತದೆ.

ಭಾರತದ ಸಂವಿಧಾನಕ್ಕೆ ಡಾ. ಬಿ. ಆರ್. ಅಂಬೇಡ್ಕರ್ ರ ಕೊಡುಗೆಗಳು

ಡಾ. ಬಿ. ಆರ್. ಅಂಬೇಡ್ಕರ್ ಅವರು ಭಾರತ ಸಂವಿಧಾನದ ಶಿಲ್ಪಿಯೆಂದೇ ಸುಪ್ರಸಿದ್ಧರಾಗಿದ್ದಾರೆ. ಇವರು ಭಾರತ ಸಂವಿಧಾನ ರಚನಾ ಸಭೆಯಲ್ಲಿ ಕರಡು ಸಮಿತಿಯ

ಅಧ್ಯಕ್ಷರಾಗಿದ್ದರು. ಅಂದು ಜಗತ್ತಿನಲ್ಲಿ ಜಾರಿಯಲ್ಲಿದ್ದ 60 ಸಂವಿಧಾನಗಳನ್ನು ಅಧ್ಯಯನ ಮಾಡಿ 4 ನವೆಂಬರ್ 1948 ರಂದು ಸಂವಿಧಾನದ ಅಂತಿಮ ಕರಡನ್ನು ಸಂವಿಧಾನದ ರಚನಾ ಸಭೆಯಲ್ಲಿ ಮಂಡಿಸಿದರು.

ಸಂವಿಧಾನದ ಕರಡಿನ ಪ್ರತಿಯೊಂದು ವಿಧಿಯ ಸಾಧಕ-ಬಾಧಕಗಳನ್ನು ಸಮರ್ಪಕವಾಗಿ ವಿಶ್ಲೇಷಿಸಿ ಅರ್ಥೈಸಿದರು. ಸಂವಿಧಾನ ರಚನಾ ಸದಸ್ಯರು ಕೇಳಿದ ಪ್ರಶ್ನೆಗಳು ಮತ್ತು ಸಂದೇಹಗಳಿಗೆ ಸ್ಪಷ್ಟ ಉತ್ತರ ಮತ್ತು ಸ್ಪಷ್ಟೀಕರಣ ನೀಡಿದರು. ಡಾ. ಬಿ. ಆರ್. ಅಂಬೇಡ್ಕರ್ ರ ಮಾನವೀಯತೆ, ಮೇಧಾವಿತನ, ರಚನಾ ಸಭೆಯ ಅಧ್ಯಕ್ಷರು ಹಾಗೂ ಸರ್ವಸದಸ್ಯರ ಕಳಕಳಿ ಮತ್ತು ಪರಿಣತೆಯ ಫಲವಾಗಿ ರಚಿತಗೊಂಡ ಸಂವಿಧಾನವನ್ನು 1949 ನವೆಂಬರ್ 26 ರಂದು ಸಂವಿಧಾನವನ್ನು, ಸಂವಿಧಾನದ ರಚನಾ ಸಭೆ ಸ್ವೀಕರಿಸಿತು.

ಸಂವಿಧಾನ ರಚನೆಯಲ್ಲಿ **ಡಾ. ಬಿ. ಆರ್. ಅಂಬೇಡ್ಕರ್** ನೀಡಿದ ಕೊಡುಗೆಗಳು ಅವಿಸ್ಮರಣೀಯವಾದುದಾಗಿದೆ. ಈ ಕೆಳಕಂಡ ಅಂಶಗಳು ಇದನ್ನು ದೃಢಪಡಿಸುತ್ತವೆ.

1. ಪ್ರಜಾಪ್ರಭುತ್ವ.
2. ಬಲಿಷ್ಠ ಕೇಂದ್ರ ಸರ್ಕಾರ.
3. ಮೂಲಭೂತ ಹಕ್ಕುಗಳು.
4. ರಾಜ್ಯನೀತಿ ನಿರ್ದೇಶಕ ತತ್ವಗಳು.
5. ರಾಷ್ಟ್ರಪತಿಯ ಆಯ್ಕೆ
6. ರಾಜ್ಯಪಾಲರ ನೇಮಕ.
7. ತುರ್ತು ಪರಿಸ್ಥಿತಿ.
8. ರಾಷ್ಟ್ರ ಭಾಷೆಯಾಗಿ ಹಿಂದಿ.
9. ತಿದ್ದುಪಡಿ ವಿಧಾನ.

ಡಾ. ಬಿ. ಆರ್. ಅಂಬೇಡ್ಕರ್ ಅವರ ದೂರದರ್ಶಿತ್ವ ಮತ್ತು ಕೊಡುಗೆಗಳಿಂದ ರಚಿತಗೊಂಡ ನಮ್ಮ ಭಾರತದ ಸಂವಿಧಾನವು ಪರಿವರ್ತನಾ ಶೀಲ ಸಮಾಜದ ಶ್ರೇಷ್ಠ ಸಾಧನವಾಗಿದೆ. "**ಡಾ. ಬಿ. ಆರ್. ಅಂಬೇಡ್ಕರ್** ಆಧುನಿಕ ಭಾರತದ ಸ್ಥಾಪಕ ಪಿತಾಮಹರಾಗಿದ್ದಾರೆ. ಇವರು ರಚಿಸಿದ ಭಾರತದ ಶಕ್ತಿಶಾಲಿ ಸಂವಿಧಾನವು ಇಂದು ವಿಶ್ವದ

ಮಾಧರಿ ಸಂವಿಧಾನವಾಗಿದೆ.” ಎಂದು ಅಮೇರಿಕಾದ ಅಧ್ಯಕ್ಷ ಬರಾಕ್ ಒಬಾಮ ರವರು ಶ್ಲಾಘಿಸಿದ್ದಾರೆ.

ದಕ್ಷಿಣ ಆಫ್ರಿಕಾದ ಅಧ್ಯಕ್ಷರಾಗಿದ್ದ ದಿ. ನೆಲ್ಸನ್ ಮಂಡೆಲಾರವರು “ಡಾ. ಬಿ. ಆರ್. ಅಂಬೇಡ್ಕರ್ ರವರು ಮಾನವ ಹಕ್ಕುಗಳ ನಿಜವಾದ ವೀರಾಗ್ರಣಿಯಾಗಿದ್ದಾರೆ. ಇವರು ಸಮಾನತೆ ಮತ್ತು ಸಾಮಾಜಿಕ ನ್ಯಾಯಕ್ಕಾಗಿ ತನ್ನ ಇಡೀ ಬದುಕನ್ನು ಅರ್ಪಿಸಿಕೊಂಡ ಅದ್ವಿತೀಯ ವ್ಯಕ್ತಿ. ಡಾ. ಬಿ. ಆರ್. ಅಂಬೇಡ್ಕರ್ ರಚಿಸಿದ ಭಾರತದ ಸಂವಿಧಾನವೇ ನಮ್ಮ ದಕ್ಷಿಣ ಆಫ್ರಿಕಾ ದೇಶದ ಸಂವಿಧಾನಕ್ಕೆ ಸ್ಪೂರ್ತಿ”. ಎಂದು ಪ್ರಸಂಶಿಸಿದ್ದಾರೆ.

ಡಾ. ಬಿ. ಆರ್. ಅಂಬೇಡ್ಕರ್ ರವರು ತಮ್ಮ ಪರಿಶ್ರಮ, ಪ್ರತಿಭೆ ಮತ್ತು ಮಾನವೀಯತೆಯಿಂದಾಗಿ ವಿಶ್ವಮಾನ್ಯರಾಗಿದ್ದಾರೆ. ಇವರ ಬದುಕು, ಚಿಂತನೆ ಮತ್ತು ಹೋರಾಟಗಳು ಸರ್ವರಿಗೂ ಪ್ರೇರಣೀಯ. ಇವರ ಅವಿರತ ಪರಿಶ್ರಮದಿಂದಾಗಿ ರಚಿತಗೊಂಡ ಭಾರತದ ಸಂವಿಧಾನವು ಜಗತ್ತಿನಲ್ಲಿಯೇ ಬೃಹತ್ ಸಂವಿಧಾನವಾಗಿದೆ. ಇದು ವಿಶ್ವದ ಅನೇಕ ರಾಷ್ಟ್ರಗಳಿಗೆ ಮಾದರಿ ಸಂವಿಧಾನವಾಗಿದೆ.

ಅಭ್ಯಾಸ

I. ಒಂದು ವಾಕ್ಯದಲ್ಲಿ ಉತ್ತರಿಸಿ:

1. ಅಂಬೇಡ್ಕರ್ ಎಲ್ಲಿ ಜನಿಸಿದರು?
2. ಅಂಬೇಡ್ಕರ್ ರ ತಂದೆ, ತಾಯಿಗಳ ಹೆಸರೇನು?
3. ಅಂಬೇಡ್ಕರ್ ರ ಪೂರ್ಣ ಹೆಸರು ಏನು?
4. ವಿಶ್ವಸಂಸ್ಥೆಯು ‘ವಿಶ್ವಜ್ಞಾನ ದಿನ’ವನ್ನಾಗಿ ಯಾವ ದಿನವನ್ನು ಆಚರಿಸುತ್ತಿದೆ?
5. ಅಂಬೇಡ್ಕರ್ ರ ಪತ್ನಿಯ ಹೆಸರೇನು?
6. ಅಂಬೇಡ್ಕರ್ ರ ಮೂಲ ಹೆಸರನ್ನು ಬದಲಿಸಿದ ಗುರು ಯಾರು?
7. ಅಸ್ಪೃಶ್ಯತೆಯ ರದ್ದತಿ ಕುರಿತು ಸಂವಿಧಾನದ ಯಾವ ವಿಧಿ ತಿಳಿಸುತ್ತದೆ?
8. ಅಂಬೇಡ್ಕರ್ ಅವರನ್ನು ‘ಭಾರತದ ಸ್ಥಾಪಕ ಪಿತಾಮಹ’ ಎಂದು ಕರೆದವರು ಯಾರು?
9. ಅಂಬೇಡ್ಕರ್ ಅವರನ್ನು ‘ಮಾನವ ಹಕ್ಕುಗಳ ವೀರಾಗ್ರಣಿ’ ಎಂದವರು ಯಾರು?

II. ಎರಡು ಅಥವಾ ಮೂರು ವಾಕ್ಯಗಳಲ್ಲಿ ಉತ್ತರಿಸಿ:

1. ಅಂಬೇಡ್ಕರ್ ರ ಮೂರು ಪ್ರಮುಖ ಕೃತಿಗಳನ್ನು ತಿಳಿಸಿ?
2. ಅಂಬೇಡ್ಕರ್ ರ ರಾಜ್ಯದ ಮೂರು ಮುಖ್ಯ ಗುರಿಗಳಾವುವು?
3. ಅಂಬೇಡ್ಕರ್ ರ ಪ್ರಕಾರ ಪ್ರಜಾಪ್ರಭುತ್ವ ಎಂದರೇನು?
4. ಅಂಬೇಡ್ಕರ್ ರ ರಾಜ್ಯ ಸಮಾಜವಾದದ ಕಾರ್ಯ ಸಾಧನೆಯ ಮೂರು ತಂತ್ರಗಳಾವುವು?
5. ಅಂಬೇಡ್ಕರ್ ರ ಪ್ರಕಾರ ಸಾಮಾಜಿಕ ನ್ಯಾಯ ಎಂದರೇನು?

III. ನಾಲ್ಕು ಅಥವಾ ಐದು ವಾಕ್ಯಗಳಲ್ಲಿ ಉತ್ತರಿಸಿ:

1. ಅಂಬೇಡ್ಕರ್ ರ ಪ್ರಮುಖ ಸಾಮಾಜಿಕ ಹೋರಾಟಗಳು ಯಾವುವು?
2. ಅಂಬೇಡ್ಕರ್ ರ ರಾಜ್ಯದ ಪರಿಕಲ್ಪನೆಯನ್ನು ವಿವರಿಸಿ.
3. ಅಂಬೇಡ್ಕರ್ ಪ್ರತಿಪಾದಿಸಿದ ಪ್ರಜಾಪ್ರಭುತ್ವದ ಅಗತ್ಯಾಂಶಗಳಾವುವು?
4. ಅಂಬೇಡ್ಕರ್ ಪ್ರತಿಪಾದಿಸಿದ ಸಾಮಾಜಿಕ ನ್ಯಾಯದ ಪರಿಕಲ್ಪನೆಯನ್ನು ತಿಳಿಸಿ.
5. ಅಂಬೇಡ್ಕರ್ ರವರ ರಾಜ್ಯ ಸಮಾಜವಾದದ ಪರಿಕಲ್ಪನೆಯನ್ನು ಬರೆಯಿರಿ.

IV. ಎಂಟು ಅಥವಾ ಹತ್ತು ವಾಕ್ಯಗಳಲ್ಲಿ ಉತ್ತರಿಸಿ:

1. ಅಂಬೇಡ್ಕರ್ ಅವರು ಸಾಮಾಜಿಕ ನ್ಯಾಯವನ್ನು ಸಾಕಾರಗೊಳಿಸಲು ನೀಡಿರುವ ಸಲಹೆಗಳನ್ನು ವಿವರಿಸಿ.
2. ಅಂಬೇಡ್ಕರ್ ‘ಆಧುನಿಕ ಭಾರತದ ಸ್ಥಾಪಕ ಪಿತಾಮಹರಾಗಿದ್ದಾರೆ’- ಸಮರ್ಥಿಸಿ.
3. ಅಂಬೇಡ್ಕರ್ ರವರು ಭಾರತ ಸಂವಿಧಾನಕ್ಕೆ ನೀಡಿರುವ ಕೊಡುಗೆಗಳಾವುವು?
4. **ಡಾ. ಬಿ. ಆರ್. ಅಂಬೇಡ್ಕರ್ ರ**ವರು ‘ಭಾರತದ ಸಮಾಜ ವಿಜ್ಞಾನಗಳ ಪಿತಾಮಹ’ ಚರ್ಚಿಸಿ.

ಸಲಹಾತ್ಮಕ ಚಟುವಟಿಕೆ

‘**ಡಾ. ಬಿ. ಆರ್. ಅಂಬೇಡ್ಕರ್** ಅವರ ಭಾರತ ಸಂವಿಧಾನ ರಚನೆಯ ಸಮರ್ಥ ಪಾತ್ರ ನಿರ್ವಹಣೆ’ಯ ಕುರಿತು ಚರ್ಚೆ ಅಥವಾ ಸಂವಾದ ಏರ್ಪಡಿಸಿ.

ಅಧ್ಯಾಯ- 5 ಸರ್ಕಾರ (Government)

ಕಲಿಕಾ ಉದ್ದೇಶಗಳು:

1. ಸರ್ಕಾರದ ಅರ್ಥವನ್ನು ತಿಳಿಯುವುದು.
2. ಸರ್ಕಾರದ ಮಹತ್ವವನ್ನು ಅರಿಯುವುದು.
3. ಸರ್ಕಾರದ ವಿವಿಧ ವಿಧಗಳನ್ನು ಗುರುತಿಸುವುದು.
4. ರಾಷ್ಟ್ರರಾಜಕಾರಣದಲ್ಲಿ ನಾಯಕತ್ವ ಗುಣಗಳನ್ನು ಬೆಳೆಸಿಕೊಳ್ಳಲು ಪ್ರೇರೇಪಿಸುವುದು.

"ಸರ್ಕಾರವು ನಿರಂಕುಶತ್ವವಾಗಿರಲಿ, ಪ್ರಜಾಪ್ರಭುತ್ವವಾಗಿರಲಿ ಅಥವಾ ಬೇರಾವುದೇ ವಿಧವಾಗಿರಲಿ ಒಟ್ಟಿನಲ್ಲಿ ಸರ್ಕಾರವೆಂಬುದು ಇರಬೇಕು. ಇಲ್ಲದಿದ್ದಲ್ಲಿ ಅರಾಜಕತೆ ಉಂಟಾಗಿ ರಾಜ್ಯ ಕೊನೆಗೊಳ್ಳುತ್ತದೆ." **ಬ್ಲಂಟ್‌ಷ್ಲಿ**

ಪೀಠಿಕೆ:

ರಾಜ್ಯದ ನಾಲ್ಕು ಮೂಲಾಂಶಗಳಲ್ಲಿ ಸರ್ಕಾರವು ಒಂದು. ಸರ್ಕಾರವಿಲ್ಲದ ರಾಜ್ಯವನ್ನು ಕಲ್ಪಿಸಿಕೊಳ್ಳಲು ಸಾಧ್ಯವಿಲ್ಲ. ರಾಜ್ಯ ಮತ್ತು ಸರ್ಕಾರಗಳು ಅವಿಭಾಜ್ಯವಾದವುಗಳಾಗಿವೆ. ರಾಜ್ಯದ ಜನತೆಯ ಇಚ್ಛೆಯನ್ನು ಈಡೇರಿಸುವ ಸಾಧನವೇ ಸರ್ಕಾರವಾಗಿದೆ. ಕಾನೂನು ಮತ್ತು ಸುವ್ಯವಸ್ಥೆಯನ್ನು ಕಾಪಾಡಿಕೊಂಡು ಶಾಂತಿಯುತ ಜೀವನ ನಡೆಸಲು ಸಾಧ್ಯವಾಗುವಂತೆ ಮಾಡುವುದೇ ಸರ್ಕಾರ.

ಸರ್ಕಾರವು ಶಾಸಕಾಂಗ, ಕಾರ್ಯಾಂಗ, ನ್ಯಾಯಾಂಗ ಎಂಬ ಮೂರು ಅಂಗಗಳನ್ನು ಹೊಂದಿದೆ. ಶಾಸಕಾಂಗವು ಕಾನೂನುಗಳನ್ನು ರಚಿಸಿದರೆ, ಕಾರ್ಯಾಂಗವು ಅವುಗಳನ್ನು ಅನುಷ್ಠಾನಕ್ಕೆ ತರುತ್ತದೆ ಹಾಗೂ ನ್ಯಾಯಾಂಗವು ಶಾಸಕಾಂಗ ಮತ್ತು ಕಾರ್ಯಾಂಗಗಳಿಂದ ರೂಪಿಸಲ್ಪಟ್ಟ ಕಾಯಿದೆಗಳಿಗೆ ಅರ್ಥವಿವರಣೆ ನೀಡುವುದರ ಜೊತೆಗೆ ಕಾನೂನನ್ನು ಉಲ್ಲಂಘಿಸಿದವರಿಗೆ ಶಿಕ್ಷೆ ವಿಧಿಸುತ್ತದೆ.

5.1 ಅರ್ಥ:

ಸರ್ಕಾರ ಎಂಬ ಪದವು ಆಂಗ್ಲ ಭಾಷೆಯ 'ಗೌರ್ನಮೆಂಟ್' ಪದದ ಕನ್ನಡ ರೂಪಾಂತರವಾಗಿದೆ. ಈ ಪದವು ಲಾಟಿನ್ ಭಾಷೆಯ 'ಗುಬೆರ್ನಾಕುಲಂ' (Gubernacula) ಎಂಬ ಪದದಿಂದ ಬಂದಿದೆ. ಇದರರ್ಥ ನೌಕೆಯನ್ನು ನಡೆಸುವ ಯಂತ್ರ

ಎಂಬುದಾಗಿದೆ. ಇಲ್ಲಿ ರಾಜ್ಯವನ್ನು ನೌಕೆಗೆ, ಸರ್ಕಾರವನ್ನು ಅದರ ಯಂತ್ರಕ್ಕೆ ಹೋಲಿಸಲಾಗಿದೆ. ರಾಜ್ಯವೆಂಬ ಹಡಗನ್ನು ಸರ್ಕಾರವೆಂಬ ಯಂತ್ರ ನಡೆಸಿಕೊಂಡು ಹೋಗುತ್ತದೆ ಎಂಬರ್ಥ ನೀಡುತ್ತದೆ. ಸರ್ಕಾರ ಎಂದರೆ ಸಂವಿಧಾನದ ಪ್ರಕಾರ ಅಧಿಕಾರವನ್ನು ಚಲಾಯಿಸುವ ಸಂಸ್ಥೆಯಾಗಿದೆ.

ವ್ಯಾಖ್ಯೆಗಳು:

ಎಡ್ಮಂಡ್ ಬರ್ಕ್ ರವರ ಪ್ರಕಾರ: "ರಾಜ್ಯದ ಇಚ್ಛೆಯನ್ನು ಈಡೇರಿಸುವ ಯಂತ್ರವೇ ಸರ್ಕಾರ."

ಗಾರ್ನರ್ ರವರ ಪ್ರಕಾರ: "ರಾಜ್ಯದ ಅಥವಾ ಜನತೆಯ ಸಾಮೂಹಿಕ ಇಚ್ಛೆಯನ್ನು ರೂಪಿಸುವ, ವ್ಯಕ್ತಪಡಿಸುವ, ಜಾರಿತರುವ ಸಾಧನವೇ ಸರ್ಕಾರ."

ಎಚ್. ಜೆ. ಲಾಸ್ಕಿ ಯವರ ಪ್ರಕಾರ: "ರಾಜ್ಯದ ಉದ್ದೇಶಗಳನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸುವ ವಸ್ತುಸ್ಥಿತಿಯೇ ಸರ್ಕಾರ."

ಗಿಡ್ಡಿಂಗ್ಸ ರವರ ಪ್ರಕಾರ: "ನಾಗರಿಕ ಸಮಾಜದ ಪ್ರಮುಖ ಸುಧಾರಣಾ ಸಂಘಟನೆಯೇ ಸರ್ಕಾರ."

ಮಹತ್ವ:

ಸರ್ಕಾರವು ರಾಜ್ಯಾಡಳಿತದ ಮುಖ್ಯ ಕಾರ್ಯನಿರ್ವಾಹಣಾಂಗವಾಗಿದೆ. ಇದರ ಮಹತ್ವವು ಈ ಕೆಳಕಂಡಂತಿವೆ.

1. **ರಾಜ್ಯದ ಜನತೆಯ ಆಶೋತ್ತರಗಳನ್ನು ಈಡೇರಿಸುತ್ತದೆ:**

ರಾಜ್ಯದ ಜನತೆಯು ಉತ್ತಮವಾಗಿ ಜೀವನ ನಡೆಸಲು ಕೆಲವು ಅಂಶಗಳು ಅಥವಾ ವ್ಯವಸ್ಥೆಗಳು ಅವಶ್ಯವಾಗಿರುತ್ತದೆ, ಈ ಅವಶ್ಯಕತೆಯನ್ನು ಸರ್ಕಾರವು ನೆರವೇರಿಸುತ್ತದೆ.

2. **ಸಮಾಜದಲ್ಲಿನ ಬಿಕ್ಕಟ್ಟುಗಳನ್ನು ನಿವಾರಿಸುತ್ತದೆ:**

ರಾಷ್ಟ್ರದ ಸಮಸ್ಯೆಗಳು ಹಾಗೂ ಸವಾಲುಗಳನ್ನು ಪರಿಹರಿಸುವಲ್ಲಿ ಸರ್ಕಾರವು ಮಹತ್ವದ ಪಾತ್ರವನ್ನು ನಿರ್ವಹಿಸುತ್ತದೆ. ಉದಾಹರಣೆಗೆ ಆಂತರಿಕ ಅಸ್ಥಿರತೆ, ವಿದೇಶಿ ಆಕ್ರಮಣ, ಆರ್ಥಿಕ ಅಸ್ಥಿರತೆ, ಪ್ರಾಕೃತಿಕ ವಿಕೋಪಗಳು.

3. **ರಾಜ್ಯಕ್ಕೆ ಬಲವನ್ನು ನೀಡುತ್ತದೆ:**

ರಾಜ್ಯದ ಜನತೆಯ ಆಶೋತ್ತರಗಳನ್ನು ಈಡೇರಿಸುವ ಮೂಲಕ ರಾಜ್ಯಕ್ಕೆ ಬಲವನ್ನು ಸರ್ಕಾರವು ನೀಡುತ್ತದೆ.

4. **ರಾಜಕೀಯ ಪ್ರಜ್ಞೆಯನ್ನು ಮೂಡಿಸುತ್ತದೆ:**

ಚುನಾವಣೆಯ ಮೂಲಕ ಜನತೆಯಿಂದ ಸರ್ಕಾರ ರಚನೆಯಾಗುವುದರಿಂದ ಇದು ಜನರಲ್ಲಿ ರಾಜಕೀಯ ಪ್ರಜ್ಞೆಯನ್ನು ಮೂಡಿಸುತ್ತದೆ.

5. **ಸೇವೆಗಳನ್ನು ಜಾರಿ ತರಲು ಸರ್ಕಾರವು ಅವಶ್ಯವಾಗಿದೆ:**

ರಕ್ಷಣೆ, ಸಾರಿಗೆ ಮತ್ತು ಸಂಪರ್ಕ, ಆರೋಗ್ಯ, ಶಿಕ್ಷಣ, ವಿದ್ಯುತ್ ಮುಂತಾದ ಪ್ರಮುಖ ಸೇವೆಗಳನ್ನು ಸರ್ಕಾರವು ಸಾರ್ವಜನಿಕರಿಗಾಗಿ ಒದಗಿಸುತ್ತದೆ.

6. **ರಾಜಕೀಯ ಸ್ಥಿರತೆಯನ್ನು ಕಾಪಾಡುತ್ತದೆ:**

ರಾಜ್ಯದ ಸ್ಥಿರತೆಯು ಅಭಿವೃದ್ಧಿಯ ಅಗತ್ಯಾಂಶಗಳಲ್ಲಿ ಒಂದಾಗಿದೆ. ಅದರ ಅಸ್ಥಿರತೆಯು ಅಸಂಖ್ಯಾತ ಸಮಸ್ಯೆಗಳಿಗೆ ಕಾರಣವಾಗುತ್ತದೆ. ಹಾಗಾಗಿ ಸರ್ಕಾರವು ರಾಜಕೀಯ ಸ್ಥಿರತೆಯನ್ನು ಕಾಪಾಡಿಕೊಂಡು ಹೋಗಲು ನಿರಂತರವಾಗಿ ಪ್ರಯತ್ನಿಸುತ್ತಿರುತ್ತದೆ.

7. **ರಾಷ್ಟ್ರದ ಅಸ್ತಿತ್ವವನ್ನು ಉಳಿಸಿಕೊಳ್ಳುತ್ತದೆ:**

ಸರ್ಕಾರವು ಆಂತರಿಕ ನೀತಿಯನ್ನು ರೂಪಿಸಿ ಅನುಷ್ಠಾನಗೊಳಿಸುವಂತೆಯೇ ತನ್ನ ಬಾಹ್ಯ ಜನತೆ ಮತ್ತು ರಾಷ್ಟ್ರದ ಗುರಿ ಹಾಗೂ ಸಾರ್ವಭೌಮತ್ವವನ್ನು ಸಂರಕ್ಷಿಸುತ್ತಾ, ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಪರಮಾಧಿಕಾರದ ಬಲದಿಂದ ವಿದೇಶಾಂಗ ನೀತಿಯನ್ನು ರೂಪಿಸಿ ಅನುಷ್ಠಾನಗೊಳಿಸುತ್ತದೆ. ತನ್ನ ರಾಷ್ಟ್ರೀಯ ಮಟ್ಟದಲ್ಲಿ ರಾಷ್ಟ್ರದ ಅಸ್ತಿತ್ವವನ್ನು ಕಾಪಾಡಿಕೊಂಡು ಹೋಗುತ್ತದೆ. ಜೈವಿಕಯಂತ್ರದಂತಿರುವ ಸರ್ಕಾರವು ಜನತೆಯ ಹಿತಾಸಕ್ತಿಗಳನ್ನು ಈಡೇರಿಸುವ ಜೊತೆಗೆ ರಾಷ್ಟ್ರದ ಧ್ಯೇಯಗುರಿಗಳನ್ನು ಸಾಕಾರಗೊಳಿಸುವ ಸಾಧನವಾಗಿ ಕಾರ್ಯನಿರ್ವಹಿಸುತ್ತದೆ.

ಪ್ಲೇಟೋರವರು ಸರ್ಕಾರವನ್ನು ಜೈವಿಕ ಯಂತ್ರವೆಂದು ಕರೆದಿದ್ದು, ಇಲ್ಲಿ ಶಾಸಕಾಂಗವನ್ನು ಮೆದುಳಿಗೆ, ಕಾರ್ಯಾಂಗವನ್ನು ಹೃದಯಕ್ಕೆ ಹಾಗೂ ನ್ಯಾಯಾಂಗವನ್ನು ಮೂತ್ರಕೋಶಕ್ಕೆ ಹೋಲಿಸಿದ್ದಾರೆ.

5.3 ಸರ್ಕಾರದ ವಿಧಗಳು:

ಅರಿಸ್ಟಾಟಲ್, ಮೆಕೆವಲ್ಲಿ, ಜಾನ್‌ಲಾಕ್, ಲೀಕಾಕ್ ಮುಂತಾದ ರಾಜಕೀಯ ಚಿಂತಕರುಗಳಲ್ಲಿ ಸರ್ಕಾರದ ವಿಧಗಳ ಕುರಿತು ಒಮ್ಮತದ ಅಭಿಪ್ರಾಯವಿಲ್ಲ. ಆದರೆ ಆಧುನಿಕ ಸರ್ಕಾರಗಳ ವರ್ಗೀಕರಣ ಇಂತಿವೆ.

ಸರ್ಕಾರ

1. ರಾಜಪ್ರಭುತ್ವ

2. ನಿರಂಕುಶ ಪ್ರಭುತ್ವ

3. ಪ್ರಜಾಪ್ರಭುತ್ವ:

   a. ಸಂಸದೀಯ ಸರ್ಕಾರ

   b. ಆ. ಅಧ್ಯಕ್ಷೀಯ

   c. ಇ. ಏಕಾತ್ಮಕ

   d. ಈ. ಸಂಯುಕ್ತ

1. ರಾಜಪ್ರಭುತ್ವ

ಪ್ರಾಚೀನ ಪದ್ಧತಿಗಳಲ್ಲಿ ರಾಜಪ್ರಭುತ್ವವು ಒಂದು ಇದು ವಂಶಪಾರಂಪರ್ಯವಾಗಿ ಮುಂದುವರೆಯುತ್ತಾ ಜನರ ಯೋಗಕ್ಷೇಮವನ್ನು ನೋಡಿಕೊಳ್ಳುವ ವ್ಯವಸ್ಥೆಯಾಗಿದೆ. ಇಲ್ಲಿ ಆಳುವ ಅರಸನು ಸರ್ವಾಧಿಕಾರತ್ವವನ್ನು ಹೊಂದಿದ್ದರೂ ಜನರ ಅಭಿಮತಕ್ಕೆ ತಲೆಬಾಗಿ ಕಾರ್ಯನಿರ್ವಹಿಸುತಿದ್ದ. ಕೌಟಿಲ್ಯನ ಪ್ರಕಾರ ಪ್ರಜೆಗಳ ಯೋಗಕ್ಷೇಮದಲ್ಲಿಯೇ ರಾಜನ ಯೋಗಕ್ಷೇಮವಿದೆ. ಇದನ್ನು ಹೊರತು ಪಡಿಸಿ ರಾಜನಿಗೆ ತನ್ನದೇ ಆದ ಪ್ರತ್ಯೇಕ ಸುಖ ಅಥವಾ ಯೋಗಕ್ಷೇಮವಿಲ್ಲ ಎಂಬ ಮಾತು ರಾಜಪ್ರಭುತ್ವದ ಮಹತ್ವವನ್ನು ಸಮರ್ಥಿಸುತ್ತದೆ. **ಉದಾಹರಣೆ:** ಕುವೈತ್.

2. ನಿರಂಕುಶ ಸರ್ಕಾರ.

ಆಲ್‌ಫ್ರೆಡ್ ಕೋಬಾನ್ ರವರ ಪ್ರಕಾರ**:** "ಒಬ್ಬ ವ್ಯಕ್ತಿಯು ಯಾರ ಅಧಿಕಾರಕ್ಕೂ ಒಳಪಡದೆ, ನಿರ್ದಿಷ್ಟ ಅಧಿಕಾರವನ್ನು ಹೊಂದಿರದೆ, ಶಕ್ತಿ ಪ್ರಯೋಗದ ಮೂಲಕ ಅಧಿಕಾರ ಚಲಾಯಿಸುವ ಪದ್ಧತಿಯೇ ನಿರಂಕುಶತ್ವ". ನಿರಂಕುಶತ್ವವು ಒಂದು ಪ್ರಜಾಪ್ರಭುತ್ವಕ್ಕೆ ವಿರುದ್ಧವಾದ ಸರ್ಕಾರದ ಪದ್ಧತಿಯಾಗಿದೆ. ಈ ಬಗೆಯ ಸರ್ಕಾರದಲ್ಲಿ ಪ್ರಜೆಗಳಿಗೆ ರಾಜ್ಯಾಡಳಿತದಲ್ಲಿ ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ಭಾಗವಹಿಸುವ ಅವಕಾಶವನ್ನು ಮತ್ತು ಸ್ವಾತಂತ್ರ್ಯವನ್ನು ನಿರಾಕರಿಸಲಾಗಿರುತ್ತದೆ. ರಾಷ್ಟ್ರದ ಸಂಪೂರ್ಣ ಅಧಿಕಾರವೆಲ್ಲವೂ ಒಬ್ಬ ವ್ಯಕ್ತಿ ಅಥವಾ ಒಂದು ಪಕ್ಷ ಅಥವಾ ಒಂದು ಗುಂಪಿನಲ್ಲಿರುತ್ತದೆ. ಇದು ಬಲ ಪ್ರಯೋಗ ತತ್ವಕ್ಕೆ ಬದ್ಧವಾಗಿ ಕಾರ್ಯನಿರ್ವಹಿಸುತ್ತದೆ. **ಉದಾಹರಣೆ: ಜರ್ಮನಿಯ ಹಿಟ್ಲರ್.**

ನಿರಂಕುಶ ಅಧಿಕಾರವನ್ನು ಚಲಾಯಿಸಿದವರಲ್ಲಿ ಪ್ರಮುಖರುಗಳೆಂದರೆ: ಗ್ರೀಸ್‌ನ ಸಿಸ್ ಸ್ಟಸ್, ರೋಮನ್‌ನ ಜೂಲಿಯಸ್ ಸೀಸರ್, ರಷ್ಯಾಯದ ಸ್ಟಾಲಿನ್, ಇಟಲಿಯ

ಮುಸಲೋನಿ, ಫ್ರಾನ್ಸನ ನೆಪೋಲಿಯನ್, ಬರ್ಮಾದ ನೆವಿನ್, ಯುಗಾಂಡದ ಇದಿ ಅಮಿನ್, ಪಾಕಿಸ್ತಾನದ ಜಿಯಾ-ಉಲ್- ಹಕ್ ಮತ್ತು ಮುಷ್ರಫ್, ಬಾಂಗ್ಲಾದ ಏರ್ಷಾದ್, ಈಜಿಪ್ಟ್‌ನ ಮುಬಾರಕ್, ಲಿಬಿಯಾದ ಗಡಾಫಿ ಮುಂತಾದವರುಗಳು.

3. ಪ್ರಜಾಪ್ರಭುತ್ವ ಸರ್ಕಾರ.

ಅಬ್ರಹಾಂ ಲಿಂಕನ್ ರವರ ಪ್ರಕಾರ: ಪ್ರಜೆಗಳಿಂದ, ಪ್ರಜೆಗಳಿಗಾಗಿ, ಪ್ರಜೆಗಳಿಗೋಸ್ಕರ ಇರುವ ಸರ್ಕಾರವೇ ಪ್ರಜಾಪ್ರಭುತ್ವ.

ಬಾರ್ಕರ್ ರವರ ಪ್ರಕಾರ: ಟೀಕೆ ಮತ್ತು ಚರ್ಚೆಗಳಿಂದ ಕೂಡಿದ ಸರ್ಕಾರವೇ ಪ್ರಜಾಪ್ರಭುತ್ವ.

ಪ್ರಜಾಪ್ರಭುತ್ವವು ಸರ್ಕಾರದ ಒಂದು ಬಗೆಯಾಗಿದೆ. ಇದು ಇಡೀ ವಿಶ್ವದಲ್ಲೇ ಹೆಚ್ಚು ಜನಪ್ರಿಯತೆಯನ್ನು ಪಡೆದುಕೊಂಡಿದೆ. ಇಂದಿನ ಯುಗವನ್ನು ಪ್ರಜಾಪ್ರಭುತ್ವಯುಗವೆಂದೇ ಕರೆಯಲಾಗುತ್ತದೆ. ಇಲ್ಲಿ ವ್ಯಕ್ತಿಗೆ ಹೆಚ್ಚು ಸ್ವಾತಂತ್ರ್ಯವಿದೆ. ಸರ್ಕಾರ ರಚಿಸುವಲ್ಲಿ, ನೀತಿ ನಿರ್ಧಾರ ಕೈಗೊಳ್ಳುವಲ್ಲಿ, ಮೇಲ್ವಿಚಾರಣೆ ನಡೆಸುವಲ್ಲಿ ಪ್ರಜೆಗಳ ಪಾತ್ರವೇ ಮುಖ್ಯವಾಗಿರುತ್ತದೆ. ಇದು ವ್ಯಕ್ತಿಯ ಪರಿಪೂರ್ಣ ಬೆಳವಣಿಗೆಗೆ ಸಹಕಾರಿಯಾದ ಸರ್ಕಾರದ ಪದ್ಧತಿಯಾಗಿದೆ. ಭಾರತ ಬೃಹತ್ ಗಾತ್ರದ ಪ್ರಜಾಪ್ರಭುತ್ವಕ್ಕೆ ಉದಾಹರಣೆಯಾಗಿದೆ.

ಪ್ರಜಾಪ್ರಭುತ್ವದಲ್ಲಿ ಪ್ರತ್ಯಕ್ಷ ಪ್ರಜಾಪ್ರಭುತ್ವ ಹಾಗೂ ಪರೋಕ್ಷ ಪ್ರಜಾಪ್ರಭುತ್ವ ಎಂಬ ಎರಡು ವಿಧಗಳಿವೆ.

ಪ್ರತ್ಯಕ್ಷ ಪ್ರಜಾಪ್ರಭುತ್ವ: ಪ್ರಜೆಗಳು ಪ್ರತ್ಯಕ್ಷವಾಗಿ ರಾಜ್ಯಾಡಳಿತದಲ್ಲಿ ಭಾಗವಹಿಸುವ ರಾಜಕೀಯ ವ್ಯವಸ್ಥೆಯನ್ನು ಪ್ರತ್ಯಕ್ಷ ಪ್ರಜಾಪ್ರಭುತ್ವ ಎಂದು ಕರೆಯಲಾಗುತ್ತದೆ. ಇಲ್ಲಿ ಪ್ರಜಾನಿರ್ಧಾರ, ಪ್ರಜಾನಿದೇಶನ ಮತ್ತು ಹಿಂದಕ್ಕೆ ಕರೆಸಿಕೊಳ್ಳುವಿಕೆ ಎಂಬ ಮೂರು ವಿಧಾನದ ಮೂಲಕ ಪ್ರತ್ಯಕ್ಷ ಪ್ರಜಾಪ್ರಭುತ್ವವು ಕಾರ್ಯವನ್ನು ನಿರ್ವಹಿಸುತ್ತದೆ.

ಪ್ರಜಾನಿರ್ಧಾರ: ಶಾಸಕಾಂಗ ರಚಿಸಿದ ಶಾಸನದ ಬಗ್ಗೆ ಜನಾಭಿಪ್ರಾಯ ಸಂಗ್ರಹಿಸುವುದು.

ಪ್ರಜಾನಿರ್ದೇಶನ: ಸಂಗ್ರಹಿಸಿದ ಜನಾಭಿಪ್ರಾಯವನ್ನು ಶಾಸಕಾಂಗಕ್ಕೆ ಅಂಗೀಕರಿಸುವಂತೆ ಕಳುಹಿಸಲು ಇರುವ ಜನರ ಸ್ವಾತಂತ್ರ.

ಹಿಂದಕ್ಕೆ ಕರೆಸಿಕೊಳ್ಳುವಿಕೆ (ಇಂಗರೆಯುವಿಕೆ): ಪ್ರಜಾಪ್ರತಿನಿಧಿಗಳು ಜನರ ನಿರೀಕ್ಷೆಗೆ ತಕ್ಕಂತೆ ಸಮರ್ಪಕವಾಗಿ ಕೆಲಸ ನಿರ್ವಹಿಸದಿದ್ದರೆ, ಅಂತಹ ಪ್ರತಿನಿಧಿಗಳನ್ನು ವಾಪಸ್ಸು ಕರೆಸಿಕೊಳ್ಳುವುದು.

ಈ ಬಗೆಯ ಸರ್ಕಾರವನ್ನು ಸಾಧಾರಣವಾಗಿ ಜನಸಂಖ್ಯೆ ಮತ್ತು ವಿಸ್ತೀರ್ಣಗಳಲ್ಲಿ ನಿಯಮಿತ ವ್ಯಾಪ್ತಿಯನ್ನು ಹೊಂದಿರುವ ದೇಶಗಳು ಪಾಲಿಸುತ್ತವೆ. ಉದಾಹರಣೆ: ಸ್ವಿಟ್ಜರ್ ಲ್ಯಾಂಡ್

ಪರೋಕ್ಷ: 'ಪ್ರಜೆಗಳು ಪರೋಕ್ಷವಾಗಿ ರಾಜ್ಯಾಡಳಿತದಲ್ಲಿ ಭಾಗವಹಿಸುವ ರಾಜಕೀಯ ವ್ಯವಸ್ಥೆಯೇ ಪರೋಕ್ಷ ಪ್ರಜಾಪ್ರಭುತ್ವ.' ಆಧುನಿಕ ರಾಜ್ಯಗಳು ಗಾತ್ರದಲ್ಲಿ ವಿಶಾಲವಾಗಿದ್ದು, ಹೆಚ್ಚು ಜನಸಂಖ್ಯೆಯನ್ನು ಹೊಂದಿರುವುದರಿಂದ ಪ್ರಜೆಗಳು ಮುಖಾಮುಖಿ/ ನೇರವಾಗಿ ಕಾನೂನುಗಳನ್ನು ರೂಪಿಸುವ ಮತ್ತು ಅನುಷ್ಠಾನಗೊಳಿಸುವ ಪ್ರಕ್ರಿಯೆಯಲ್ಲಿ ಭಾಗವಹಿಸುವುದು ಸಾಧವಾಗುವುದಿಲ್ಲ. ಆದಕಾರಣ ನಿಯತಕಾಲಿಕ ಚುನಾವಣೆಗಳ ಮೂಲಕ ಪ್ರಜೆಗಳಿಂದ ಚುನಾಯಿಸಲ್ಪಟ್ಟ ಪ್ರತಿನಿಧಿಗಳು ಆಡಳಿತ ಕಾರ್ಯದಲ್ಲಿ ಭಾಗವಹಿಸುತ್ತಾರೆ. ಆದ್ದರಿಂದ ಈ ಪದ್ಧತಿಯನ್ನು ಪ್ರತಿನಿಧಿ ಸರ್ಕಾರವೆಂತಲೂ ಕರೆಯುತ್ತಾರೆ. ಉದಾಹರಣೆ: ಭಾರತ, ಕೆನಡ, ಅಮೇರಿಕಾ.

4. ಸಂಸದೀಯ ಸರ್ಕಾರ:

ಗಾರ್ನರ್ ಪ್ರಕಾರ "ಮಂತ್ರಿ ಮಂಡಲವು ಶಾಸನಬದ್ಧವಾಗಿ ಸಂಸತ್ತಿಗೆ ಜವಾಬ್ದಾರಿಯಾರಿಯಾಗಿರುವ ಪದ್ಧತಿಯೇ ಸಂಸದೀಯ ಸರ್ಕಾರ". ಇಲ್ಲಿ ಕಾರ್ಯಾಂಗವು ಎಲ್ಲಿಯವರೆಗೆ ಶಾಸಕಾಂಗದ ವಿಶ್ವಾಸ ಹೊಂದಿರುತ್ತದೆಯೋ ಅಲ್ಲಿಯವರೆಗೆ ಅಧಿಕಾರದಲ್ಲಿರುತ್ತದೆ. ಅಂದರೆ ಶಾಸಕಾಂಗವು ಕಾರ್ಯಾಂಗವನ್ನು ಅಧಿಕಾರದಿಂದ ಪದಚ್ಯುತಗೊಳಿಸುವ ಅಧಿಕಾರ ಹೊಂದಿರುತ್ತದೆ. ಸಂಸದೀಯ ಸರ್ಕಾರ ಪದ್ಧತಿಯಲ್ಲಿ ಅಧ್ಯಕ್ಷನು ನಾಮಮಾತ್ರ ಕಾರ್ಯಾಂಗದ ಅಧಿಕಾರಿಯಾಗಿ ಕಾರ್ಯನಿರ್ವಹಿಸಿದರೆ, ಪ್ರಧಾನಮಂತ್ರಿ ಹಾಗೂ ಮಂತ್ರಿಮಂಡಲವು ನೈಜ ಕಾರ್ಯಾಂಗವಾಗಿ ಅಧಿಕಾರ ಚಲಾಯಿಸುತ್ತಾರೆ.

ಸಂಸದೀಯ ಪದ್ಧತಿಯಲ್ಲಿ ಶಾಸಕಾಂಗ ಮತ್ತು ಕಾರ್ಯಾಂಗದ ನಡುವೆ ಸಾಮರಸ್ಯ ಏರ್ಪಡುವ ಕಾರಣ ಬಗ್ಲಾಟ್ ರವರು ತಿಳಿಸಿರುವಂತೆ ಸಂಸದೀಯ ಪದ್ಧತಿಯಲ್ಲಿ ಸಚಿವ ಸಂಪುಟವು ಕಾರ್ಯಾಂಗ ಮತ್ತು ಶಾಸಕಾಂಗವನ್ನು ಒಟ್ಟಿಗೆ ಸೇರಿಸುವ ಕೊಂಡಿಯಾಗಿದೆ ಎಂದಿದ್ದಾರೆ.

ಉದಾಹರಣೆಗೆ: ಭಾರತದ ರಾಷ್ಟ್ರಪತಿ, ಬ್ರಿಟನ್‌ನ ರಾಣಿ.

5. ಅಧ್ಯಕ್ಷೀಯ ಸರ್ಕಾರ:

ಗಾರ್ನರ್ ಪ್ರಕಾರ "ಯಾವ ಸರ್ಕಾರದಲ್ಲಿ ಕಾರ್ಯಾಂಗವು ತನ್ನ ಅಧಿಕಾರಾವಧಿಯಲ್ಲಿ ನಿರಂತರವಾಗಿ ಶಾಸಕಾಂಗದಿಂದ ಸ್ವತಂತ್ರ್ಯವಾಗಿರುತ್ತದೆಯೋ ಹಾಗೂ ತನ್ನ ನೀತಿಗಳಲ್ಲಿ ಶಾಸಕಾಂಗಕ್ಕೆ ಹೊಣೆಯಾಗಿರುವುದಿಲ್ಲವೋ ಅಂತಹ ಸರ್ಕಾರವೇ ಅಧ್ಯಕ್ಷೀಯ ಸರ್ಕಾರ". ಅಧಿಕಾರದ ಪ್ರತ್ಯೇಕಿಕರಣ ತತ್ವದ ಆಧಾರದ ಮೇಲೆ ರಚಿತವಾಗಿರುವ ಶಾಸಕಾಂಗ ಹಾಗೂ ಕಾರ್ಯಾಂಗಗಳೆರಡೂ ಸ್ವಾತಂತ್ರ್ಯವಾಗಿ ಕಾರ್ಯನಿರ್ವಹಿಸುವ ಪದ್ಧತಿಯೇ ಅಧ್ಯಕ್ಷೀಯ ಸರ್ಕಾರವಾಗಿದೆ. ಇಲ್ಲಿ ಕಾರ್ಯಾಂಗವು ಶಾಸಕಾಂಗಕ್ಕೆ ಜವಬ್ದಾರಿಯುತವಾಗಿರುವುದಿಲ್ಲ, ಆದಕಾರಣ ಅಧ್ಯಕ್ಷೀಯ ಸರ್ಕಾರವನ್ನು ಹೊಣೆರಹಿತ ಸರ್ಕಾರ, ನಿಗದಿತ ಕಾರ್ಯಾಂಗವೆಂತಲೂ ಕರೆಯಲಾಗುತ್ತದೆ. ಈ ಪದ್ಧತಿಯಲ್ಲಿ ರಾಷ್ಟ್ರದ

ಅಧ್ಯಕ್ಷನು ರಾಷ್ಟ್ರ ಮತ್ತು ಕಾರ್ಯಾಂಗ ಅಥವಾ ಸರ್ಕಾರಗಳೆರಡರ ಮುಖ್ಯಸ್ಥನಾಗಿರುತ್ತಾನೆ. ಉದಾಹರಣೆಗೆ: ಅಮೇರಿಕಾ.

6. ಏಕಾತ್ಮಕ ಸರ್ಕಾರ:

ಫೈನರ್ ಪ್ರಕಾರ "ಒಂದೇ ಕೇಂದ್ರ ಸರ್ಕಾರದಲ್ಲಿ ಎಲ್ಲಾ ಅಧಿಕಾರವನ್ನು ಕೇಂದ್ರೀಕರಿಸುವುದರ ಮೂಲಕ ಸಮಗ್ರ ರಾಷ್ಟ್ರದ ಆಡಳಿತವನ್ನು ನಡೆಸುವ ವ್ಯವಸ್ಥೆಯೇ ಏಕಾತ್ಮಕ ಸರ್ಕಾರ". ಡೈಸಿಯವರ ಪ್ರಕಾರ "ಕೇಂದ್ರ ಶಾಸಕಾಂಗವೇ ಪರಮಾಧಿಕಾರ ಚಲಾಯಿಸುವ ಅಧಿಕಾರ ಹೊಂದಿರುವುದೇ ಏಕಾತ್ಮಕ ಸರ್ಕಾರ". ಈ ಪದ್ಧತಿಯಲ್ಲಿ ಇಡೀ ರಾಷ್ಟ್ರವೇ ಕೇಂದ್ರ ಸರ್ಕಾರದ ಅಧೀನದಲ್ಲಿದ್ದು, ಪರಮಾಧಿಕಾರವನ್ನು ಹೊಂದಿರುತ್ತದೆ. ಇಲ್ಲಿ ಅಧಿಕಾರವು ಸಾಂವಿಧಾನಿಕ ವಿಭಜನೆ ಮತ್ತು ಹಂಚಿಕೆಗೆ ಒಳಪಟ್ಟಿರುವುದಿಲ್ಲ. ಸರ್ಕಾರವು ಆಡಳಿತದ ಅನುಕೂಲಕ್ಕಾಗಿ ಪ್ರಾಂತ್ಯಮಟ್ಟದ ಸರ್ಕಾರವನ್ನು ರಚಿಸಿದ್ದರೂ ಅಧಿಕಾರವೆಲ್ಲವೂ ಕೇಂದ್ರದ ನಿಯಂತ್ರಣಕ್ಕೆ ಒಳಪಟ್ಟಿರುತ್ತದೆ. ಉದಾಹರಣೆಗೆ: ಇಂಗ್ಲೆಂಡ್, ಜಪಾನ್.

7. ಸಂಯುಕ್ತ ಸರ್ಕಾರ:

ಕೆ. ಸಿ. ವ್ಹೀರ್ ರವರ ಪ್ರಕಾರ: 'ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಅಧಿಕಾರವನ್ನು ವಿಭಜಿಸಿ, ಅವುಗಳು ಸ್ವತಂತ್ರವಾಗಿ ಮತ್ತು ಸಹಕಾರದಿಂದ ಕಾರ್ಯನಿರ್ವಹಿಸಲು ಅವಕಾಶವಿರುವ ವ್ಯವಸ್ಥೆಯೇ ಸಂಯುಕ್ತ ಸರ್ಕಾರ.' ಸಂವಿಧಾನಕ್ಕನುಸಾರವಾಗಿ ಸರ್ಕಾರದ ಅಧಿಕಾರಗಳು ಕೇಂದ್ರ ಮತ್ತು ರಾಜ್ಯಗಳ ನಡುವೆ ಹಂಚಿಕೆಯಾಗಿರುವ ವ್ಯವಸ್ಥೆಯೇ ಸಂಯುಕ್ತ ಸರ್ಕಾರ. ಈ ಪದ್ಧತಿಯಲ್ಲಿ ವಿವಿಧ ರಾಜ್ಯಗಳು ಒಡಂಬಡಿಕೆಯ ಮೂಲಕ ಒಂದುಗೂಡಿ ರಾಷ್ಟ್ರ ಸ್ಥಾಪಿಸಿಕೊಂಡಿರುವ ಕಾರಣ ಕೇಂದ್ರ ಮತ್ತು ರಾಜ್ಯಗಳು ತಮ್ಮ ತಮ್ಮ ಅಧಿಕಾರ ವ್ಯಾಪ್ತಿಯಲ್ಲಿ ಸ್ವತಂತ್ರವಾಗಿರುತ್ತವೆ. ಸಂವಿಧಾನವು ಸರ್ವಶ್ರೇಷ್ಠವಾದ ಸ್ಥಾನವನ್ನು ಈ ಪದ್ಧತಿಯಲ್ಲಿ ಹೊಂದಿರುತ್ತದೆ. ಉದಾಹರಣೆಗೆ: ಅಮೇರಿಕಾ, ಆಸ್ಟ್ರೇಲಿಯಾ.

ವಿಶ್ವದಲ್ಲೇ ಸರ್ಕಾರವು ಇಂದು ಪ್ರಮುಖವಾದ ಪಾತ್ರವನ್ನು ನಿರ್ವಹಿಸುತ್ತಿದೆ. ಸರ್ಕಾರವಿಲ್ಲದೆ ರಾಜ್ಯದ ಆಶೋತ್ತರಗಳನ್ನು ಜಾರಿಗೊಳಿಸಲು ಹಾಗೂ ಗುರಿಗಳನ್ನು ಈಡೇರಿಸಲು ಸಾಧ್ಯವಿಲ್ಲ. ಪ್ರತಿಯೊಂದು ಸರ್ಕಾರವು ಶಾಸನಗಳನ್ನು ರಚಿಸಿವೆ, ಕಾನೂನು ವ್ಯವಸ್ಥೆಯನ್ನು ಕಾಪಾಡಲು, ನ್ಯಾಯ ಒದಗಿಸುವ, ಸಾರ್ವಜನಿಕ ಕಲ್ಯಾಣವನ್ನು ಸಾಧಿಸುವ ಕಾರ್ಯಗಳನ್ನು ಮಾಡುತ್ತಿದೆ.

ಅಭ್ಯಾಸ

I. ಒಂದು ವಾಕ್ಯದಲ್ಲಿ ಉತ್ತರಿಸಿ:

1. ಸರ್ಕಾರ ಎಂದರೇನು?
2. ಸರ್ಕಾರ ಎಂಬ ಪದವು ಯಾವ ಮೂಲ ಪದದಿಂದ ಬಂದಿದೆ?
3. ಪ್ರಜಾಪ್ರಭುತ್ವದ ಎರಡು ಬಗೆಗಳನ್ನು ಹೆಸರಿಸಿ?
4. ಸಂಯುಕ್ತ ಸರ್ಕಾರ ಎಂದರೇನು?
5. ಅಧ್ಯಕ್ಷೀಯ ಮಾದರಿಯ ಸರ್ಕಾರಕ್ಕೆ ಎರಡು ಉದಾಹರಣೆ ಕೊಡಿ?

II. ಬಿಟ್ಟ ಸ್ಥಳದಲ್ಲಿ ಸೂಕ್ತ ಪದವನ್ನು ತುಂಬಿರಿ;

1. ಸರ್ಕಾರವು ________ ಮೂಲಾಂಶವಾಗಿದೆ.
2. ಗುಬೆರ್ನಾಕುಲಂ ಪದದ ಅರ್ಥ ________ .
3. ಪ್ರಜೆಗಳಿಂದ, ಪ್ರಜೆಗಳಿಗಾಗಿ, ಪ್ರಜೆಗಳಿಗೋಸ್ಕರ ಇರುವ ಸರ್ಕಾರವೇ ________ .
4. ಪ್ರಜೆಗಳ ಯೋಗಕ್ಷೇಮದಲ್ಲಿಯೇ ರಾಜನ ಯೋಗಕ್ಷೇಮವಿದೆ ಎಂದು ಹೇಳಿದವರು ________
5. ವಿಶ್ವದ ಬೃಹತ್ ಪ್ರಜಾಪ್ರಭುತ್ವ ರಾಷ್ಟ್ರ ________ .

III. ಎರಡು ಅಥವಾ ಮೂರು ವಾಕ್ಯಗಳಲ್ಲಿ ಉತ್ತರಿಸಿ:

1. ಸರ್ಕಾರದ ಎರಡು ವ್ಯಾಖ್ಯೆ ನೀಡಿ.
2. ಸರ್ಕಾರದ ವಿಧಗಳನ್ನು ಹೆಸರಿಸಿ.
3. ರಾಜಪ್ರಭುತ್ವ ಎಂದರೇನು?
4. ಪ್ರಜಾಪ್ರಭುತ್ವದ ಎರಡು ವ್ಯಾಖ್ಯೆಗಳನ್ನು ನೀಡಿ.
5. ಕೇಂದ್ರೀಕೃತ ಸರ್ಕಾರ ಎಂದರೇನು?

IV. ನಾಲ್ಕು ಅಥವಾ ಐದು ವಾಕ್ಯಗಳಲ್ಲಿ ಉತ್ತರಿಸಿ:

1. ಸಂಸದೀಯ ಸರ್ಕಾರವನ್ನು ಉದಾಹರಣೆಯೊಂದಿಗೆ ವಿವರಿಸಿ.
2. ಏಕಾತ್ಮಕ ಸರ್ಕಾರವನ್ನು ವಿವರಿಸಿ.
3. ನಿರಂಕುಶ ಸರ್ಕಾರವನ್ನು ಉದಾಹರಣೆಯೊಂದಿಗೆ ವಿವರಿಸಿ.

V. ಎಂಟು ಅಥವಾ ಹತ್ತು ವಾಕ್ಯಗಳಲ್ಲಿ ಉತ್ತರಿಸಿ:

1. ಸರ್ಕಾರದ ವಿಧಗಳನ್ನು ವಿವರಿಸಿ.
2. ಸರ್ಕಾರದ ಮಹತ್ವವನ್ನು ಚರ್ಚಿಸಿ.

ಸಲಹಾತ್ಮಕ ಚಟುವಟಿಕೆಗಳು:

1. ಚುನಾವಣೆ ಮೂಲಕ ಶಾಲಾ ಮಂತ್ರಿಮಂಡಲವನ್ನು ರಚಿಸಿ.
2. ಗ್ರಾಮ ಪಂಚಾಯಿತಿ ಚುನಾವಣೆ ಕುರಿತು ಒಂದು ಪ್ರಬಂಧ ಬರೆಯಿರಿ.

ಅಧ್ಯಾಯ- 6 ಶಾಸಕಾಂಗ (Legislature)

ಕಲಿಕಾ ಉದ್ದೇಶಗಳು:

1. ಶಾಸಕಾಂಗದ ಅರ್ಥ ಮತ್ತು ಮಹತ್ವವನ್ನು ಅರಿಯುವುದು.
2. ಶಾಸಕಾಂಗದ ರಚನೆಯ ಬಗ್ಗೆ ತಿಳಿಯುವುದು.
3. ಶಾಸಕಾಂಗದ ಅಧಿಕಾರ ಮತ್ತು ಕಾರ್ಯಗಳನ್ನು ಮನನ ಮಾಡಿಕೊಳ್ಳುವುದು.
4. ಶಾಸಕಾಂಗದ ವಿಧಗಳನ್ನು ಗುರುತಿಸುವುದು.

ಶಾಸಕಾಂಗವು ರಾಷ್ಟ್ರದ ಸಮಗ್ರ ಹಿತಾಸಕ್ತಿಯ ಆಲೋಚನಾ ಸಭೆಯಾಗಿದೆ. **ಎಡ್ಮಂಡ್ ಬರ್ಕ್**

ಶಾಸಕಾಂಗವು ರಾಷ್ಟ್ರಜೀವನದ ರನ್ನಗನ್ನಡಿ; ಪ್ರಜಾಪ್ರಭುತ್ವದ ಆತ್ಮ; ಕಾರ್ಯಾಂಗದ ಜೀವಸೂತ್ರ; ನ್ಯಾಯಾಂಗದ ಭುಜಬಲ. **ನಿಕಲೋ ಮೆಕೆವಲ್ಲಿ**

ಪೀಠಿಕೆ:

ಶಾಸಕಾಂಗವು ರಾಜ್ಯದ ಇಚ್ಛೆಯನ್ನು ರೂಪಿಸುವ ಮತ್ತು ವ್ಯಕ್ತಪಡಿಸುವ ಸರ್ಕಾರದ ಮೊದಲನೆಯ ಅಂಗವಾಗಿದೆ. ಇದು ಕಾರ್ಯಾಂಗ ಮತ್ತು ನ್ಯಾಯಾಂಗದ ಕಾರ್ಯನಿರ್ವಹಣೆಗೂ ಆಧಾರವಾಗಿದೆ. ಆದುದರಿಂದ ಶಾಸಕಾಂಗವನ್ನು ಸಾರ್ವಜನಿಕ ಅಭಿಪ್ರಾಯದ ‘ಬ್ಯಾರೋ ಮೀಟರ್’ ಎಂದು ಕರೆಯಲಾಗಿದೆ.

6.1 ಅರ್ಥ:

ಶಾಸಕಾಂಗ ಅಥವಾ ಪಾರ್ಲಿಮೆಂಟ್ ಎಂಬ ಪದವು ಫ್ರೆಂಚ್ ಭಾಷೆಯ ‘parlor’ ಮತ್ತು ಲಾಟಿನ್ ಭಾಷೆಯ ‘Parliamentm’ ಎಂಬ ಶಬ್ಧಗಳಿಂದ ಬಂದಿದೆ. ಮಾತನಾಡು, ಚರ್ಚಿಸು ಎಂಬ ಅರ್ಥವನ್ನು ಇದು ಸೂಚಿಸುತ್ತದೆ. ಶಾಸಕಾಂಗವು ‘ಚರ್ಚಿಸಲು’ ಒಂದುಗೂಡಿಸುವ ಜನರ ಗುಂಪು.

ಒಂದು ದೇಶದ ಪ್ರಜಾಪ್ರತಿನಿಧಿಗಳು ಒಂದೆಡೆ ಸೇರಿ ಜನರ ಅಭಿಪ್ರಾಯವನ್ನು ತಿಳಿಸುವ ವೇದಿಕೆಯಾಗಿರುವುದರಿಂದ ಶಾಸಕಾಂಗವನ್ನು ‘ಸಾರ್ವಜನಿಕ ಅಭಿಪ್ರಾಯದ ಕನ್ನಡಿ’ ಎಂದು ಕರೆಯಲಾಗಿದೆ.

ಶಾಸಕಾಂಗವು ಒಂದು ರಾಷ್ಟ್ರಕ್ಕೆ ಅಗತ್ಯವಾದ ಹೊಸ ಕಾನೂನುಗಳನ್ನು ರೂಪಿಸುವ ಮತ್ತು ಅಸ್ತಿತ್ವದಲ್ಲಿರುವ ಕಾನೂನುಗಳನ್ನು ಮಾರ್ಪಾಡು ಮಾಡುವ ಹಾಗೂ ಅನುಪಯೋಗಿ

ಕಾನೂನುಗಳನ್ನು ರದ್ದುಪಡಿಸುವ ಪರಮ ಅಧಿಕಾರವನ್ನು ಹೊಂದಿದೆ. ಆದುದರಿಂದ ಶಾಸಕಾಂಗವನ್ನು 'ಒಂದು ರಾಷ್ಟ್ರದ ಕಾನೂನುಗಳನ್ನು ರೂಪಿಸುವ ಕಾರ್ಖಾನೆ' ಎಂತಲೂ ಕರೆಯಲಾಗಿದೆ.

ವಿವಿಧ ರಾಷ್ಟ್ರಗಳ ಶಾಸಕಾಂಗದ ಹೆಸರುಗಳು

1. ಭಾರತ- ಸಂಸತ್ತು (Parliament)
2. ಮಾಲ್ಡಿವ್ಸ್- ಮಜ್ಲೀಸ್ (Majlis)
3. ಚೀನಾ- ಯುವಾನ್ (Yuan)
4. ಜರ್ಮನಿ- ಬುಂಡೇಸ್ಟಾಗ್ (Bundestag)
5. ಇಸ್ರೇಲ್- ನೆಸ್ಸೆಟ್ (Knesset)
6. ಫ್ರಾನ್ಸ್- ನ್ಯಾಷನಲ್ ಅಸೆಂಬ್ಲಿ (National Assembly)
7. ಡೆನ್ಮಾರ್ಕ್- ಫೋಕೇಟಿಂಗ್(Folketing)
8. ಅಫ್ಘಾನಿಸ್ತಾನ್- ಶೋರ (Shora)

6.2: ಶಾಸಕಾಂಗದ ಪ್ರಾಮುಖ್ಯತೆ:

ಸರ್ಕಾರದ ಮೂರು ಅಂಗಗಳಲ್ಲಿ ಶಾಸಕಾಂಗವು ಮೊದನೆಯ ಅಂಗ. ಜನಪ್ರತಿನಿಧಿಗಳನ್ನು ಹೊಂದಿರುವ ಶಾಸಕಾಂಗವು ರಾಷ್ಟ್ರದ ಸಾರ್ವಭೌಮತ್ವದ ಸಂಕೇತವಾಗಿದೆ.

ಶಾಸಕಾಂಗವು ತನ್ನ ಕಾನೂನುಗಳ ಮೂಲಕ ಪ್ರಜೆಗಳ ಇಚ್ಚೆಯನ್ನು ವ್ಯಕ್ತಪಡಿಸುವ ಪ್ರಭಾವಿ ಮಾಧ್ಯಮವಾಗಿದೆ. ಶಾಸಕಾಂಗದ ಪ್ರಾಮುಖ್ಯತೆಯನ್ನು ಈ ಕೆಳಕಂಡ ಅಂಶಗಳಿಂದ ಅರಿಯಬಹುದು.

1. **ಕಾನೂನುಗಳ ರಚನೆ:**

ಶಾಸಕಾಂಗವು ಸಂವಿಧಾನ ಬದ್ಧವಾಗಿ ರಾಜ್ಯಕ್ಕೆ ಅಗತ್ಯವಿರುವ ಕಾನೂನುಗಳನ್ನು ರಚನೆ ಮಾಡುವ ಪರಮಾಧಿಕಾರವನ್ನು ಹೊಂದಿದೆ.

2. **ಸರ್ಕಾರದ ರಚನೆ:**

ಸಾರ್ವತ್ರಿಕ ಚುನಾವಣೆಗಳಲ್ಲಿ ಜನಾದೇಶವನ್ನು ಪಡೆದ ಪಕ್ಷವು ಶಾಸನ ಸಭೆಗಳಲ್ಲಿ ತನ್ನ ಬಹುಮತವನ್ನು ಸಾಬೀತು ಪಡಿಸುವ ಮೂಲಕ ಸರ್ಕಾರವನ್ನು ರಚನೆ ಮಾಡುತ್ತದೆ.

3. **ಸಂವಿಧಾನ ತಿದ್ದುಪಡಿ:**

ಶಾಸಕಾಂಗವು ಸಂವಿಧಾನದ ವಿಧಿಗಳನ್ನು ತಿದ್ದುಪಡಿ ಮಾಡುವುದು. ಹೊಸ ಶಾಸನಗಳನ್ನು ರಚಿಸುವುದು, ಹೊಸ ವಿಧಿಗಳನ್ನು ಸೇರಿಸುವುದು ಮುಂತಾದ ಕ್ರಮಗಳನ್ನು ಕೈಗೊಳ್ಳುತ್ತದೆ.

4. **ಸಾರ್ವಜನಿಕ ಕುಂದುಕೊರತೆಗಳ ನಿವಾರಣೆ:**

ಶಾಸಕಾಂಗವು ಪ್ರಜೆಗಳ ಕುಂದುಕೊರತೆಗಳನ್ನು ಬಹಿರಂಗವಾಗಿ ಚರ್ಚಿಸುವ ಒಂದು ಪ್ರಮುಖ ವೇದಿಕೆಯಾಗಿದೆ. ಶಾಸಕಾಂಗದ ಸದಸ್ಯರು ಸಾರ್ವಜನಿಕ ಸಮಸ್ಯೆಗಳ ಬಗ್ಗೆ ಸದನದ ಗಮನವನ್ನು ಸೆಳೆಯುತ್ತಾರೆ.

5. **ರಾಷ್ಟ್ರಜೀವನದ ಕನ್ನಡಿ:**

ಶಾಸಕಾಂಗವು ಜನತೆಯ ಆಶೋತ್ತರಗಳನ್ನು ಈಡೇರಿಸಲು ಬೇಕಾದ ಸಾರ್ವಜನಿಕ ನೀತಿ ನಿಯಮಗಳನ್ನು ರೂಪಿಸುವುದರ ಮೂಲಕ ರಾಷ್ಟ್ರದ ಸಮಗ್ರ ಪ್ರಗತಿಯನ್ನು ಪ್ರತಿಬಿಂಬಿಸುತ್ತದೆ.

ಒಟ್ಟಿನಲ್ಲಿ ಶಾಸಕಾಂಗವು ಸರ್ಕಾರದ ಪ್ರಮುಖ ಅಂಗವಾಗಿದೆ. ಅಲ್ಲದೆ ಕಾರ್ಯಾಂಗ ಮತ್ತು ನ್ಯಾಯಾಂಗದಂತೆಯೇ ರಾಷ್ಟ್ರದ ಉನ್ನತಿಗಾಗಿ ಕಾರ್ಯನಿರ್ವಹಿಸುತ್ತದೆ.

6.3: ಶಾಸಕಾಂಗದ ರಚನೆ:

ಸರ್ಕಾರದ ವ್ಯವಸ್ಥೆಯಲ್ಲಿ ಶಾಸಕಾಂಗಕ್ಕೆ ಪ್ರಮುಖ ಸ್ಥಾನವಿದೆ. ಶಾಸಕಾಂಗದ ರಚನೆಯು ಎರಡು ಪದ್ಧತಿಗಳನ್ನು ಹೊಂದಿದೆ.

1. ಏಕಸದನ ಶಾಸಕಾಂಗ– ಒಂದೇ ಸದನವಿರುತ್ತದೆ.

2. ದ್ವಿಸದನ ಶಾಸಕಾಂಗ– ಎರಡು ಸದನಗಳಿರುತ್ತವೆ.

ದ್ವಿಸದನ ಶಾಸಕಾಂಗ ವ್ಯವಸ್ಥೆಯಲ್ಲಿ ಒಂದನ್ನು ಮೇಲ್ಮನೆ (Upper House) ಎಂತಲೂ ಮತ್ತೊಂದನ್ನು ಕೆಳಮನೆ (Lower House) ಎಂದೂ ಕರೆಯಲಾಗುತ್ತದೆ.

ಅಮೇರಿಕಾ ದೇಶದ ಶಾಸಕಾಂಗವು ಕಾಂಗ್ರೆಸ್‌ನ ಮೇಲ್ಮನೆ ಸೆನೆಟ್ ಜಗತ್ತಿನಲ್ಲಿಯೇ ಹೆಚ್ಚು ಅಧಿಕಾರವನ್ನು ಹೊಂದಿದೆ. ಆದರೆ ಉಳಿದ ದೇಶಗಳ ಮೇಲ್ಮನೆಗಳು ಕೆಳಮನೆಗಿಂತ ಕಡಿಮೆ ಅಧಿಕಾರವನ್ನು ಹೊಂದಿವೆ.

ಬ್ರಿಟನ್ ಪಾರ್ಲಿಮೆಂಟಿನ ಮೇಲ್ಮನೆಯಾದ ಶ್ರೀಮಂತ ಸಭೆಯಲ್ಲಿ ಸದಸ್ಯರ ಸಂಖ್ಯೆ ಕೆಳಮನೆಯಾದ ಸಾಮಾನ್ಯ ಸಭೆಗಿಂತ ಹೆಚ್ಚಿಗೆ ಇದೆ. ಸಾಮಾನ್ಯವಾಗಿ ಎಲ್ಲಾ ದೇಶಗಳಲ್ಲಿಯೂ ಕೆಳಮನೆಯ ಸದಸ್ಯರ ಸಂಖ್ಯೆ ಜನಸಂಖ್ಯೆಯ ಪ್ರಮಾಣಕ್ಕೆ ಅನುಗುಣವಾಗಿರುತ್ತದೆ.

ಮೇಲ್ಮನೆ ಸದಸ್ಯರ ಆಯ್ಕೆ, ಜಗತ್ತಿನ ವಿವಿಧ ರಾಷ್ಟ್ರಗಳ ಮೇಲ್ಮನೆಯ ರಚನಾ ವಿಧಾನಗಳಲ್ಲಿ ಏಕರೂಪತೆ ಇಲ್ಲ. ಆದರೂ ಕೆಳಕಂಡ ನಾಲ್ಕು ವಿಧಗಳು ಪ್ರಚಲಿತದಲ್ಲಿವೆ.

ಅವುಗಳೆಂದರೆ:

ಎ. ಅನುವಂಶಿಕ ತತ್ವ:

ಮೇಲ್ಮನೆಯ ಸದಸ್ಯರನ್ನು ಅನುವಂಶಿಕ ವಿಧಾನದ ಮೂಲಕ ಆಯ್ಕೆ ಮಾಡುವ ಪದ್ಧತಿ ಪ್ರಚಲಿತದಲ್ಲಿದೆ. ಇಂಗ್ಲೆಂಡಿನಲ್ಲಿ ಮೇಲ್ಮನೆ ಸದಸ್ಯರು ಈ ತತ್ವದ ಆಧಾರದ ಮೇಲೆ ಶ್ರೀಮಂತ ಸಭೆಯ ಸದಸ್ಯತ್ವ ಪಡೆಯುತ್ತಾರೆ. ಇದು ಪ್ರಜಾಪ್ರಭುತ್ವಕ್ಕೆ ವಿರುದ್ಧವಾದುದಾಗಿದೆ. ಆದರೂ ಪ್ರಜಾಪ್ರಭುತ್ವ ಮತ್ತು ಅನುವಂಶಿಕ ಪದ್ಧತಿಗಳೆರಡೂ ಒಟ್ಟಿಗೆ ಹೋಗುತ್ತಿರುವುದು ಅಲ್ಲಿನ ವೈಶಿಷ್ಟವಾಗಿದೆ.

ಬಿ. ನೇರ ಆಯ್ಕೆ:

ಮೇಲ್ಮನೆಯ ಸದಸ್ಯರನ್ನು ನೇರವಾಗಿ ಪ್ರಜೆಗಳು ಆಯ್ಕೆ ಮಾಡುವ ಪದ್ಧತಿಯೂ ಪ್ರಚಲಿತದಲ್ಲಿದೆ. ಅಮೇರಿಕಾದ ಸನೆಟ್‌ನ ಸದಸ್ಯರು ನೇರವಾಗಿ ಜನರಿಂದ ಚುನಾಯಿತರಾಗುತ್ತಾರೆ.

ಸಿ. ಪರೋಕ್ಷ ಆಯ್ಕೆ:

ಮೇಲ್ಮನೆಯ ಸದಸ್ಯರುಗಳನ್ನು ಪರೋಕ್ಷವಾಗಿ ಆಯ್ಕೆ ಮಾಡಲಾಗುತ್ತದೆ. ಫ್ರಾನ್ಸ್ ದೇಶದ ಶಾಸಕಾಂಗದ ನ್ಯಾಷನಲ್ ಅಸೆಂಬ್ಲಿಯ ಮೇಲ್ಮನೆ ಸನೆಟ್ ಸಭೆಯ ಸದಸ್ಯರನ್ನು ಜನರಿಂದ ಆಯ್ಕೆಯಾದ ಜನಪ್ರತಿನಿಧಿಗಳು ಆರಿಸುತ್ತಾರೆ. ಅದೇ ರೀತಿ ಭಾರತದ ಸಂಸತ್ತಿನ ಮೇಲ್ಮನೆ ರಾಜ್ಯಸಭೆಗೆ 238 ಸದಸ್ಯರನ್ನು ಪರೋಕ್ಷವಾಗಿ ಆಯ್ಕೆ ಮಾಡುತ್ತದೆ. ಮೇಲ್ಮನೆಯು ಭಾರತದಲ್ಲಿ ಒಂದು ಶಾಶ್ವತ ಸದನವಾಗಿದೆ. ಒಮ್ಮೆ ಚುನಾಯಿತರಾದ ಸದಸ್ಯರ ಅಧಿಕಾರಾವಧಿ 6 ವರ್ಷಗಳು. ಪ್ರತಿ 2 ವರ್ಷಕ್ಕೊಮ್ಮೆ 1\3 ರಷ್ಟು ಸದಸ್ಯರು ನಿವೃತ್ತರಾಗುತ್ತಾರೆ. ಅಮೆರಿಕಾದ ದೇಶದ ಮೇಲ್ಮನೆ ಸನೆಟ್‌ನ ಸದಸ್ಯರ ಅಧಿಕಾರಾವಧಿಯೂ ಸಹ 6 ವರ್ಷಗಳು.

ಡಿ. ನಾಮಕರಣ ತತ್ವ:

ಮೇಲ್ಮನೆಯ ಸದಸ್ಯರುಗಳನ್ನು ನಾಮಕರಣ ಮಾಡುವ ಪದ್ಧತಿಯು ಪ್ರಚಲಿತದಲ್ಲಿದೆ. ಭಾರತ ದೇಶದ ಸಂಸತ್ತಿನ ಮೇಲ್ಮನೆ ರಾಜ್ಯಸಭೆಗೆ ರಾಷ್ಟ್ರಾಧ್ಯಕ್ಷರು 12 ಮಂದಿ ಸದಸ್ಯರನ್ನು ಕಲೆ, ಸಾಹಿತ್ಯ, ವಿಜ್ಞಾನ, ಸಮಾಜಸೇವಾ ಕ್ಷೇತ್ರಗಳಲ್ಲಿ ಗಣನೀಯ ಸೇವೆ ಸಲ್ಲಿಸಿದವರನ್ನು ನಾಮಕರಣ ಮಾಡುತ್ತಾರೆ.

ಕೆಳಮನೆ ಸದಸ್ಯರ ಆಯ್ಕೆ:

ಸಾಮಾನ್ಯವಾಗಿ ಕೆಳಮನೆಯ ಸದಸ್ಯರನ್ನು ಎಲ್ಲಾ ರಾಷ್ಟ್ರಗಳಲ್ಲಿಯೂ ಸಾರ್ವತ್ರಿಕ ವಯಸ್ಕ ಮತದಾನ ಪದ್ಧತಿಯ ಮೂಲಕ ಆಯ್ಕೆ ಮಾಡಲಾಗುತ್ತದೆ. ಇಡೀ ದೇಶವನ್ನು ಜನಸಂಖ್ಯೆಯ ಆಧಾರದ ಮೇಲೆ ಅನೇಕ ಮತಕ್ಷೇತ್ರಗಳನ್ನಾಗಿ ವಿಭಜಿಸಲಾಗಿರುತ್ತದೆ. ಒಂದೊಂದು ಮತಕ್ಷೇತ್ರದಿಂದ ಒಬ್ಬೊಬ್ಬ ಸದಸ್ಯರನ್ನು ಚುನಾಯಿಸಲಾಗುತ್ತದೆ.

ಎಲ್ಲಾ ರಾಷ್ಟ್ರಗಳ ಸಂವಿಧಾನಗಳಲ್ಲೂ ಕೆಳಮನೆಗೆ ಸ್ಪರ್ಧಿಸುವವರಿಗೆ ಕೆಲವು ನಿರ್ದಿಷ್ಟ ಅರ್ಹತೆಗಳನ್ನು ನಿಗಧಿಪಡಿಸಲಾಗಿರುತ್ತದೆ. ಉದಾಹರಣೆಗೆ ಭಾರತದ ಲೋಕಸಭೆ ಮತ್ತು ಇಂಗ್ಲೆಂಡಿನ ಸಾಮಾನ್ಯ ಸಭೆಯ ಸದಸ್ಯತ್ವಕ್ಕೆ ಸ್ಪರ್ಧಿಸಲು ಬಯಸುವವರಿಗೆ 25 ವರ್ಷಗಳ ಕನಿಷ್ಠ ವಯೋಮಿತಿಯನ್ನು ನಿಗದಿಪಡಿಸಿದೆ.

ಎಲ್ಲಾ ರಾಷ್ಟ್ರಗಳಲ್ಲಿಯೂ ಕೆಳಮನೆಯ ಅಧಿಕಾರ ಅವಧಿಯನ್ನು ನಿಗಧಿಪಡಿಸಲಾಗಿರುತ್ತದೆ. ಬಹುತೇಕ ರಾಷ್ಟ್ರಗಳಲ್ಲಿ ಅವಧಿ ಮುಗಿಯುವುದಕ್ಕೆ ಮುನ್ನವೇ ಸಭೆಯನ್ನು ವಿಸರ್ಜಿಸಲು ಅವಕಾಶವಿದೆ. ಕೆಳಮನೆಗಳ ಅಧಿಕಾರಾವಧಿಯಲ್ಲಿ ದೇಶದಿಂದ ದೇಶಕ್ಕೆ ವ್ಯತ್ಯಾಸವಿದೆ. ಉದಾಹರಣೆಗೆ ಭಾರತ ಮತ್ತು ಇಂಗ್ಲೆಂಡಿನಲ್ಲಿ ಶಾಸಕಾಂಗದ ಕೆಳಮನೆಯ ಅಧಿಕಾರಾವಧಿ ಐದು ವರ್ಷ, ಅಮೇರಿಕಾದ ಕೆಳಮನೆಯಾದ ಪ್ರತಿನಿಧಿಸಭೆಯ ಅಧಿಕಾರಾವಧಿ ಎರಡು ವರ್ಷಗಳು. ಆದರೆ ಅದರ ಅವಧಿ ಮುಗಿಯುವ ಮುನ್ನ ವಿಸರ್ಜಿಸುವಂತಿಲ್ಲ. ಸ್ವಿಟ್ಜರ್ ಲ್ಯಾಂಡಿನ ನ್ಯಾಷನಲ್ ಅಸೆಂಬ್ಲಿಯ ಕೆಳಮನೆಯಾದ ನ್ಯಾಷನಲ್ ಕೌನ್ಸಿಲ್‌ನ ಅಧಿಕಾರಾವಧಿ ನಾಲ್ಕು ವರ್ಷಗಳು.

ಶಾಸಕಾಂಗದ ಸದಸ್ಯರುಗಳು ಸದಸ್ಯರಾಗಿ ಮುಂದುವರಿಯಲು ಇಷ್ಟವಿಲ್ಲದಿದ್ದರೆ ತಮ್ಮ ಸದಸ್ಯತ್ವಕ್ಕೆ ರಾಜೀನಾಮೆ ಸಲ್ಲಿಸುತ್ತಾರೆ. ಶಾಸಕಾಂಗದ ಸದಸ್ಯರು ಸರ್ಕಾರದಿಂದ ವೇತನ, ಪ್ರಯಾಣ ಭತ್ಯೆ, ವೈದ್ಯಕೀಯ ಭತ್ಯೆ, ದೂರಸಂಪರ್ಕದ ಭತ್ಯೆಮುಂತಾದ ಸೌಲಭ್ಯಗಳನ್ನು ಪಡೆಯುತ್ತಾರೆ.

ಶಾಸಕಾಂಗದಲ್ಲಿ ನಿರ್ಭೀತಿಯಿಂದ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸುವ ಮತ್ತು ಮತ ಚಲಾಯಿಸುವ ಅಧಿಕಾರವನ್ನು ಪಡೆದಿರುತ್ತಾರೆ. ಅಲ್ಲದೆ ಈ ವಿಷಯವನ್ನು ನ್ಯಾಯಾಲಯದಲ್ಲಿ ಪ್ರಶ್ನಿಸಲು ಅವಕಾಶವಿರುವುದಿಲ್ಲ. ಅಧಿವೇಶನವು ನಡೆಯುತ್ತಿರುವ ಸಂದರ್ಭಗಳಲ್ಲಿ ಸದಸ್ಯರನ್ನು ಬಂಧಿಸುವಂತಿಲ್ಲ.

6.4. ಶಾಸಕಾಂಗದ ವಿಧಗಳು:

ಶಾಸಕಾಂಗವನ್ನು ಎರಡು ವಿಧಗಳಾಗಿ ವರ್ಗೀಕರಿಸಬಹುದು. ಅವುಗಳೆಂದರೆ:

1. ಏಕಸದನ ಶಾಸಕಾಂಗ– (UNICAMERALISM)
2. ದ್ವಿಸದನ ಶಾಸಕಾಂಗ– (BICAMERALIS)

1. ಏಕಸದನ ಶಾಸಕಾಂಗ

ಶಾಸಕಾಂಗವೊಂದು ಏಕೈಕ ಸದನವನ್ನು ಹೊಂದಿರುವುದೇ ಏಕಸದನ ಶಾಸಕಾಂಗ ಇಲ್ಲಿ ಜನತೆಯ ಇಚ್ಛೆಯು ಏಕಸದನನದಲ್ಲಿ ಮಾತ್ರ ವ್ಯಕ್ತವಾಗುತ್ತದೆ.

ಏಕಸದನ ಶಾಸಕಾಂಗವು ಚರ್ಚೆಗಳು ಅನಾವಶ್ಯಕವಾಗಿ ಪುನರಾವರ್ತನೆಯಾಗುವುದನ್ನು ತಪ್ಪಿಸುತ್ತದೆ. ಅಲ್ಲದೆ ದೇಶದ ಹಿತದೃಷ್ಟಿಯಿಂದ ಮಿತವ್ಯಯವನ್ನು ಕಾಪಾಡುತ್ತದೆ.

ಏಕಸದನವನ್ನು ರಾಜ್ಯಶಾಸ್ತ್ರಜ್ಞರಾದ ಬೆಂಥ್ಯಾಮ್, ಪೊಲಾಸ್ಕಿ, ಬೆಂಜಮಿನ್ ಫ್ರಾಂಕ್ಲಿನ್‌ರವರು ಎರಡು ಸಭೆಗಳಿರುವ ಶಾಸಕಾಂಗವನ್ನು ಕುದುರೆಗಾಡಿಗೆ ಹೋಲಿಸಿದ್ದಾರೆ. ಆ ಗಾಡಿಯ ಹಿಂದಕ್ಕೊಂದು, ಮುಂದಕ್ಕೊಂದು ಕುದುರೆಯನ್ನು ಕಟ್ಟಿ ಗಾಡಿಯನ್ನು ಓಡಿಸುವುದರಿಂದ ಅವು ಪರಸ್ಪರ ವಿರುದ್ಧ ದಿಕ್ಕಿನತ್ತ ಓಡುವಂತೆಯೇ, ಎರಡು ಸಭೆಗಳು ಪರಸ್ಪರ ವಿರುದ್ಧವಾಗಿ ಕಾರ್ಯ ನಿರ್ವಹಿಸುವುದರಿಂದ ಶಾಸನದ ಏಕತೆಯನ್ನು ಪ್ರತಿಬಿಂಬಿಸುವುದಿಲ್ಲವಾದ್ದರಿಂದ ಏಕಸದನ ಶಾಸಕಾಂಗವೇ ಉತ್ತಮವಾದುದು" ಎಂದಿದ್ದಾರೆ.

ಎಚ್. ಜೆ. ಲಾಸ್ಕಿಯವರು "ಅತ್ಯಂತ ಹೆಚ್ಚಿನ ಅಧಿಕಾರವನ್ನು ಹೊಂದಿರುವ ಏಕಸದನವನ್ನುಳ್ಳ ಶಾಸಕಾಂಗ. ಆಧುನಿಕ ರಾಜ್ಯದ ಅಗತ್ಯತೆಗಳನ್ನು ಪೂರೈಸುವ ಸಾಮರ್ಥ್ಯವನ್ನು ಹೊಂದಿದೆ" ಎಂದಿದ್ದಾರೆ.

ಈ ಮೇಲ್ಕಂಡ ವಾದಗಳು ಏಕಸದನ ಶಾಸಕಾಂಗದ ಅಗತ್ಯತೆಯನ್ನು ಪುಷ್ಟೀಕರಿಸುತ್ತವೆ.

ಏಕಸದನವನ್ನು ಹೊಂದಿರುವ ಪ್ರಮುಖ ದೇಶಗಳೆಂದರೆ ಗ್ರೀಸ್, ಫಿನ್‌ಲ್ಯಾಂಡ್, ಸ್ವೀಡನ್, ಡೆನ್ಮಾರ್ಕ್, ಯುಗೋಸ್ಲಾವಿಯ, ಪೋರ್ಚುಗಲ್, ನ್ಯೂಜಿಲ್ಯಾಂಡ್ ಮುಂತಾದವುಗಳು.

2. ದ್ವಿಸದನ ಶಾಸಕಾಂಗ

ಎರಡು ಸದನಗಳನ್ನು ಹೊಂದಿರುವ ಶಾಸಕಾಂಗವೇ ದ್ವಿಸದನ ಶಾಸಕಾಂಗ ಜನತೆಯ ಸಂಕಲ್ಪವನ್ನು ಎರಡು ಸದನಗಳಲ್ಲಿ ಚರ್ಚಿಸಿ ಕಾನೂನನ್ನು ರೂಪಿಸಲಾಗುತ್ತದೆ.

ದ್ವಿಸದನ ಶಾಸಕಾಂಗ ಪದ್ಧತಿಯು ಐತಿಹಾಸಿಕ ಆಕಸ್ಮಿಕತೆಯಿಂದ ಇಂಗ್ಲೆಂಡಿನಲ್ಲಿ ಜನ್ಮ ತಾಳಿತು. ಇಂದು ವಿಶ್ವದ ಬಹುತೇಕ ರಾಷ್ಟ್ರಗಳು ಈ ಪದ್ಧತಿಯನ್ನು ಅಳವಡಿಸಿಕೊಂಡಿವೆ. ಉದಾಹರಣೆಗೆ ಭಾರತದ ಶಾಸಕಾಂಗವಾದ 'ಸಂಸತ್ತು' ದ್ವಿಸದನ ಶಾಸಕಾಂಗವಾಗಿದ್ದು ಕೆಳಮನೆಯನ್ನು 'ಲೋಕಸಭೆ' ಎಂದು ಮೇಲ್ಮನೆಯನ್ನು ರಾಜ್ಯಸಭೆ ಎಂದು ಕರೆಯಲಾಗಿದೆ. ಅದೇ ರೀತಿ ಇಂಗ್ಲೆಂಡಿನ ಶಾಸಕಾಂಗವಾದ 'ಪಾರ್ಲಿಮೆಂಟ್' ದ್ವಿಸದನ ಶಾಸಕಾಂಗವಾಗಿದ್ದು ಕೆಳಮನೆಯನ್ನು 'ಸಾಮಾನ್ಯರಸಭೆ' ಎಂದು ಮೇಲ್ಮನೆಯನ್ನು 'ಶ್ರೀಮಂತ ಸಭೆ' ಎಂದು ಕರೆಯಲಾಗಿದೆ.

ದ್ವಿಸದನ ಶಾಸಕಾಂಗ ಪದ್ಧತಿಯನ್ನು ಅಮೇರಿಕಾದ ಪ್ರಥಮ ಅಧ್ಯಕ್ಷರಾಗಿದ್ದ ಜಾರ್ಜ್ ವಾಷಿಂಗ್‌ಟನ್ ಮತ್ತು ರಾಜ್ಯಶಾಸ್ತ್ರಜ್ಞರಾದ ಲೆಖೀ ಜೆ. ಎಸ್. ಮಿಲ್, ಹೆನ್ರಿಮೈನ್, ಲಾರ್ಡ್ ಆಕ್‌ಟನ್, ಲಾರ್ಡ್ ಬ್ರೈಸ್, ಬ್ಲಂಟ್‌ಷ್ಲಿ ಮುಂತಾದವರು ಬಲವಾಗಿ ಸಮರ್ಥಿಸಿದ್ದಾರೆ.

ದ್ವಿಸದನ ಶಾಸಕಾಂಗ ಪದ್ಧತಿಯು ಆತುರಾತುರದ ಕಾನೂನುಗಳನ್ನು ತಡೆಗಟ್ಟಿ ಜನರ ಹಿತಾಸಕ್ತಿಗಳನ್ನು ಈಡೇರಿಸಲು ಅವಕಾಶ ನೀಡುತ್ತದೆ.

ಜೆ. ಎಸ್. ಮಿಲ್ ರವರು: "ಏಕಸದನದ ನಿರಂಕುಶತೆಯನ್ನು ಮತ್ತು ಅವಿಭಾಜ್ಯ ಅಧಿಕಾರದಿಂದ ಉಂಟಾಗುವ ಭ್ರಷ್ಟಾಚಾರದ ಪ್ರಭಾವವನ್ನು ತಡೆಗಟ್ಟುವುದಕ್ಕೆ ದ್ವಿಸದನ ಶಾಸಕಾಂಗವೇ ಸೂಕ್ತ" ಎಂದಿದ್ದಾರೆ.

ಬಾಗೆಹಾಟ್ ರವರು: "ಸಾವಧಾನವಾಗಿ ಶಾಸನ ಮಸೂದೆಗಳನ್ನು ಪುನಃ ಪರಿಶೀಲಿಸುವುದಕ್ಕೆ ದ್ವಿತೀಯ ಸದನ ಯೋಗ್ಯವಾಗಿದೆ" ಎಂದಿದ್ದಾರೆ.

ಮ್ಯಾರಿಯಟ್ ರವರು: "ಎರಡನೆ ಸಭೆಯು ಸಂಯುಕ್ತ ವ್ಯವಸ್ಥೆಯನ್ನು ಪರಿಣಾಮಕಾರಿಯಾಗಿ ಕಾಪಾಡುವುದಲ್ಲದೆ ರಾಜ್ಯಗಳ ಹಿತರಕ್ಷಣೆಗೂ ಬದ್ಧವಾಗಿರುತ್ತದೆ" ಎಂದಿದ್ದಾರೆ.

ಲಾರ್ಡ್ ಆಕ್ಟನ್‌ರವರು: "ಎರಡನೆ ಸಭೆಯು ಸ್ವಾತಂತ್ರ್ಯಕ್ಕೆ ರಕ್ಷಣೆಯನ್ನು, ಅಧಿಕಾರದ ಸಮತೋಲನವನ್ನು, ಅಲ್ಪಸಂಖ್ಯಾತರಿಗೆ ರಕ್ಷಣೆಯನ್ನು ನೀಡುವುದಲ್ಲದೆ, ಶಾಸನಗಳ ಪುನರ್ ಪರಿಶೀಲನೆಯಿಂದ ಉತ್ತಮ ಗುಣಮಟ್ಟದ ಶಾಸನಗಳ ರಚನೆಗೂ ಸಹಾಯಕವಾದ ಸಭೆಯಾಗಿದೆ" ಎಂದಿದ್ದಾರೆ.

ಈ ಮೇಲ್ಕಂಡ ವಾದಗಳು ದ್ವಿತೀಯ ಸದನದ ಅಗತ್ಯತೆಯನ್ನು ಪುಷ್ಟೀಕರಿಸುತ್ತವೆ.

ದ್ವಿಸದನ ಶಾಸಕಾಂಗ ಹೊಂದಿರುವ ದೇಶಗಳು

ಕ್ರಮ ಸಂಖ್ಯೆ	ದೇಶಗಳು	ಶಾಸಕಾಂಗ ಹೆಸರು	ಮೇಲ್ಮನೆ (UpperHouse)	ಕೆಳಮನೆ (Lower House)
1.	ಭಾರತ	ಸಂಸತ್ತು	ರಾಜ್ಯಸಭೆ	ಲೋಕಸಭೆ
2.	ಇಂಗ್ಲೆಂಡ್	ಪಾರ್ಲಿಮೆಂಟ್	ಶ್ರೀಮಂತಸಭೆ	ಸಾಮಾನ್ಯಸಭೆ
3.	ಯುಎಸ್‌ಎ	ಕಾಂಗ್ರೆಸ್	ಸನೆಟ್	ಪ್ರತಿನಿಧಿಸಭೆ
4.	ಆಸ್ಟ್ರೇಲಿಯಾ	ಫೆಡರಲ್ ಪಾರ್ಲಿಮೆಂಟ್	ಸನೆಟ್	ಪ್ರತಿನಿಧಿಸಭೆ
5.	ಫ್ರಾನ್ಸ್	ನ್ಯಾಷನಲ್ ಅಸೆಂಬ್ಲಿ	ಕೌನ್ಸಿಲ್	ರಾಷ್ಟ್ರೀಯ ಸಭೆ
6.	ಕೆನಡಾ	ಪಾರ್ಲಿಮೆಂಟ್	ಸನೆಟ್	ಸಾಮಾನ್ಯ ಸಭೆ
7.	ಸ್ವಿಟ್ಜರ್ ಲ್ಯಾಂಡ್	ಫೆಡರಲ್ ಅಸೆಂಬ್ಲಿ	ಕೌನ್ಸಿಲ್ ಆಫ್	ನ್ಯಾಷನಲ್

			ಸ್ಟೇಟ್ಸ್	ಕೌನ್ಸಿಲ್

6.5: ಶಾಸಕಾಂಗದ ಅಧಿಕಾರ ಮತ್ತು ಕಾರ್ಯಗಳು:

ಶಾಸಕಾಂಗದಲ್ಲಿ ಅನೇಕ ವಿಷಯಗಳ ಮತ್ತು ಮಸೂದೆಗಳ ಬಗೆಗೆ ಆಗುವ ಚರ್ಚೆಗಳು ಪ್ರಜಾಭಿಪ್ರಾಯವನ್ನು ರೂಪಿಸುತ್ತವೆ. ಕಾರ್ಯಾಂಗವು ಸರ್ಕಾರದ ಬಾಹ್ಯ ಸ್ವರೂಪವಾದರೆ ಶಾಸಕಾಂಗವು ಅದರ ಆಂತರಿಕ ಸ್ವರೂಪ. ಸರ್ಕಾರದ ಮೂರು ಅಂಗಗಳಿಗೆ ಇರುವ ಬಾಂದವ್ಯವನ್ನು ಗಿಲ್‌ಕ್ರಿಸ್ಟ್‌ರವರು ಹೀಗೆ ವರ್ಣಿಸಿದ್ದಾರೆ. 'ಶಾಸಕಾಂಗದ ಅಧಿಕಾರವು ಮೂಲಾಧಾರವಾದರೆ, ನ್ಯಾಯಾಂಗವು ಸಿದ್ದಾಂತವಾಗಿದ್ದು, ಕಾರ್ಯಾಂಗವು ಉಪಸಂಹಾರದಂತಿರುತ್ತದೆ'. ಮೂಲಾಧಾರವು ಸಿದ್ಧಾಂತ ಹಾಗೂ ಉಪಸಂಹಾರಕ್ಕಿಂತಲೂ ಪ್ರಧಾನವಾದುದಾಗಿದೆ.

ಶಾಸಕಾಂಗವು ವ್ಯಾಪಕ ಅಧಿಕಾರ ಹೊಂದಿದೆ. ಕಾರ್ಯಾಂಗಕ್ಕಿಂತಲೂ ಉನ್ನತ ಸ್ಥಾನ ಪಡೆದಿದೆ. ಸರ್ಕಾರದ ಸಮಸ್ತ ಕಾರ್ಯ ಚಟುವಟಿಕೆಗಳ ಮೇಲೂ ಅದು ತನ್ನ ಅಧಿಕಾರವನ್ನು ಚಲಾಯಿಸುತ್ತದೆ. ಶಾಸಕಾಂಗದ ಅಧಿಕಾರ ಮತ್ತು ಕಾರ್ಯಗಳನ್ನು ಈ ಕೆಳಕಂಡಂತಿವೆ.

1. ಶಾಸನೀಯ ಕಾರ್ಯಗಳು: (Legislative Functions)

ಶಾಸಕಾಂಗದ ಪ್ರಮುಖ ಕರ್ತವ್ಯ ರಾಜ್ಯದ ಆಡಳಿತವನ್ನು ನಡೆಸಿಕೊಂಡು ಹೋಗಲು ಅಗತ್ಯವಾದ ಶಾಸನಗಳನ್ನು ರೂಪಿಸುವುದು. ಪ್ರಜೆಗಳ ದೈನಂದಿನ ಚಟುವಟಿಕೆಗಳನ್ನು ನಿಯಂತ್ರಿಸಲು ಹಾಗೂ ಸರ್ಕಾರ ಮತ್ತು ಪ್ರಜೆಗಳ ನಡುವಿನ ಸಂಬಂಧವನ್ನು ನಿರ್ಧರಿಸಲು ಶಾಸನ ಅತ್ಯಗತ್ಯವಾಗಿದೆ. ಶಾಸನಗಳೂ ಬದಲಾಗುತ್ತಿರುವ ಪರಿಸ್ಥಿತಿಗನುಗುಣವಾಗಿರಬೇಕು. ಆದುದರಿಂದ ಶಾಸಕಾಂಗವು ಪರಿವರ್ತನಶೀಲ ಸಮಾಜದ ಅವಶ್ಯಕತೆಗಳಿಗನುಗುಣವಾಗಿ ಶಾಸನಗಳಿಗೆ ಅಗತ್ಯವಾದ ತಿದ್ದುಪಡಿಗಳನ್ನು ಮಾಡುತ್ತದೆ. ಹಾಗೆಯೇ ಕಾಲಕ್ಕೆ ತಕ್ಕಂತೆ ಹೊಂದಿಕೊಳ್ಳುವ ಅಗತ್ಯವಾದ ಹೊಸ ಶಾಸನಗಳನ್ನು ರೂಪಿಸುತ್ತದೆ.

2. ಮಂತ್ರಾಲೋಚನಾ ಕಾರ್ಯಗಳು: (Deleberative Functions)

ಮಂತ್ರಾಲೋಚನೆ ಎಂದರೆ ಚರ್ಚಿಸುವುದು ಎಂದರ್ಥ. ಶಾಸನೀಯ ಹಾಗೂ ಮಂತ್ರಣ ಕಾರ್ಯಗಳ ನಡುವೆ ನಿಕಟ ಸಂಬಂಧವಿದೆ. ಕಾನೂನುಗಳು ಇಡೀ ರಾಷ್ಟ್ರಜೀವನವನ್ನು ನಿಯಂತ್ರಿಸುತ್ತವೆ. ಆದುದರಿಂದ ಕಾನೂನುಗಳನ್ನು ಅಂಗೀಕರಿಸುವುದಕ್ಕೆ ಮೊದಲು ಅವುಗಳ ಸಾಧಕ ಬಾಧಕಗಳನ್ನು ಚರ್ಚಿಸಬೇಕು. ಹೀಗಾಗಿ ಶಾಸಕಾಂಗದ ಸದಸ್ಯರು ಮಸೂದೆಗಳು ಕಾನೂನುಗಳಾಗುವುದಕ್ಕೆ ಮೊದಲು ಅವುಗಳ ಬಗ್ಗೆ ಸಮರ್ಪಕವಾಗಿ ಚರ್ಚೆ ನಡೆಸುತ್ತಾರೆ.

ಮಸೂದೆಗಳನ್ನು ಕೂಲಂಕುಶವಾಗಿ ತಿಳಿಯಲು ಹಾಗೂ ಅದರ ಬಗ್ಗೆ ವಿವಿಧ ದೃಷ್ಟಿಕೋನಗಳಿಂದ ಯೋಚಿಸಲು ಚರ್ಚೆಗಳು ಸದಸ್ಯರಿಗೆ ಅವಕಾಶಗಳನ್ನು ಒದಗಿಸಿಕೊಡುತ್ತವೆ. ಶಾಸನ ಸಭೆಯಲ್ಲಿ ನಡೆಯುವ ಇಂತಹ ಚರ್ಚೆಗಳು ಸಾರ್ವಜನಿಕರ ಗಮನ ಸೆಳೆಯುವುದಲ್ಲದೆ ಸಾರ್ವಜನಿಕ ಸಮಸ್ಯೆಗಳತ್ತ ಸರ್ಕಾರದ ಗಮನವನ್ನು ಸೆಳೆಯುತ್ತವೆ.

3. ಹಣಕಾಸಿನ ಕಾರ್ಯಗಳು: (Financial Functions)

ಹಣಕಾಸಿನ ಮೇಲೆ ನಿಯಂತ್ರಣ ಹಾಗೂ ರಾಷ್ಟ್ರದ ಆದಾಯದ ಸಂಪೂರ್ಣವಾದ ಮೇಲ್ವಿಚಾರಣೆ ಶಾಸಕಾಂಗಕ್ಕೆ ಸೇರಿದೆ. ಶಾಸಕಾಂಗದ ಅನುಮತಿ ಇಲ್ಲದೆ ಸರ್ಕಾರ ಹಣವನ್ನು ತೆರಿಗೆ ಮೂಲಕ ಸಂಗ್ರಹಿಸುವುದಾಗಲಿ ಅಥವಾ ವೆಚ್ಚ ಮಾಡುವುದಾಗಲಿ ಸಾಧ್ಯವಿಲ್ಲ. ಪ್ರತಿವರ್ಷವು ಮುಂಗಡ ಪತ್ರವನ್ನು ಶಾಸನ ಸಭೆಯಲ್ಲಿ ಮಂಡಿಸಿದಾಗ ಅದನ್ನು ವಿವರವಾಗಿ ಚರ್ಚಿಸುತ್ತದೆ. ಆಯವ್ಯಯದ ಮೂಲಕ ಶಾಸನಸಭೆ ಸರ್ಕಾರವನ್ನು ನಿಯಂತ್ರಣದಲ್ಲಿಡುತ್ತದೆ. (ಮುಂಗಡ ಪತ್ರ–ವಾರ್ಷಿಕ ಅಂದಾಜು ಆಯ-ವ್ಯಯಪಟ್ಟಿ).

4. ಆಡಳಿತದ ಮೇಲೆ ನಿಯಂತ್ರಣ: (Control over Administrative)

ದೇಶದ ಆಡಳಿತ ವ್ಯವಸ್ಥಿತವಾಗಿ ನಡೆಯುವಂತೆ ನೋಡಿಕೊಳ್ಳುವುದು ಶಾಸಕಾಂಗದ ಪ್ರಮುಖ ಕರ್ತವ್ಯವಾಗಿದೆ. ಆದ್ದರಿಂದ ಶಾಸಕಾಂಗವು ಕಾರ್ಯಾಂಗವನ್ನು ನಿಯಂತ್ರಿಸಿ. ಅದರ ಆಡಳಿತ ಕಾರ್ಯದ ಮೇಲೆ ಮೇಲ್ವಿಚಾರಣೆ ನಡೆಸುತ್ತದೆ. ಕಾರ್ಯಾಂಗವು ಜನತಾ ಪ್ರತಿನಿಧಿಗಳಿಂದ ಕೂಡಿದ್ದು, ಶಾಸನ ಸಭೆಯ ಇಚ್ಛಾನುಸಾರವಾಗಿ ಕಾರ್ಯ ನಿರ್ವಹಿಸಬೇಕಾಗುತ್ತದೆ.

ಸಂಸದೀಯ ಸರ್ಕಾರ ವ್ಯವಸ್ಥೆಯಲ್ಲಿ ಕ್ಯಾಬಿನೆಟ್ ಶಾಸಕಾಂಗದ ಸೃಷ್ಟಿಯಾಗಿದ್ದು, ಶಾಸಕಾಂಗಕ್ಕೆ ಸಂಪೂರ್ಣವಾಗಿ ಹೊಣೆಯಾಗಿರುತ್ತದೆ. ಕ್ಯಾಬಿನೆಟ್ ಶಾಸಕಾಂಗದ ವಿಶ್ವಾಸವನ್ನು ಹೊಂದಿರುವವರೆಗೆ ಅಧಿಕಾರದಲ್ಲಿರುತ್ತದೆ. ಅವಿಶ್ವಾಸ ನಿರ್ಣಯವನ್ನು ಅಂಗೀಕರಿಸುವುದರ ಮೂಲಕ ಮಂತ್ರಿಮಂಡಲವನ್ನು ಅಧಿಕಾರದಿಂದ ಕೆಳಗಿಳಿಸಬಹುದು. ಮೌಖಿಕ ಪ್ರಶ್ನೆಗಳನ್ನು ಕೇಳುವುದು, ತುರ್ತು ಸಾರ್ವಜನಿಕ ಸಮಸ್ಯೆಗಳನ್ನು ನಿಲುವಳಿ ಸೂಚನೆಯ ಮೂಲಕ ಚರ್ಚಿಸುವುದು. ವಾರ್ಷಿಕ ಮುಂಗಡ ಪತ್ರದಲ್ಲಿರುವ ಬೇಡಿಕೆಗಳ ಬಗ್ಗೆ ಕಡಿತದ ಸೂಚನೆಗಳನ್ನು ತರುವುದು- ಇವುಗಳ ಮೂಲಕ ಶಾಸಕಾಂಗವು ಸರ್ಕಾರವನ್ನು ಜನರ ಪರವಾಗಿರುವಂತೆ ನೋಡಿಕೊಳ್ಳುತ್ತದೆ.

ಅಧ್ಯಕ್ಷೀಯ ಸರ್ಕಾರ ವ್ಯವಸ್ಥೆಯಲ್ಲಿ ಅಧ್ಯಕ್ಷನು ಶಾಸಕಾಂಗಕ್ಕೆ ಅಧೀನವಾಗಿರುವುದಿಲ್ಲ ಮತ್ತು ಜವಾಬ್ದಾರಿಯಾಗಿರುವುದಿಲ್ಲ. ಆದುದರಿಂದ ಶಾಸಕಾಂಗವು ಬೇಕಾದ ಅಧ್ಯಕ್ಷನನ್ನು ಪದಚ್ಯುತಿಗೊಳಿಸಲು ಸಾಧ್ಯವಿಲ್ಲ. ಏಕೆಂದರೆ ಶಾಸಕಾಂಗದ ಮೇಲ್ಮನೆಯಾದ ಸೆನೆಟ್ ಅಧ್ಯಕ್ಷನ ಮೇಲೆ ನಿಯಂತ್ರಣ ಹೊಂದಿರುತ್ತದೆ.

ಒಟ್ಟಿನಲ್ಲಿ ಶಾಸಕಾಂಗವು ಕಾರ್ಯಾಂಗದ ಮೇಲೆ ನಿಯಂತ್ರಣ ಹಾಗೂ ಮೇಲ್ವಿಚಾರಣೆಯ ಅಧಿಕಾರಗಳನ್ನು ಹೊಂದಿರುತ್ತದೆ.

5. ನ್ಯಾಯಾಂಗದ ಅಧಿಕಾರ ಮತ್ತು ಕಾರ್ಯಗಳು: (Judical Functions)

ಶಾಸಕಾಂಗವು ನ್ಯಾಯಾಂಗಕ್ಕೆ ಸಂಬಂಧಿಸಿದ ಕಾರ್ಯಗಳನ್ನು ನಿರ್ವಹಿಸುತ್ತದೆ. ದ್ವಿಸದನ ಪದ್ಧತಿಯನ್ನು ಹೊಂದಿರುವ ಶಾಸನಸಭೆಗಳಲ್ಲಿ ಕೆಲವು ಮೇಲ್ಮನೆಗಳು ನ್ಯಾಯಾಂಗದ ಕಾರ್ಯಗಳನ್ನು ನಿರ್ವಹಿಸುತ್ತವೆ. ಇಂಗ್ಲೆಂಡಿನ ಮೇಲ್ಮನೆಯಾದ ಶ್ರೀಮಂತ ಸಭೆಯು ಆ ದೇಶದ ಅತ್ಯುನ್ನತ ಹಾಗೂ ಅಂತಿಮ ಅಪೀಲು ನ್ಯಾಯಾಲಯವಾಗಿದೆ. ಅಮೇರಿಕಾ ಕಾಂಗ್ರೆಸ್ಸಿನ ಮೇಲ್ಮನೆಯಾದ ಸೆನೆಟ್ ಅಧ್ಯಕ್ಷರ ಹಾಗೂ ಉಪಾಧ್ಯಕ್ಷರ ಮೇಲಿನ ಆಪಾದನೆಗಳನ್ನು ವಿಚಾರಣೆ ನಡೆಸಬಹುದಾದ ಅಧಿಕಾರವನ್ನು ಹೊಂದಿದೆ. ಉದಾಹರಣೆಗೆ ಅಮೇರಿಕಾದ ಅಧ್ಯಕ್ಷರಾಗಿದ್ದ ರಿಚರ್ಡ್ ನಿಕ್ಸನ್ ರವರ ಮೇಲೆ ವಾಟರ್ ಗೇಟ್ ಹಗರಣದ ಮೇಲಿನ ಆಪಾದನೆಗಳನ್ನು ಸನೆಟ್ ವಿಚಾರಣೆ ನಡೆಸಿದ್ದನ್ನು ಸ್ಮರಿಸಬಹುದು.

ಭಾರತದ ಸಂಸತ್ತಿನ ದ್ವಿಸದನಗಳು ರಾಷ್ಟ್ರಪತಿಯವರ ಮೇಲಿರುವ ಆಪಾದನೆಗಳನ್ನು ಚರ್ಚಿಸಿ ಅವರನ್ನು ಪದಚ್ಯುತಿಗೊಳಿಸಬಹುದಾದ ಅಧಿಕಾರವನ್ನು ಹೊಂದಿದೆ. ಹಾಗೇಯೆ ಸುಪ್ರೀಂಕೋರ್ಟ್ ಮತ್ತು ಹೈಕೋರ್ಟ್‌ಗಳ ನ್ಯಾಯಾಧೀಶರುಗಳನ್ನು ದುರ್ನಡತೆ, ಅದಕ್ಷತೆ ಮುಂತಾದ ಕಾರಣಗಳಿಗೋಸ್ಕರ ಅವರನ್ನು ಅಧಿಕಾರದಿಂದ ತೆಗೆದುಹಾಕುವ ಅಥವಾ ಕಡ್ಡಾಯ ನಿವೃತ್ತಿಗೊಳಿಸಿಬಹುದಾದ ಅಧಿಕಾರವನ್ನು ಹೊಂದಿದೆ.

6. ಚುನಾವಣಾ ಕಾರ್ಯಗಳು: (Electoral Functions)

ಬಹುತೇಕ ರಾಷ್ಟ್ರಗಳ ಮುಖ್ಯ ಕಾರ್ಯನಿರ್ವಾಹಕ ಅಥವಾ ಅಧ್ಯಕ್ಷನನ್ನು ಆಯ್ಕೆ ಮಾಡುವ ಜವಾಬ್ದಾರಿ ಶಾಸಕಾಗದ್ದಾಗಿರುತ್ತದೆ. ಉದಾಹರಣೆಗೆ ಭಾರತದ ಸಂಸತ್ತಿನ ದ್ವಿಸದನಗಳಲ್ಲೂ ಇರುವ ಚುನಾಯಿತ ಪ್ರತಿನಿಧಿಗಳು ರಾಷ್ಟ್ರಪತಿಯವರ ಚುನಾವಣೆಯಲ್ಲಿ ಭಾಗವಹಿಸುತ್ತಾರೆ.

ಅಂತೆಯೇ ಶಾಸನಸಭೆಗಳ ಸಾರ್ವತ್ರಿಕ ಚುನಾವಣೆ ಮುಗಿದ ನಂತರ ತಮ್ಮ ಸದಸ್ಯರಲ್ಲಿಯೇ ಒಬ್ಬರನ್ನು ಸಭಾಧ್ಯಕ್ಷರನ್ನಾಗಿ ಮತ್ತೊಬ್ಬರನ್ನು ಉಪಾಧ್ಯಕ್ಷರನ್ನಾಗಿ ಚುನಾವಣೆಯ ಮೂಲಕ ಆಯ್ಕೆ ಮಾಡುತ್ತಾರೆ.

7. ಇತರೆ ಕಾರ್ಯಗಳು: (Miscellaneous Functions)

ಸಂವಿಧಾನಕ್ಕೆ ಸಂಬಂಧಿಸಿದಂತೆ ದೇಶದ ಆಡಳಿತದ ಸಮಸ್ಯೆಗಳು ಉದ್ಭವಿಸಿದಾಗ ಅವುಗಳ ತನಿಖೆಗಾಗಿ ಆಯೋಗಗಳು ಅಥವಾ ಸಮಿತಿಗಳನ್ನು ನೇಮಿಸುವುದು. ಕೆಲವು ದೇಶಗಳಲ್ಲಿ ಶಾಸಕಾಂಗವು ಕಾರ್ಯಾಂಗದ ಹಾಗೂ ನ್ಯಾಯಾಂಗದ ವರಿಷ್ಠರ ಆಯ್ಕೆಯ ಕಾರ್ಯದಲ್ಲಿ ಭಾಗವಹಿಸುತ್ತದೆ. ಉದಾಹರಣೆಗೆ ಭಾರತದ ರಾಷ್ಟ್ರಪತಿ. ಸಂವಿಧಾನವನ್ನು ತಿದ್ದುಪಡಿ ಮಾಡುವ ಕಾರ್ಯವು ಶಾಸಕಾಂಗಕ್ಕೆ ಸೇರಿರುತ್ತದೆ. ಉದಾಹರಣೆಗೆ: ಬ್ರಿಟನ್ನಿನ ಪಾರ್ಲಿಮೆಂಟ್, ಭಾರತದ ಸಂಸತ್ತು, ಅಮೇರಿಕಾದ ಕಾಂಗ್ರೆಸ್.

ರಾಷ್ಟ್ರದ ಆಡಳಿತದ ದಕ್ಷತೆ, ಸರ್ಕಾರದ ಗುಣಾವಗುಣಗಳು, ಚುನಾವಣೆಗಳು ಬಹುಮಟ್ಟಿಗೆ ಅಲ್ಲಿನ ಶಾಸಕಾಂಗದ ದಕ್ಷತೆಯನ್ನು ಅವಲಂಬಿಸಿರುತ್ತವೆ. ಶಾಸನಸಭೆಗೆ ದಕ್ಷರು, ಬುದ್ಧಿವಂತರು, ನಿಸ್ವಾರ್ಥಿಗಳು ಮತ್ತು ಪ್ರಾಮಾಣಿಕ ವ್ಯಕ್ತಿಗಳನ್ನು ಚುನಾಯಿಸುವ ಅವಕಾಶವನ್ನು ಪ್ರಜೆಗಳು ಒಳ್ಳೆಯ ರೀತಿಯಲ್ಲಿ ಉಪಯೋಗಿಸಿಕೊಳ್ಳಬೇಕು. ಆಗ ಶಾಸಕಾಂಗವು ಯೋಗ್ಯ ಶಾಸಕರುಗಳನ್ನು ಹೊಂದಿ ಅವರಿಂದ ದೇಶಕ್ಕೆ ಉತ್ತಮ ಸೇವೆ ದೊರೆಯುತ್ತದೆ ಎಂಬುದರಲ್ಲಿ ಸಂಶಯವಿಲ್ಲ.

ಅಭ್ಯಾಸ

I. ಒಂದು ವಾಕ್ಯದಲ್ಲಿ ಉತ್ತರಿಸಿ:

1. ಶಾಸಕಾಂಗದ ಮೂಲ ಪದ ಯಾವುದು?
2. ಶಾಸಕಾಂಗ ಎಂದರೇನು?
3. ಏಕಸದನ ಶಾಸಕಾಂಗ ಎಂದರೇನು?
4. ದ್ವಿಸದನ ಶಾಸಕಾಂಗ ಎಂದರೇನು?

II. ‘ಅ’ ಪಟ್ಟಿಗೆ ‘ಬ’ ಪಟ್ಟಿಯನ್ನು ಹೊಂದಿಸಿ ಬರೆಯಿರಿ.

‘ಅ’	**‘ಬಿ’**
ಎ. ಮಾಲ್ಡೀವ್ಸ್	ಬುಂಡೇಸ್ಟಾಗ್
ಬಿ. ಡೆನ್ಮಾರ್ಕ್	ಸಂಸತ್ತು
ಸಿ. ಚೀನಾ	ನೆಸ್ಸಿಯಾ
ಡಿ. ಫ್ರಾನ್ಸ್	ಫೋಕೆಟಿಂಗ್
ಇ. ಜರ್ಮನಿ	ಯುವಾನ್

ಎಫ್. ಇಸ್ರೇಲ್	ಮಜ್ಲಿಸ್
	ನ್ಯಾಷನಲ್ ಅಸೆಂಬ್ಲಿ

III. ಎರಡು ಅಥವಾ ಮೂರು ವಾಕ್ಯಗಳಲ್ಲಿ ಉತ್ತರಿಸಿ:

1. ಶಾಸಕಾಂಗದ ಎರಡು ವಿಧಗಳನ್ನು ತಿಳಿಸಿ.
2. ಭಾರತದ ಸಂಸತ್ತಿನ ಎರಡು ಸದನಗಳನ್ನು ಹೆಸರಿಸಿ.
3. ಬ್ರಿಟನ್ ಪಾರ್ಲಿಮೆಂಟಿನ ಎರಡು ಸದನಗಳಾವುವು?

IV. ಎಂಟು ಅಥವಾ ಹತ್ತು ವಾಕ್ಯಗಳಲ್ಲಿ ಉತ್ತರಿಸಿ:

1. ಶಾಸಕಾಂಗದ ಪ್ರಾಮುಖ್ಯತೆಯನ್ನು ವಿವರಿಸಿ.
2. ಶಾಸಕಾಂಗದ ಅಧಿಕಾರ ಮತ್ತು ಕಾರ್ಯಗಳನ್ನು ಚರ್ಚಿಸಿ.

ಸಲಹಾತ್ಮಕ ಚಟುವಟಿಕೆಗಳು:

ಶಾಲೆಯಲ್ಲಿ ‘ಅಣುಕು ಸಂಸತ್ತು’ (Mok Parliament) ರಚಿಸಿರಿ.

ಅಧಿವೇಶನಗಳನ್ನು ಏರ್ಪಡಿಸಿ ಶಾಲಾ ವಿಷಯಗಳ ಬಗ್ಗೆ ಚರ್ಚಿಸಿ.

ಶಾಸನ ಸಭೆಯ ಅಧಿವೇಶನಗಳನ್ನು ದೂರದರ್ಶನದಲ್ಲಿ ವೀಕ್ಷಿಸುವಂತೆ ತಿಳಿಸಿ.

ಅಧ್ಯಾಯ-7 ಕಾರ್ಯಾಂಗ (Executive)

ಕಲಿಕಾ ಉದ್ದೇಶಗಳು:

1. ಕಾರ್ಯಾಂಗದ ಅರ್ಥವನ್ನು ತಿಳಿಯುವುದು
2. ಕಾರ್ಯಾಂಗದ ಮಹತ್ವವನ್ನು ಅರಿಯುವುದು.
3. ಕಾರ್ಯಾಂಗದ ರಚನೆಯನ್ನು ತಿಳಿಯುವುದು.
4. ಕಾರ್ಯಾಂಗದ ಕಾರ್ಯಗಳನ್ನು ಅರಿಯುವುದು.
5. ಕಾರ್ಯಾಂಗದ ವಿಧಗಳನ್ನು ಗುರುತಿಸುವುದು.

"ಸರ್ಕಾರದ ಮೂಲ ಸತ್ವವೇ ಕಾರ್ಯಾಂಗದಲ್ಲಿ ಅಡಗಿದ್ದು, ಶಾಸಕಾಂಗ ಮತ್ತು ನ್ಯಾಯಾಂಗಗಳು ಕಾರ್ಯಾಂಗವನ್ನು ಸಂವಿಧಾನಬದ್ಧಗೊಳಿಸುವ ಸಾಧನಗಳಾಗಿವೆ". **ಜೆ. ಎ. ಕೊರ್ರಿ.**

"ಹೆಚ್ಚುತ್ತಲೇ ಹೋಗುತ್ತಿರುವ ಕಾರ್ಯಾಂಗದ ಪ್ರಾಮುಖ್ಯವು ಸರ್ಕಾರದ ಎಲ್ಲಾ ಹಂತಗಳಿಗೆ ಸಂಬಂಧಿಸಿದಂತೆ ವಿಶ್ವದಾದ್ಯಂತ ಕಾಣಬರುತ್ತಿರುವ ಒಂದು ಸಾಮಾನ್ಯ ವಿದ್ಯಮಾನವಾಗಿದೆ". **ಇ. ಬಿ. ಶುಲ್ಜ**

ಪೀಠಿಕೆ:

ಸರ್ಕಾರದ ಮೂರು ಅಂಗಗಳಲ್ಲಿ ಕಾರ್ಯಾಂಗವು ಬಹುಮುಖ್ಯವಾದ ಅಂಗವಾಗಿದೆ. ಶಾಸಕಾಂಗದಿಂದ ರೂಪಿಸಲ್ಪಟ್ಟ ಶಾಸನಗಳನ್ನು ಅನುಷ್ಠಾನಗೊಳಿಸುವ ಅಂಗವೇ ಕಾರ್ಯಾಂಗವಾಗಿದೆ. ಇದು ರಾಷ್ಟ್ರದ ಸಮಗ್ರ ಆಡಳಿತವನ್ನು ನಿರ್ವಹಿಸುತ್ತದೆ. ಆದ್ದರಿಂದ ಇದನ್ನು ಆಡಳಿತಾತ್ಮಕ ಅಂಗವೆಂದೇ ಕರೆಯಲಾಗುತ್ತದೆ. ಪ್ರತಿ ಹಂತದಲ್ಲಿಯೂ ಕಾರ್ಯಾಂಗವು ಪ್ರಾಯೋಗಿಕ ಉದ್ದೇಶಗಳಿಗಾಗಿ ಸರ್ಕಾರದೊಡನೆ ಗುರುತಿಸಿಕೊಳ್ಳುತ್ತದೆ. ಏಕೆಂದರೆ ಸರ್ಕಾರದ ಬಹುಪಾಲು ಅಧಿಕಾರಿಗಳು ಕಾರ್ಯಾಂಗದಲ್ಲಿಯೇ ಕೇಂದ್ರಿಕೃತವಾಗಿರುತ್ತವೆ.

7.1 ಅರ್ಥ:

ಕಾರ್ಯಾಂಗ ಎಂಬ ಪರಿಕಲ್ಪನೆಗೆ ಸಂಕುಚಿತ ಹಾಗೂ ವಿಶಾಲ ಅರ್ಥಗಳಿವೆ. ಕಾರ್ಯಾಂಗ ಎಂಬ ಪದವು ಆಂಗ್ಲ ಭಾಷೆಯ ಎಕ್ಸಿಕ್ಯುಟಿವ್ ಪದದ ರೂಪಾಂತರವಾಗಿದೆ.

ಇದು ಮಧ್ಯಕಾಲೀನ ಲಾಟಿನ ಭಾಷೆಯ ಎಕ್ಸಿಕ್ಯೂ (Exsequi) ಎಂಬ ಶಬ್ದದಿಂದ ಬಂದಿದೆ. ಇದರರ್ಥ 'ಕಾರ್ಯನಿರ್ವಹಿಸು' ಎಂದಾಗುತ್ತದೆ.

ಸಂಕುಚಿತ ಅರ್ಥದಲ್ಲಿ ಕಾರ್ಯಾಂಗವೆಂದರೆ, ರಾಜ್ಯದ ಮುಖ್ಯ ಕಾರ್ಯನಿರ್ವಾಹಕ ಹಾಗೂ ಅದರ ಸಲಹೆಗಾರ ಎಂದು ಪರಿಗಣಿಸಲಾಗಿದೆ. ಉದಾಹರಣೆಗೆ ಭಾರತದಲ್ಲಿ ರಾಷ್ಟ್ರಾಧ್ಯಕ್ಷರು ಹಾಗೂ ಸಚಿವ ಸಂಪುಟವಾದರೆ, ಅಮೇರಿಕಾದಲ್ಲಿ ರಾಷ್ಟ್ರಾಧ್ಯಕ್ಷರು ಮತ್ತು ಅವರ ಕಾರ್ಯದರ್ಶಿಗಳನ್ನು ಒಳಗೊಂಡಿರುತ್ತದೆ.

ವಿಶಾಲ ಅರ್ಥದಲ್ಲಿ ಕಾರ್ಯಾಂಗವೆಂದರೆ, ಶಾಸನಗಳನ್ನು ಅನುಷ್ಠಾನಗೊಳಿಸುವುದಕ್ಕೆ ಸಂಬಂಧಿಸಿದಂತೆ ಎಲ್ಲಾ ಅಧಿಕೃತ ವ್ಯಕ್ತಿಗಳ ಸಮೂಹವಾಗಿವೆ. ಅಂದರೆ ರಾಷ್ಟ್ರದ ಮುಖ್ಯಸ್ಥರು, ಮಂತ್ರಿಗಳು ಹಾಗೂ ಕಾರ್ಯದರ್ಶಿಗಳು, ಇಲಾಖಾ ಮುಖ್ಯಸ್ಥರು, ಗುಮಾಸ್ತರು ಮುಂತಾದ ನಾಗರಿಕ ಸೇವಾ ವರ್ಗದ ಸಿಬ್ಬಂದಿಗಳನ್ನು ಒಳಗೊಂಡಿರುತ್ತದೆ.

ವ್ಯಾಖ್ಯೆಗಳು:

ಗಾರ್ನರ್ ರವರ ಪ್ರಕಾರ: "ಶಾಸಕಾಂಗ, ಸಂವಿಧಾನ ಮತ್ತು ನ್ಯಾಯಾಂಗದ ನಿರ್ಧಾರಗಳ ಮೂಲಕ

ವ್ಯಕ್ತವಾಗುವ ರಾಜ್ಯದ ಇಚ್ಛೆಯನ್ನು ಕಾರ್ಯಗತಗೊಳಿಸುವ ಸರ್ಕಾರದ ಅಂಗವೇ ಕಾರ್ಯಾಂಗ."

ವಿಲ್ಲೋಬಿ ರವರ ಪ್ರಕಾರ: "ಕಾರ್ಯಾಂಗೀಯ ಅಧಿಕಾರ ಅಥವಾ ಅದರ ಕಾರ್ಯ ಇಡೀ ಸರ್ಕಾರವನ್ನು ಪ್ರತಿನಿಧಿಸುತ್ತಿದ್ದು, ಅದರ ಕಾನೂನುಗಳು ಅದರ ಹಲವಾರು ಅಂಗಗಳು ಕೋರಿಕೆಯನ್ನು ಈಡೇರಿಸುವಂತೆ ನೋಡಿಕೊಳ್ಳುವುದೇ ಕಾರ್ಯಾಂಗ."

7.2 ಮಹತ್ವ:

ಪ್ರತಿಯೊಂದು ರಾಜಕೀಯ ವ್ಯವಸ್ಥೆಗಳಲ್ಲಿಯೂ ಕಾರ್ಯಾಂಗವು ಕೇಂದ್ರ ಸ್ಥಾನವನ್ನು ಅಲಂಕರಿಸುತ್ತದೆ. ಇದರ ಮಹತ್ವವು ಈ ಕೆಳಕಂಡಂತಿವೆ.

1. **ಕಾರ್ಯಾಂಗವೇ ಸರ್ಕಾರದ ಯಂತ್ರ:**

ಮೆದುಳು ಇಲ್ಲದ ದೇಹವನ್ನು ಹೇಗೆ ಊಹಿಸಲು ಸಾಧ್ಯವಿಲ್ಲವೊ ಹಾಗೇ ಕಾರ್ಯಾಂಗವಿಲ್ಲದ ರಾಜ್ಯವನ್ನು ಊಹಿಸಲು ಅಸಾಧ್ಯ. ರಾಷ್ಟ್ರದ ಸಂಪೂರ್ಣ ಆಡಳಿತದ ಜವಾಬ್ದಾರಿಯನ್ನು ಕಾರ್ಯಾಂಗವೇ ನಿರ್ವಹಿಸುತ್ತದೆ. ಇದು ಸರ್ಕಾರದ ಯಂತ್ರವಾಗಿಯೂ ಕಾರ್ಯನಿರ್ವಹಿಸುತ್ತದೆ. ಕಾರ್ಯಾಂಗದ ರಚನಾ ರೀತಿ ಹಾಗೂ ಕಾರ್ಯನಿರ್ವಹಣೆ ಇಡೀ ಸರ್ಕಾರದ ಸಾಮರ್ಥ್ಯದ ಪ್ರತೀಕವಾಗಿದೆ.

2. **ಕಾನೂನನ್ನು ಅನುಷ್ಠಾನಗೊಳಿಸುವುದು.**

ಕಾರ್ಯಾಂಗವು ಅಸ್ತಿತ್ವದಲಿಲ್ಲದಿದ್ದರೆ ಶಾಸಕಾಂಗವು ರೂಪಿಸುವ ಕಾಯಿದೆಗಳು ಅನುಷ್ಠಾನಗೊಳ್ಳುವುದಿಲ್ಲ. ಶಾಸಕಾಂಗವು ಎಷ್ಟೇ ಉತ್ತಮ ಶಾಸನಗಳನ್ನು ರಚಿಸಿದರೂ ಅದನ್ನು ಸೂಕ್ತವಾಗಿ ಕಾರ್ಯರೂಪಕ್ಕೆ ತರುವ ಹೊಣೆ ಕಾರ್ಯಾಂಗದ್ದಾಗಿದೆ.

3. **ಪರಿಣಾಮಕಾರಿ ಪ್ರಜಾಪ್ರಭುತ್ವದ ಸಾಧನ:**

ಇಂದು ಪ್ರಜಾಪ್ರಭುತ್ವವು ಸರ್ಕಾರದ ಬಗೆಯಾಗಿರದೆ, ಜನರ ಜೀವನ ವಿಧಾನವೇ ಆಗಿದೆ. ಪ್ರತೀ ಹಂತದಲ್ಲಿಯೂ ಪ್ರಜಾಪ್ರಭುತ್ವವು ಪರಿಣಾಮಕಾರಿಯಾಗಬೇಕಾದರೆ ಕಾರ್ಯಾಂಗವು ಅವಶ್ಯಕವಾಗಿದೆ. ಈ ನಿಟ್ಟಿನಲ್ಲಿ ಶಕ್ತಿಶಾಲಿ, ಚೈತನ್ಯದಾಯಕ, ಉತಾಹಿ ನಾಯಕತ್ವ ಹೊಂದಿದ ಕಾರ್ಯಾಂಗ ಮಾತ್ರ ಶಾಸಕಾಂಗ ರೂಪಿಸಿದ ಕಾನೂನಿಗೆ ಸರಿಯಾದ ಮಾರ್ಗದರ್ಶನ ನೀಡಿ ಪ್ರಜಾಪ್ರಭುತ್ವವನ್ನು ಫಲಕಾರಿಯಾಗಿಸುತ್ತದೆ.

4. **ಕಲ್ಯಾಣ ರಾಜ್ಯದ ಸಾಧನ:**

ಆಧುನಿಕ ರಾಜ್ಯಗಳೆಲ್ಲವೂ ಕಲ್ಯಾಣ ರಾಜ್ಯ ಸ್ಥಾಪನೆಯ ಗುರಿಯನ್ನು ಹೊಂದಿವೆ. ಪ್ರಜೆಗಳ ಅಭಿವೃದ್ಧಿಗಾಗಿ ಅಗಾಧವಾದ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಿರುವ ಫಲವಾಗಿ ಕಾರ್ಯಾಂಗವು ಹೆಚ್ಚು ಪ್ರಾಮುಖ್ಯವನ್ನು ಪಡೆಯುತ್ತಿದೆ.

5. **ರಾಷ್ಟ್ರದ ಘನತೆಯ ಪ್ರತೀಕ**

ಅಂತರರಾಷ್ಟ್ರೀಯ ಸಂಬಂಧಗಳ ಸಂವರ್ಧನೆಯಲ್ಲಿ, ಒಪ್ಪಂದಗಳನ್ನು ಮಾಡಿಕೊಳ್ಳುವಲ್ಲಿ ಹಾಗೂ ರಾಷ್ಟ್ರೀಯ ಹಿತಾಸಕ್ತಿಗಳನ್ನು ಸಂರಕ್ಷಿಸುವಲ್ಲಿ ಕಾರ್ಯಾಂಗವು ಬಹುಮುಖಿ ಪಾತ್ರವನ್ನು ನಿರ್ವಹಿಸುತ್ತದೆ. ಶಾಂತಿ ಮತ್ತು ಸೌಹಾರ್ದಯುತ ವಿದೇಶಾಂಗ ನೀತಿಯನ್ನು ಅನುಷ್ಠಾನಗೊಳಿಸಿ ರಾಷ್ಟ್ರದ ಪ್ರತಿಷ್ಠೆಯನ್ನು ಹೆಚ್ಚಿಸುತ್ತದೆ.

ಲಿಪ್ಸನ್‌ರವರು “ಮತದಾರರು ಸರ್ಕಾರದ ಮೇಲೆ ವಿಧಿಸಿರುವ ಹೊಸ ಜವಾಬ್ದಾರಿಗಳು ಹಾಗೂ ಸರ್ಕಾರವು ಪಡೆದುಕೊಂಡ ಪ್ರತಿಯೊಂದು ಹೆಚ್ಚುವರಿ ಅಧಿಕಾರವೆಲ್ಲವೂ ಕಾರ್ಯಾಂಗದ ಪ್ರಾಮುಖ್ಯತೆ ಹೆಚ್ಚಲು ಕಾರಣವಾಗಿದೆ” ಎಂದಿದ್ದಾರೆ.

7.3 ರಚನಾ ವಿಧಾನಗಳು:

ಕಾರ್ಯಾಂಗದ ರಚನಾ ಸ್ವರೂಪವು ದೇಶದಿಂದ ದೇಶಕ್ಕೆ ಭಿನ್ನವಾಗಿವೆ. ಏಕೆಂದರೆ ರಾಷ್ಟ್ರದ ಸಾಮಾಜಿಕ ಮತ್ತು ರಾಜಕೀಯ ಸ್ವರೂಪಕ್ಕೆ ತಕ್ಕಂತೆ ಕಾರ್ಯಾಂಗದ ರಚನಾ ವಿಧಾನ ಮತ್ತು ಸ್ವರೂಪವು ನಿರ್ಧರಿಸಲ್ಪಡುತ್ತಿವೆ. ಇದರ ರಚನಾ ವಿಧಾನಗಳು ಇಂತಿವೆ.

1. **ಅನುವಂಶಿಕ ವಿಧಾನದ ಮೂಲಕ:**

ವಂಶಪಾರಂಪರ್ಯತೆಯ ಮೂಲಕ ರಾಷ್ಟ್ರದ ಮುಖ್ಯಸ್ಥರನ್ನು ನೇಮಕ ಮಾಡಲಾಗುತ್ತದೆ. ಇದು ಸಾಂಪ್ರದಾಯಿಕವಾಗಿ ಬೆಳೆದು ಬಂದ ಪದ್ಧತಿಯಾಗಿದೆ. ಉದಾಹರಣೆಗೆ ಬ್ರಿಟನ್ ಮತ್ತು ಜಪಾನ್.

2. **ಪ್ರತ್ಯಕ್ಷ ಚುನಾವಣಾ ವಿಧಾನ:**

ಕಾರ್ಯಾಂಗದ ಮುಖ್ಯಸ್ಥರನ್ನು ವಯಸ್ಕ ಮತದಾನದ ಮೂಲಕ ನೇರವಾಗಿ ಜನರೇ ಆಯ್ಕೆ ಮಾಡುವ ಪದ್ಧತಿಯೇ ಪ್ರತ್ಯಕ್ಷ ಚುನಾವಣಾ ವಿಧಾನವಾಗಿದೆ. ಉದಾಹರಣೆಗೆ ಅಮೇರಿಕಾ.

3. **ಪರೋಕ್ಷ ಚುನಾವಣಾ ವಿಧಾನ:**

ಈ ಪದ್ಧತಿಯಲ್ಲಿ ಕಾರ್ಯಾಂಗದ ಮುಖ್ಯಸ್ಥರನ್ನು ಪ್ರತ್ಯಕ್ಷ ಚುನವಣೆ ಮೂಲಕ ಆಯ್ಕೆ ಮಾಡದೇ, ಪರೋಕ್ಷವಾಗಿ ಜನತಾ ಪ್ರತಿನಿಧಿಗಳ ಮೂಲಕ ಆಯ್ಕೆ ಮಾಡಲಾಗುತ್ತದೆ. ಭಾರತದ ರಾಷ್ಟ್ರಪತಿಯವರು ಪರೋಕ್ಷ ಚುನಾವಣೆಯ ಮೂಲಕ ಆಯ್ಕೆಯಾಗುತ್ತಾರೆ. ಉದಾಹರಣೆಗೆ ಭಾರತದ ರಾಷ್ಟ್ರಪತಿ ಚುನಾವಣೆ.

4. **ಶಾಸಕಾಂಗದ ಮೂಲಕ:**

ಕೆಲವು ರಾಷ್ಟ್ರಗಳಲ್ಲಿ ಶಾಸಕಾಂಗವೇ ಕಾರ್ಯಾಂಗವನ್ನು ಆಯ್ಕೆ ಮಾಡುತ್ತದೆ. ಉದಾಹರಣೆಗೆ ಸ್ವಿಟ್ಜರ್ಲ್ಯಾಂಡ್‌ನಲ್ಲಿ ಕಾರ್ಯಾಂಗವು ಸಂಯುಕ್ತತೆಯನ್ನು ಹೊಂದಿದ್ದು, ಇದರ ಏಳು ಜನ ಸದಸ್ಯರನ್ನು ಅಲ್ಲಿಯ ಶಾಸಕಾಂಗವಾದ ಫೆಡರಲ್ ಅಸೆಂಬ್ಲಿಯೇ ಆಯ್ಕೆ ಮಾಡುತ್ತದೆ.

5. **ಮಿಲಿಟರಿ ಶಕ್ತಿಯ ಮೂಲಕ:**

ಜಕೀಯ ಅಸ್ಥಿರತೆ ಉಂಟಾದ ಸಂದರ್ಭದಲ್ಲಿ ಅಸ್ತಿತ್ವದಲ್ಲಿರುವ ಸರ್ಕಾರವನ್ನು ಪದಚ್ಯುತಿಗೊಳಿಸಿ, ಸೈನಿಕ ಮುಖ್ಯಸ್ಥನು ಅಧಿಕಾರವನ್ನು ವಶಪಡಿಸಿಕೊಂಡು ಕೇಂದ್ರೀಕರಿಸುವುದೇ ಮಿಲಿಟರಿ ಸರ್ಕಾರ ಉದಾಹರಣೆಗೆ ಪಾಕಿಸ್ತಾನ- ಪರ್ವೀಜ್ ಮುಷ್ರಫ್, ಈಜಿಪ್ಟಿನ- ಮುಬಾರಕ್, ಲಿಬಿಯಾ- ಗಡಾಫಿ.

6. **ವಿದೇಶಿ ಹಸ್ತಕ್ಷೇಪದ ಮೂಲಕ:**

ಕಾರ್ಯಾಂಗದ ಮುಖ್ಯಸ್ಥರನ್ನು ನೇಮಕ ಮಾಡುವ ಪದ್ಧತಿ ಇದಾಗಿದ್ದು, ಇಂದು ಕೆಲವೇ ಕೆಲವು ರಾಷ್ಟ್ರಗಳಲ್ಲಿ ಮಾತ್ರ ಕಂಡು ಬರುತ್ತದೆ. ಅಮೇರಿಕಾವು ಅಫ್‌ಘಾನಿಸ್ತಾನ ಹಾಗೂ ಇರಾಕ್‌ನಲ್ಲಿ ಇದ್ದಂತೆ ಸರ್ಕಾರಗಳನ್ನು ಪದಚ್ಯುತಿಗೊಳಿಸಿ ಅಲ್ಲಿಗೆ ತನಗಿಷ್ಟ ಬಂದಂತಹ ತಾತ್ಕಾಲಿಕ ಸರ್ಕಾರ ರಚಿಸಿರುವುದು ಇದಕ್ಕೆ ಉತ್ತಮ ಉದಾಹರಣೆಯಾಗಿದೆ. ಹೀಗೆ ಅನೇಕ ವಿಧಾನಗಳ ಮೂಲಕ ಕಾರ್ಯಾಂಗವು ರಚನೆಗೊಳ್ಳುತ್ತದೆ.

7.4 ಕಾರ್ಯಾಂಗದ ಅಧಿಕಾರ ಮತ್ತು ಕಾರ್ಯಗಳು:

ಆಧುನಿಕ ರಾಜಕೀಯ ವ್ಯವಸ್ಥೆಯು ಸುಖೀ ರಾಜ್ಯದ ಉದ್ದೇಶವನ್ನು ಹೊಂದಿರುವುದರಿಂದ ಸರ್ಕಾರದ ಜವಾಬ್ದಾರಿ ಕಾರ್ಯಗಳು ಹೆಚ್ಚುತ್ತಿವೆ. ಕಾರ್ಯಾಂಗದ ಕಾರ್ಯಗಳು ಈ ಕೆಳಗಿನಂತಿವೆ.

1. **ಕಾನೂನನ್ನು ಅನುಷ್ಠಾನಗೊಳಿಸುವುದು:**

ಕಾನೂನನ್ನು ಅನುಷ್ಠಾನಗೊಳಿಸುವುದು ಕಾರ್ಯಾಂಗದ ಮೂಲ ಉದ್ದೇಶವಾಗಿದೆ. ಶಾಸಕಾಂಗವು ಎಷ್ಟೇ ಉತ್ತಮ ಕಾನೂನುಗಳನ್ನು ರಚಿಸಿದರೂ, ಅವನ್ನು ಸೂಕ್ತವಾಗಿ ಕಾರ್ಯರೂಪಕ್ಕೆ ತರದಿದ್ದಲ್ಲಿ ಶಾಸಕಾಂಗದ ಅತ್ಯುತ್ತಮ ಆದರ್ಶ ಹಾಗೂ ಉದ್ದೇಶಗಳು ವಿಫಲಗೊಳ್ಳುತ್ತವೆ.

2. **ಶಾಂತಿ ಮತ್ತು ಭದ್ರತೆಯನ್ನು ಕಾಪಾಡುವುದು:**

ರಾಷ್ಟ್ರದ ಆಡಳಿತದ ಚುಕ್ಕಾಣಿಯನ್ನು ಹಿಡಿದಿರುವ ಕಾರ್ಯಾಂಗವು ತನ್ನ ಪ್ರಜೆಗಳಿಗೆ ಎಲ್ಲಾ ವಿಧದಲ್ಲಿಯೂ ಭದ್ರತೆಯನ್ನು ನೀಡುತ್ತದೆ. ಯಾವುದೇ ರೀತಿಯ ಅಹಿತಕರ ಘಟನೆಗಳು ನಡೆಯದಂತೆ ಶಾಂತಿಯನ್ನು ಕಾಪಾಡುವ ಹೊಣೆ ಕಾರ್ಯಾಂಗದಾಗಿದೆ.

3. **ಶಾಸನೀಯ ಕಾರ್ಯಗಳನ್ನು ನಿರ್ವಹಿಸುವುದು.**

ಶಾಸನೀಯ ಕಾರ್ಯ ಚಟುವಟಿಕೆ ಹೆಚ್ಚಾಗಿ ಶಾಸಕಾಂಗಕ್ಕೆ ಸೇರಿದ್ದರೂ ಸಹ ಕಾರ್ಯಾಂಗವು ಕೂಡ ಅನೇಕ ವಿಧದಲ್ಲಿ ಶಾಸನೀಯ ಕಾರ್ಯವನ್ನು ನಿಭಾಯಿಸುತ್ತದೆ. ಉದಾಹರಣೆಗೆ ಅಧಿವೇಶನ ಕರೆಯುವುದು, ಮಸೂದೆಗಳನ್ನು ಮಂಡಿಸಿ ಒಪ್ಪಿಗೆ ಪಡೆಯುವುದು, ಸುಗ್ರಿವಾಜ್ಞೆಗಳನ್ನು ಹೊರಡಿಸುವುದಾಗಿದೆ.

4. **ಹಣಕಾಸಿನ ಕಾರ್ಯಗಳನ್ನು ನಿರ್ವಹಿಸುವುದು:**

ಶಾಸಕಾಂಗದ ಒಪ್ಪಿಗೆಯೊಡನೆ ಕಾರ್ಯಾಂಗವು ಹಣದ ಮೂಲವನ್ನು ಗುರುತಿಸುವ ಹಾಗೂ ಹಣಕಾಸಿನ ವ್ಯವಸ್ಥಿತ ಖರ್ಚನ್ನು ಸಹ ನಿರ್ವಹಿಸುತ್ತದೆ.

5. **ನ್ಯಾಯಾಂಗೀಯ ಕಾರ್ಯಗಳನ್ನು ನಿರ್ವಹಿಸುವುದು.**

ರಾಷ್ಟ್ರದ ಅತ್ಯುನ್ನತ ನ್ಯಾಯಾಲಯ ನೀಡಿದ ಶಿಕ್ಷೆಯನ್ನು ಕಡಿಮೆಗೊಳಿಸುವ ಅಥವಾ ಕ್ಷಮಿಸುವ ಅಧಿಕಾರ ಕಾರ್ಯಾಂಗದ ಮುಖ್ಯಸ್ಥರಿಗೆ ಇರುತ್ತದೆ.

6. **ನೇಮಕಾತಿ ಅಧಿಕಾರ:**

ರಾಷ್ಟ್ರದಲ್ಲಿನ ಪ್ರಮುಖ ಹುದ್ದೆಗಳಿಗೆ ನಿಯಮಾನುಸಾರ ಹಾಗೂ ಸಂವಿಧಾನದ ಚೌಕಟ್ಟಿನಲ್ಲಿ ನೇಮಕ ಮಾಡುವ ಅಧಿಕಾರವನ್ನು ಕಾರ್ಯಾಂಗವು ಹೊಂದಿರುತ್ತದೆ. ನಾಗರೀಕ, ಶಾಸನೀಯ ಹಾಗೂ ಮಿಲಿಟರಿ ಸೇವೆಯಲ್ಲಿನ ಮುಖ್ಯಾಧಿಕಾರಿಗಳನ್ನು ನೇಮಿಸಿ ರಾಷ್ಟ್ರದ ಆಡಳಿತದ ಮೇಲೆ ನಿಯಂತ್ರಣವನ್ನು ಸಾಧಿಸುತ್ತದೆ.

7. **ವಿದೇಶಾಂಗ ನೀತಿಯನ್ನು ಅನುಷ್ಠಾನಗೊಳಿಸುವುದು:**

ಯಾವುದೇ ರಾಷ್ಟ್ರದ ಕಾರ್ಯಾಂಗವು ತನ್ನ ರಾಷ್ಟ್ರದ ವಿದೇಶಾಂಗ ನೀತಿಯನ್ನು ಅನುಷ್ಠಾನಗೊಳಿಸುವ ಪರಮೋಚ್ಚ ಜವಾಬ್ದಾರಿ ಹೊಂದಿದೆ. ಕಾರ್ಯಾಂಗವು ತನ್ನ ದೇಶದ ತತ್ವಾದರ್ಶಗಳು ಮತ್ತು ಗುರಿಗಳಿಗೆ ತಕ್ಕಂತೆ ವಿದೇಶಾಂಗ ನೀತಿಯನ್ನು ರೂಪಿಸಿ ಕಾರ್ಯಗತಗೊಳಿಸುತ್ತದೆ. ವಿವಿಧ ರಾಷ್ಟ್ರಗಳಿಗೆ ಮತ್ತು ಅಂತರ ರಾಷ್ಟ್ರೀಯ ಸಂಘಟನೆಗಳಿಗೆ ರಾಜತಾಂತ್ರಿಕ ವರ್ಗದ ಅಧಿಕಾರಿಗಳನ್ನು ನೇಮಕ ಮಾಡಿ ಅವರುಗಳ ಮೂಲಕ ತನ್ನ ವಿದೇಶಿ ವ್ಯವಹಾರಗಳನ್ನು ನಿರ್ವಹಿಸಿಕೊಂಡು ಹೋಗುತ್ತದೆ. ಇಂತಹ ಕಾರ್ಯಗಳೆಲ್ಲವನ್ನು ನಿರ್ವಹಿಸುವ ಸಂದರ್ಭದಲ್ಲಿ ಕಾರ್ಯಾಂಗವು ಜವಾಬ್ದಾರಿಯುತವಾಗಿ ತನ್ನ ರಾಷ್ಟ್ರದ ಹಿತಾಸಕ್ತಿಗೆ ಹಾಗೂ ಗೌರವಕ್ಕೆ ಧಕ್ಕೆ ಬರದಂತೆ ಎಚ್ಚರಿಕೆಯನ್ನು ವಹಿಸುತ್ತದೆ.

ಕಾರ್ಯಾಂಗವು ಅನೇಕ ಕಾರ್ಯಗಳನ್ನು ನಿರ್ವಹಿಸುವುದರಿಂದ ಸಿ. ಎಫ್. ಸ್ಟ್ರಾಂಗ್‌ರವರು "ಕಾರ್ಯಾಂಗವು ಶಾಸಕಾಂಗಕ್ಕಿಂತಲೂ ಅಧಿಕಾರಯುಕ್ತವಾಗಿ, ಶಾಸಕಾಂಗವನ್ನು ಮರೆ ಮಾಡುತ್ತದೆ." ಎನ್ನುವ ಹೇಳಿಕೆಯು ಇದಕ್ಕೆ ಸಮಂಜಸವಾಗಿದೆ.

7.5 ಕಾರ್ಯಾಂಗದ ವಿಧಗಳು:

ಕಾರ್ಯಾಂಗದ ವಿಧಗಳನ್ನು ನಿಖರವಾಗಿ ಇಂತಿಷ್ಟೇ ಎಂದು ಹೇಳಲು ಸಾಧ್ಯವಿಲ್ಲ. ಏಕೆಂದರೆ ಒಂದೇ ರಾಷ್ಟ್ರದಲ್ಲಿ ಎರಡು ಅಥವಾ ಮೂರು ಬಗೆಯ ಕಾರ್ಯಾಂಗಗಳೂ ಏಕಕಾಲದಲ್ಲಿ ಅಸ್ತಿತ್ವದಲ್ಲಿರಬಹುದಾಗಿದೆ. ಇದರ ವಿಧಗಳು ಈ ಕೆಳಗಿನಂತಿವೆ.

1. **ನಾಮ ಮಾತ್ರ ಕಾರ್ಯಾಂಗ:**

ರಾಷ್ಟ್ರದ ಮುಖ್ಯಸ್ಥನ ಹೆಸರಿನಲ್ಲಿ ಸರ್ಕಾರದ ಮುಖ್ಯಸ್ಥರು ಅಧಿಕಾರ ಚಲಾಯಿಸುವ ಪದ್ಧತಿಯೇ ನಾಮಮಾತ್ರ ಕಾರ್ಯಾಂಗ. ಭಾರತದ ರಾಷ್ಟ್ರಪತಿ ಹಾಗೂ ಬ್ರಿಟನ್‌ನ ರಾಣಿ ಅಥವಾ ರಾಜನು ನಾಮ ಮಾತ್ರ ಕಾರ್ಯಾಂಗದ ಅಧಿಕಾರಿಯಾಗಿ ಕಾರ್ಯನಿರ್ವಹಿಸಿದರೆ, ಪ್ರಧಾನಮಂತ್ರಿಯನ್ನೊಳಗೊಂಡ ಮಂತ್ರಿಮಂಡಲವು ನೈಜ ಕಾರ್ಯಾಂಗವಾಗಿ ಅವರ ಹೆಸರಿನಲ್ಲಿ ಅಧಿಕಾರವನ್ನು ಚಲಾಯಿಸುತ್ತವೆ.

2. **ನೈಜ ಕಾರ್ಯಾಂಗ:**

ಕಾರ್ಯಾಂಗದ ಮುಖ್ಯಸ್ಥನು ವಾಸ್ತವವಾಗಿ ನೈಜ ಅಧಿಕಾರವನ್ನು ಚಲಾಯಿಸುವ ಪದ್ಧತಿಯೇ ನೈಜ ಕಾರ್ಯಾಂಗ. ಉದಾಹರಣೆಗೆ ಭಾರತದ

ಪ್ರಧಾನಮಂತ್ರಿಯನ್ನೊಳಗೊಂಡ ಮಂತ್ರಿಮಂಡಲ.

3. **ಸಂಸದೀಯ ಕಾರ್ಯಾಂಗ:**

ಕಾರ್ಯಾಂಗವು ಶಾಸನ ಸಭೆಯಿಂದ ಆಯ್ಕೆಗೊಂಡು ಅದರ ವಿಶ್ವಾಸದಲ್ಲಿಯೇ ಕಾರ್ಯನಿರ್ವಹಿಸುವ ಪದ್ಧತಿಯೇ ಸಂಸದೀಯ ಕಾರ್ಯಾಂಗವಾಗಿದೆ. ಇಲ್ಲಿ ಶಾಸಕಾಂಗ ಅದರಲ್ಲೂ ಜನತಾ ಪ್ರಾತಿನಿಧಿತೆ ಪಡೆದಿರುವಂತ ಕೆಳಮನೆಯ ವಿಶ್ವಾಸವು ಎಲ್ಲಿಯವರೆಗೆ ಇರುತ್ತದೋ ಅಲ್ಲಿಯವರೆಗೆ ಮಾತ್ರ ಕಾರ್ಯಾಂಗ ಅಧಿಕಾರವನ್ನು ಹೊಂದಿರುತ್ತದೆ. ಮಂತ್ರಿಮಂಡಲದ ವಿಶ್ವಾಸವನ್ನು ಕಳೆದುಕೊಂಡ ಕ್ಷಣದಿಂದಲೇ ಅದರ ಅಧಿಕಾರವು ಅಂತ್ಯವಾಗುತ್ತದೆ. ಈ ಪದ್ಧತಿಯಲ್ಲಿ ರಾಷ್ಟ್ರದ ಮುಖ್ಯಸ್ಥನು ನಾಮಮಾತ್ರ ಕಾರ್ಯಾಂಗದ ಅಧಿಕಾರಿಯಾಗಿದ್ದು ವಾಸ್ತವ ಅಧಿಕಾರವನ್ನು ಪ್ರಧಾನಿಯನ್ನೊಳಗೊಂಡ ಕ್ಯಾಬಿನೆಟ್ ಹೊಂದಿರುತ್ತದೆ. ಉದಾಹರಣೆಗೆ ಭಾರತ ಮತ್ತು ಇಂಗ್ಲೆಂಡ್.

4. **ಅಧ್ಯಕ್ಷೀಯ ಕಾರ್ಯಾಂಗ:**

ಕಾರ್ಯಾಂಗದ ಮುಖ್ಯಸ್ಥನು ಪ್ರಜೆಗಳಿಂದ ನೇರವಾಗಿ ಆಯ್ಕೆಯಾಗಿದ್ದು, ಶಾಸಕಾಂಗದಿಂದ ಸೃಷ್ಟಿಯಾಗಿಲ್ಲದ ಮತ್ತು ಶಾಸಕಾಂಗಕ್ಕೆ ಜವಾಬ್ದಾರಿಯುತವಾಗಿರದ ಪದ್ಧತಿಯೇ ಅಧ್ಯಕ್ಷೀಯ ಕಾರ್ಯಾಂಗ. ಡಿ. ವಿ. ವರ್ನೆರವರು ಸರ್ಕಾರದ ಮುಖ್ಯಸ್ಥ ಮತ್ತು ರಾಷ್ಟ್ರದ ಮುಖ್ಯಸ್ಥ ಒಬ್ಬನೇ ಆಗಿರುವ ಕಾರ್ಯಾಂಗವೇ ಅಧ್ಯಕ್ಷೀಯ ಕಾರ್ಯಾಂಗ ಎಂದಿದ್ದಾರೆ. ಉದಾಹರಣೆಗೆ ಅಮೇರಿಕಾ.

5. **ಏಕವ್ಯಕ್ತಿ ಕಾರ್ಯಾಂಗ:**

ಒಂದು ಕೇಂದ್ರ ಸರ್ಕಾರದ ಕೈಯಲ್ಲಿ ರಾಜ್ಯದ ಎಲ್ಲಾ ಅಧಿಕಾರಗಳು ಕೇಂದ್ರಿಕೃತವಾಗಿರುವ ಕಾರ್ಯಾಂಗವೇ ಏಕವ್ಯಕ್ತಿ ಕಾರ್ಯಾಂಗವಾಗದೆ ಪ್ರೊ. ಗಾರ್ನರ್ ರವರು "ಕೇಂದ್ರವೊಂದರ ಅಂಗಗಳಿಗೆ ಸರ್ಕಾರದ ಸಮಸ್ತ ಅಧಿಕಾರವೆಲ್ಲವೂ ಸಂವಿಧಾನಬದ್ಧವಾಗಿ ದೊರೆತಿದ್ದು ಅದರ ಮೂಲಕ ಪ್ರಾಂತೀಯ ಅಥವಾ ಸ್ಥಳೀಯ ಸರ್ಕಾರಗಳು ತಮ್ಮ ಅಧಿಕಾರ ಮತ್ತು ಸ್ವಾಯತ್ತತೆಯೊಂದಿಗೆ ಅಸ್ತಿತ್ವವನ್ನು ಪಡೆದಿರುವ ಕಾರ್ಯಾಂಗವೇ ಏಕವ್ಯಕ್ತಿ ಕಾರ್ಯಾಂಗ ಎಂದಿದ್ದಾರೆ. ಉದಾಹರಣೆಗೆ ಇಂಗ್ಲೆಂಡ್.

6. **ಬಹುವ್ಯಕ್ತಿ ಕಾರ್ಯಾಂಗ:**

ಕಾರ್ಯಾಂಗದ ಅಧಿಕಾರವೆಲ್ಲವೂ ಏಕವ್ಯಕ್ತಿಯಲ್ಲಿ ಇರದೇ, ಅನೇಕ ವ್ಯಕ್ತಿಗಳು ಅಥವಾ ಅನೇಕ ಸಂಸ್ಥೆಗಳಲ್ಲಿ ಹಂಚಲ್ಪಟ್ಟಿರುವ ಪದ್ಧತಿಯೇ ಬಹುವ್ಯಕ್ತಿ ಕಾರ್ಯಾಂಗ ಉದಾಹರಣೆಗೆ ಸ್ವಿಟ್ಜರ್ ಲ್ಯಾಂಡ್.

7. **ರಾಜಕೀಯ ಕಾರ್ಯಾಂಗ:**

ಜನತೆಯಿಂದ ನಿಗದಿತ ಅವಧಿಗೆ ಚುನಾಯಿತವಾದ ಕಾರ್ಯಾಂಗವನ್ನು ರಾಜಕೀಯ ಕಾರ್ಯಾಂಗವೆಂದು ಕರೆಯಲಾಗುತ್ತದೆ. ಉದಾಹರಣೆಗೆ ರಾಷ್ಟ್ರಗಳ ಮಂತ್ರಿಮಂಡಲ.

8. **ಶಾಶ್ವತ ಕಾರ್ಯಾಂಗ:**

ನಿವೃತ್ತಿಯಾಗುವವರೆಗೂ ಅಧಿಕಾರದಲ್ಲಿದ್ದು, ಶಾಸನಗಳನ್ನು ಅನುಷ್ಠಾನಗೊಳಿಸುವ ನೌಕರಶಾಹಿ ವರ್ಗವೇ ಶಾಶ್ವತ ಕಾರ್ಯಾಂಗ. ಇವರು ರಾಜಕೀಯ ಕಾರ್ಯಾಂಗದ ನಿರ್ದೇಶನಗಳನ್ನು ಪಾಲಿಸುವ ಹಾಗೂ ಕಾರ್ಯಗತಗೊಳಿಸುವ ಜವಾಬ್ದಾರಿಯನ್ನು ಹೊಂದಿರುತ್ತಾರೆ. ಯಾವುದೇ ಪಕ್ಷಗಳು ಸರ್ಕಾರವನ್ನು ರಚಿಸಿದರೂ ನಿರ್ದಿಷ್ಟವಾದ ಅಧಿಕಾರದ ಅವಧಿಯನ್ನು ಹೊಂದಿರುತ್ತದೆ. ಆದರೆ ಈ ನೌಕರಶಾಹಿ ವರ್ಗವು ಶಾಶ್ವತವಾಗಿದ್ದು, ರಾಜಕೀಯ ಕಾರ್ಯಾಂಗದ ಬೆನ್ನೆಲುಬಾಗಿ ಕಾರ್ಯನಿರ್ವಹಿಸುತ್ತದೆ.

ಒಟ್ಟಿನಲ್ಲಿ ರಾಷ್ಟ್ರದ ಸಂಪೂರ್ಣ ಆಡಳಿತದ ಜವಾಬ್ದಾರಿಯನ್ನು ಕಾರ್ಯಾಂಗವೇ ಹೊಂದಿರುತ್ತದೆ. ಆಧುನಿಕತೆ ಹಾಗೂ ವೈಜ್ಞಾನಿಕತೆ ಬೆಳೆದಂತೆ ಕಾರ್ಯಾಂಗದ ಜವಾಬ್ದಾರಿಯು ಹೆಚ್ಚುತ್ತಿದೆ. ಕಾರ್ಯಾಂಗವು ರಾಜ್ಯದ ಜೀವಾಳವಾಗಿದೆ. ಪ್ರಜಾಪ್ರಭುತ್ವದಲ್ಲಿ ಸೈದ್ಧಾಂತಿಕವಾಗಿ ಶಾಸಕಾಂಗವು ಶ್ರೇಷ್ಠ ಅಂಗವಾಗಿದ್ದರೂ, ವ್ಯವಹಾರಿಕವಾಗಿ ಕಾರ್ಯಾಂಗವು ಸಮಸ್ತ ರಾಜ್ಯಾಡಳಿತವನ್ನು ನಿರ್ವಹಿಸುವಲ್ಲಿ ಪ್ರಮುಖ ಪಾತ್ರವಹಿಸುತ್ತದೆ.

ಅಭ್ಯಾಸ

I. ಒಂದು ವಾಕ್ಯದಲ್ಲಿ ಉತ್ತರಿಸಿ:

1. ಕಾರ್ಯಾಂಗ ಎಂಬ ಪದವು ಯಾವ ಮೂಲ ಪದದಿಂದ ಬಂದಿದೆ?
2. ಕಾರ್ಯಾಂಗ ಎಂದರೇನು?
3. ಕಾರ್ಯಾಂಗದ ಸಂಕುಚಿತ ಅರ್ಥವನ್ನು ತಿಳಿಸಿ.
4. ಆಡಳಿತಾತ್ಮಕ ಅಂಗವೆಂದು ಯಾವುದನ್ನು ಕರೆಯಲಾಗಿದೆ?
5. ನೈಜ ಕಾರ್ಯಾಂಗದ ಮುಖ್ಯಸ್ಥರು ಯಾರು?

II. ಎರಡು ಅಥವಾ ಮೂರು ವಾಕ್ಯಗಳಲ್ಲಿ ಉತ್ತರಿಸಿ:

1. ಕಾರ್ಯಾಂಗವನ್ನು ವ್ಯಾಖ್ಯಾನಿಸಿ.
2. ಕಾರ್ಯಾಂಗದ ಯಾವುದಾದರೂ ಎರಡು ಮಹತ್ವಗಳನ್ನು ತಿಳಿಸಿ.

3. ಕಾರ್ಯಾಂಗವು ಕಲ್ಯಾಣ ರಾಜ್ಯದ ಸಾಧನೆಗೆ ಹೇಗೆ ಸಹಕಾರಿಯಾಗಿದೆ?
4. ಕಾರ್ಯಾಂಗವು ರಾಷ್ಟ್ರದ ಘನತೆಯ ಪ್ರತೀಕ ಹೇಗೆ?
5. ಮಿಲಿಟರಿ ಶಕ್ತಿಯ ಮೂಲಕ ಸ್ಥಾಪನೆಗೊಂಡ ಕಾರ್ಯಾಂಗಕ್ಕೆ ಎರಡು ಉದಾಹರಣೆ ಕೊಡಿ.
6. ನೈಜ ಮತ್ತು ವಾಸ್ತವ ಕಾರ್ಯಾಂಗಗಳ ಎರಡು ವ್ಯತ್ಯಾಸಗಳನ್ನು ತಿಳಿಸಿ.

III. ನಾಲ್ಕು ಅಥವಾ ಐದು ವಾಕ್ಯಗಳಲ್ಲಿ ಉತ್ತರಿಸಿ:

1. ಕಾರ್ಯಾಂಗದ ಯಾವುದಾದರೂ ಎರಡು ರಚನಾ ವಿಧಾನಗಳನ್ನು ವಿವರಿಸಿ.
2. ಸಂಸದೀಯ ಕಾರ್ಯಾಂಗ ವ್ಯವಸ್ಥೆಯನ್ನು ವಿವರಿಸಿ.
3. ಅಧ್ಯಕ್ಷೀಯ ಕಾರ್ಯಾಂಗ ಹೇಗೆ ರಚನೆಗೊಳ್ಳುತ್ತದೆ.

IV. ಎಂಟು ಅಥವಾ ಹತ್ತು ವಾಕ್ಯಗಳಲ್ಲಿ ಉತ್ತರಿಸಿ:

1. ಕಾರ್ಯಾಂಗದ ಮಹತ್ವವನ್ನು ವಿವರಿಸಿ.
2. ಕಾರ್ಯಾಂಗದ ಕಾರ್ಯಗಳನ್ನು ವಿವರಿಸಿ.

ಸಲಹಾತ್ಮಕ ಚಟುವಟಿಕೆ:

1. ನೈಜ ಕಾರ್ಯಾಂಗವು ನಾಮಮಾತ್ರ ಕಾರ್ಯಾಂಗಕ್ಕಿಂತ ಹೆಚ್ಚು ಪರಿಣಾಮಕಾರಿಯಾಗಿದೆ ಚರ್ಚಿಸಿ.

ಅಧ್ಯಾಯ- 8 ನ್ಯಾಯಾಂಗ (Judiciary)

ಕಲಿಕಾ ಉದ್ದೇಶಗಳು:

1. ನ್ಯಾಯಾಂಗದ ಅರ್ಥವನ್ನು ತಿಳಿಯುವುದು.
2. ನ್ಯಾಯಾಂಗದ ಮಹತ್ವವನ್ನು ಅರಿಯುವುದು.
3. ನ್ಯಾಯಾಂಗದ ರಚನೆಯನ್ನು ತಿಳಿಯುವುದು.
4. ನ್ಯಾಯಾಂಗವು ನಿರ್ವಹಿಸುತ್ತಿರುವ ಕಾರ್ಯಗಳನ್ನು ಮೆಚ್ಚಿಕೊಳ್ಳುವುದು.

"ಉತ್ಕೃಷ್ಟ ನ್ಯಾಯಾಂಗಕ್ಕೂ ದಕ್ಷ ಸರ್ಕಾರಕ್ಕೂ ನಿಕಟ ಸಂಬಂಧವಿದೆ" -**ಲಾರ್ಡ್ ಬ್ರೈಸ್**

"ನ್ಯಾಯಿಕ ಆಡಳಿತವು ಸರ್ಕಾರದ ಆಧಾರ ಸ್ಥಂಭವಿದ್ದಂತೆ" -**ಜಾರ್ಜ್ ವಾಷಿಂಗ್‌ಟನ್**

ಪೀಠಿಕೆ:

ರಾಜಕೀಯ ವ್ಯವಸ್ಥೆಯಲ್ಲಿ ನ್ಯಾಯಾಂಗವು ಪ್ರಮುಖವಾದುದಾಗಿದೆ. ಶಾಸಕಾಂಗದಿಂದ ರೂಪಿಸಲ್ಪಟ್ಟ ಕಾನೂನುಗಳನ್ನು, ಕಾರ್ಯಾಂಗದ ಆಜ್ಞೆಗಳನ್ನು ವಿಶ್ಲೇಷಿಸುವ ಹಾಗೂ ನ್ಯಾಯಾಡಳಿತವನ್ನು ನಿರ್ವಹಿಸುವ ಸರ್ಕಾರದ ಮೂರನೇ ಅಂಗವೇ ನ್ಯಾಯಾಂಗ. ಇದನ್ನು ರಾಷ್ಟ್ರದ ಕಾವಲುಗಾರನೆಂದು ಸಹ ಕರೆಯಲಾಗಿದೆ. ದುಷ್ಟರ- ಶಿಕ್ಷೆ, ಶಿಷ್ಟರ-ಪರಿಪಾಲನೆ ಇದರ ಆದ್ಯ ಕರ್ತವ್ಯವಾಗಿದೆ. ಸುವ್ಯವಸ್ಥಿತ ರಾಷ್ಟ್ರ ನಿರ್ಮಾಣ ನ್ಯಾಯಾಂಗ ವ್ಯವಸ್ಥೆಯಿಂದ ಮಾತ್ರ ಸಾಧ್ಯ.

8.1 ಅರ್ಥ:

ನ್ಯಾಯಾಂಗ ಅಥವಾ (Judiciary) ಎಂಬ ಪದವು ಲ್ಯಾಟಿನ್ ಭಾಷೆಯ ಜಸ್ಟಿಶಿಯಾ (justitia) ಎಂಬ ಪದದಿಂದ ಬಂದಿದೆ.

ವ್ಯಾಖ್ಯೆ:

ಜಾನ್‌ರಾಲ್ ರವರ ಪ್ರಕಾರ "ಪ್ರಜೆಗಳ ಹಕ್ಕುಗಳನ್ನು ನಿರ್ಧರಿಸಿ ಸಂರಕ್ಷಿಸುವ, ಅಪರಾಧಿಗಳನ್ನು ಶಿಕ್ಷಿಸುವ, ನ್ಯಾಯವನ್ನು ಎತ್ತಿಹಿಡಿಯುವ ಮತ್ತು ಮುಗ್ಧರನ್ನು ದುರಾಕ್ರಮಣದ ಅಪಾಯದಿಂದ ರಕ್ಷಿಸುವ ಸರ್ಕಾರದ ಅಂಗವೇ ನ್ಯಾಯಾಂಗ".

8.2 ಮಹತ್ವ:

‘ಕತ್ತಲೆಯಿಂದ ನ್ಯಾಯದ ದ್ವೀಪವು ಹೊರಹೊರಟರೆ ಕಗ್ಗತ್ತಲೆಯ ಕ್ರೌರ್ಯ ಏನೆಂಬುವುದು ಮನವರಿಕೆಯಾಗುತ್ತದೆ’ ಎಂಬ ಲಾರ್ಡ್‌ಬ್ರೈಸ್‌ರವರ ಹೇಳಿಕೆ ನ್ಯಾಯಾಂಗದ ಮಹತ್ವ ಏನೆಂಬುದನ್ನು ತಿಳಿಸುತ್ತದೆ. ಈ ಕೆಳಕಂಡ ಅಂಶಗಳು ಇದನ್ನು ದೃಢಪಡಿಸುತ್ತವೆ.

1. **ಕಾನೂನನ್ನು ರಕ್ಷಿಸುವುದು.**

ಮನುಷ್ಯರು ಎಷ್ಟೇ ಉತ್ತಮರಾದರೂ ಸಹ ಕಾನೂನಿನ ಭಯವಿಲ್ಲದಿದ್ದಾಗ ಸ್ವಾಭಾವಿಕವಾಗಿ ಕಾನೂನುಗಳಿಗೆ ಅವಿಧೇಯತೆಯನ್ನು ತೋರುತ್ತಾರೆ. ಇಂತಹ ಸಂದರ್ಭದಲ್ಲಿ ಕಾನೂನನ್ನು ಧಿಕ್ಕರಿಸಿದ ವ್ಯಕ್ತಿಗಳಿಗೆ ಶಿಕ್ಷೆ ನೀಡುವ ಮೂಲಕ ನ್ಯಾಯಾಂಗವೂ ಜನರು ತಮ್ಮ ತಮ್ಮ ಮಿತಿಗಳನ್ನು ಅರಿತುಕೊಂಡು ಸಮಾಜದಲ್ಲಿ ಬದುಕಲು ಅವಕಾಶವನ್ನು ಕಲ್ಪಿಸುತ್ತದೆ.

2. **ಹಕ್ಕು ಮತ್ತು ಸ್ವಾತಂತ್ರ್ಯಗಳನ್ನು ರಕ್ಷಿಸುವುದು.**

ನ್ಯಾಯಾಂಗಕ್ಕೆ ಸರ್ಕಾರದ ಹಾಗೂ ವ್ಯಕ್ತಿಗಳ ಆಕ್ರಮಣದಿಂದ ಪ್ರಜೆಗಳ ಹಕ್ಕು ಮತ್ತು ಸ್ವಾತಂತ್ರ್ಯಗಳನ್ನು ಸಂರಕ್ಷಿಸುವ ಹೊಣೆಗಾರಿಕೆ ಇದೆ. ಆದ್ದರಿಂದ ಇದನ್ನು ‘ಹಕ್ಕುಗಳ ಸಂರಕ್ಷಕ’ ಎಂದೇ ವರ್ಣಿಸಲಾಗಿದೆ. ಇದು ಸರ್ಕಾರವನ್ನು ತನ್ನ ಅಧಿಕಾರ ವ್ಯಾಪ್ತಿ ಮೀರದಂತೆ ನಿರ್ಬಂಧಿಸುತ್ತದೆ. ಈ ಮೂಲಕ ಸರ್ಕಾರದ ನಿರಂಕುಶತೆಯನ್ನು ನಿಯಂತ್ರಿಸುತ್ತದೆ. ಪ್ರಜೆಗಳ ಸ್ವಾತಂತ್ರ್ಯವನ್ನು ರಕ್ಷಿಸುತ್ತದೆ.

3. **ನಾಗರಿಕ ಭದ್ರತೆ ಮತ್ತು ಕಲ್ಯಾಣವನ್ನು ಸಾಧಿಸುವುದು.**

ಪ್ರಜೆಗಳ ಯೋಗಕ್ಷೇಮ ಹಾಗೂ ಭದ್ರತೆಯು ಒಂದು ರಾಷ್ಟ್ರದ ನ್ಯಾಯಾಂಗ ವ್ಯವಸ್ಥೆಯನ್ನು ಅವಲಂಬಿಸಿದೆ. ಸ್ವತಂತ್ರವಾಗಿ ಮತ್ತು ನಿಷ್ಪಕ್ಷಪಾತವಾಗಿ ಜನರ ಪ್ರಾಣ, ಸ್ವಾತಂತ್ರ್ಯ ಹಾಗೂ ಆಸ್ತಿಯನ್ನು ರಕ್ಷಿಸುವ ಹೊಣೆ ನ್ಯಾಯಾಂಗದ್ದಾಗಿದೆ. ಎಲ್ಲಿ ನ್ಯಾಯಾಂಗವು ಸರಿಯಾಗಿ ಕೆಲಸ ನಿರ್ವಹಿಸುತ್ತದೆಯೋ, ಅಲ್ಲಿ ಜನರಲ್ಲಿ ಭದ್ರತಾ ಭಾವನೆ ಮೂಡುತ್ತದೆ. ಇದು ಸಮಾಜದ ಅಭಿವೃದ್ಧಿಗೂ ಸಹಕಾರಿಯಾಗುತ್ತದೆ.

4. **ರಾಜ್ಯದಲ್ಲಿ ಸುವ್ಯವಸ್ಥೆಯನ್ನು ಸ್ಥಾಪಿಸುವುದು.**

ನ್ಯಾಯಾಂಗವು ರಾಜ್ಯದಲ್ಲಿ ಕಾನೂನನ್ನು ಜಾರಿಗೊಳಿಸಿ ಅದನ್ನು ಪಾಲಿಸದವರನ್ನು ಶಿಕ್ಷೆಗೆ ಗುರಿಪಡಿಸುತ್ತದೆ. ನ್ಯಾಯಾಂಗವು ನಾಗರಿಕ ಕಾನೂನು, ಅಪರಾಧಿಕ ಕಾನೂನು ಮತ್ತು ಸಾಂವಿಧಾನಿಕ ಕಾನೂನಿನ ಬಗ್ಗೆಯೂ ವ್ಯವಹರಿಸುತ್ತದೆ. ಈ ಮೂಲಕ ರಾಜ್ಯದಲ್ಲಿ ಸುವ್ಯವಸ್ಥೆಯನ್ನು ಪ್ರತಿಪಾದಿಸುತ್ತದೆ.

5. **ಸಾರ್ವಜನಿಕರಲ್ಲಿ ನಂಬಿಕೆಯನ್ನು ಮೂಡಿಸುವುದು.**

ಸಂವಿಧಾನದ ಸಾಮರ್ಥ್ಯವು ನ್ಯಾಯಾಂಗದ ಪರಿಣಾಮಕಾರಿ ಕಾರ್ಯನಿರ್ವಹಣೆಯನ್ನು ಅವಲಂಬಿಸಿದೆ. ಸಂವಿಧಾನದಲ್ಲಿ ಜನರ ವಿಶ್ವಾಸ ಉಳಿಯುವಂತೆ ನೋಡಿಕೊಳ್ಳುವುದು ನ್ಯಾಯಾಂಗದ ಜವಾಬ್ದಾರಿಯಾಗಿದೆ. ಇದು ಕಾನೂನಿನ ದೃಷ್ಟಿಯಲ್ಲಿ ಎಲ್ಲರೂ ಸಮಾನರು ಎಂಬ ತತ್ವವನ್ನು ಜೀವಂತಗೊಳಿಸುತ್ತದೆ.

“ದೇಶದ ಸಾಮಾಜಿಕ ಮತ್ತು ಆರ್ಥಿಕ ಕಾರ್ಯಕ್ರಮಗಳು ದುರ್ಬಲ ಮತ್ತು ಬಡವರ್ಗದ ಪರ ಇರುವುದನ್ನು ಖಾತರಿಪಡಿಸಿಕೊಳ್ಳುವುದು ನ್ಯಾಯಾಲಯದ ಏಕೈಕ ಹೆಬ್ಬಯಕೆಯಾಗಿದೆ” ಎಂಬ ಜಸ್ಟೀಸ್ ಭಗವತಿಯವರ ಹೇಳಿಕೆ ನ್ಯಾಯಾಂಗದ ಮಹತ್ವವನ್ನು ಹಿಮ್ಮಡಿಗೊಳಿಸುತ್ತದೆ.

8.3 ರಚನೆ:

ನ್ಯಾಯಾಂಗದ ರಚನೆಯು ಒಂದು ರಾಷ್ಟ್ರದಿಂದ ಮತ್ತೊಂದು ರಾಷ್ಟ್ರಕ್ಕೆ ಭಿನ್ನವಾಗಿದೆ. ಪ್ರತಿಯೊಂದು ರಾಷ್ಟ್ರವು ಆಯಾಯ ದೇಶದ ರಾಜಕೀಯ ವ್ಯವಸ್ಥೆಗೆ ಹೊಂದಿಕೊಂಡಂತೆ ನ್ಯಾಯಾಂಗವನ್ನು ರಚಿಸಿಕೊಂಡಿರುತ್ತವೆ. ಕೆಲವು ರಾಷ್ಟ್ರಗಳಲ್ಲಿ ಏಕೀಕೃತ ನ್ಯಾಯಾಂಗ ವ್ಯವಸ್ಥೆ ಇದ್ದರೆ, ಇನ್ನೂ ಕೆಲವು ರಾಷ್ಟ್ರಗಳಲ್ಲಿ ಸಂಯುಕ್ತ ನ್ಯಾಯಾಂಗ ವ್ಯವಸ್ಥೆಯನ್ನು ಕಾಣಬಹುದಾಗಿದೆ.

ಏಕೀಕೃತ ನ್ಯಾಯಾಂಗ ವ್ಯವಸ್ಥೆಯ ರಚನೆ:

ಏಕೀಕೃತ ನ್ಯಾಯಾಂಗ ವ್ಯವಸ್ಥೆಯಲ್ಲಿ ರಾಷ್ಟ್ರದೊಳಗಿನ ನ್ಯಾಯಾಲಯಗಳೆಲ್ಲವೂ ಶ್ರೇಣೀಕೃತ ತತ್ವದ ಆಧಾರದ ಮೇಲೆ ರಚಿತಗೊಂಡು ಕಾರ್ಯನಿರ್ವಹಿಸುತ್ತವೆ. ಏಕೀಕೃತ ನ್ಯಾಯಾಂಗ ವ್ಯವಸ್ಥೆಯನ್ನು ಹೊಂದಿರುವ ದೇಶಗಳಲ್ಲಿ ಕೇಂದ್ರಕ್ಕೆ ಸಂಬಂಧಿಸಿದ ವಿವಾದಗಳನ್ನು ಸುಪ್ರೀಂಕೋರ್ಟ್ ಬಗೆಹರಿಸಿದರೆ, ರಾಜ್ಯಕ್ಕೆ ಸಂಬಂಧಿಸಿದ ವಿವಾದಗಳನ್ನು ರಾಜ್ಯದ ಉಚ್ಚನ್ಯಾಯಾಲಯಗಳು, ಜಿಲ್ಲೆಗೆ ಸಂಬಂಧಿಸಿದಂತೆ ಸೆಷನ್ಸ್ ನ್ಯಾಯಾಲಯಗಳು, ತಾಲ್ಲೂಕು ಮಟ್ಟದಲ್ಲಿ ಮ್ಯಾಜಿಸ್ಟ್ರೇಟ್ ಕೋರ್ಟ್‌ಗಳು ನ್ಯಾಯತೀರ್ಮಾನ ಮಾಡುತ್ತವೆ. ಇವುಗಳೆಲ್ಲವೂ ಏಕ ಆದೇಶಕ್ಕೆ ಬದ್ಧವಾಗಿರುತ್ತವೆ. **ಉದಾಹರಣೆಗೆ ಭಾರತ, ಕೆನಡ.**

ಅಧೀನ ನ್ಯಾಯಾಲಯಗಳು ತೀರ್ಪುಕೊಡುವ ಸಂದರ್ಭದಲ್ಲಿ ಸರ್ವೋಚ್ಚ ನ್ಯಾಯಾಲಯದ ಮತ್ತು ಉಚ್ಚನ್ಯಾಯಾಲಯಗಳ ತೀರ್ಪುಗಳನ್ನು ನಿದರ್ಶನಗಳನ್ನಾಗಿ ಇಟ್ಟುಕೊಂಡಿರುತ್ತವೆ. ಸರ್ವೋಚ್ಚ ನ್ಯಾಯಾಲಯವೇ ತೀರ್ಪುಗಳನ್ನು ನಿದರ್ಶನಗಳನ್ನಾಗಿ ಇಟ್ಟುಕೊಂಡಿರುತ್ತವೆ. ಸರ್ವೋಚ್ಚ ನ್ಯಾಯಾಲಯವೇ ಅಂತಿಮ ಮನವಿಯ ನ್ಯಾಯಾಲಯವಾಗಿರುತ್ತದೆ. ಎಲ್ಲಾ ಸ್ವರೂಪದ ಪ್ರಕರಣಗಳ ವಿಲೇವಾರಿ ಮಾಡಿ ನೀಡಿದ ತೀರ್ಪುಗಳ ಮರುಪರಿಶೀಲನೆಗೆ ಸರ್ವೋಚ್ಚನ್ಯಾಯಾಲಯದ ಮೊರೆ ಹೋಗುವುದು ಇಲ್ಲಿ ಅನಿವಾರ್ಯ. ಸರ್ವೋಚ್ಚ ನ್ಯಾಯಾಲಯದ ತೀರ್ಪುಗಳನ್ನು ಮರುಪರಿಶೀಲಿಸುವ ಮತ್ಯಾವ ನ್ಯಾಯಾಲಯವು ಇಲ್ಲಿ ಅಸ್ತಿತ್ವದಲ್ಲಿರುವುದಿಲ್ಲ.

ಸಂಯುಕ್ತ ನ್ಯಾಯಾಂಗ ವ್ಯವಸ್ಥೆಯ ರಚನೆ:

ಸಂಯುಕ್ತ ನ್ಯಾಯಾಂಗ ವ್ಯವಸ್ಥೆಯಲ್ಲಿ ಕೇಂದ್ರ ಮತ್ತು ರಾಜ್ಯಗಳು ಪ್ರತ್ಯೇಕ ಹಾಗು ಸ್ವತಂತ್ರ ನ್ಯಾಯಾಂಗ ವ್ಯವಸ್ಥೆಯನ್ನು ಹೊಂದಿರುತ್ತದೆ. ರಾಜ್ಯಗಳಲ್ಲಿನ ಉಚ್ಚ ನ್ಯಾಯಾಲಯಗಳು ರಾಜ್ಯಗಳಿಗೆ ಸಂಬಂಧಿಸಿದ ಕಾರ್ಯಗಳನ್ನು ಸ್ವತಂತ್ರವಾಗಿ ನಿರ್ವಹಿಸುತ್ತವೆ. ಉದಾಹರಣೆಗೆ ಅಮೆರಿಕ ಸಂಯುಕ್ತ ಸಂಸ್ಥಾನದಲ್ಲಿ ಕೇಂದ್ರದಲ್ಲಿ ಸರ್ವೋಚ್ಚ ನ್ಯಾಯಾಲಯವಿದೆ. ಇದು ಸಂವಿಧಾನಾತ್ಮಕವಾಗಿ ರಚನೆಗೊಂಡಿರುತ್ತದೆ. ರಾಜ್ಯಗಳಲ್ಲಿನ ನ್ಯಾಯಾಲಯಗಳನ್ನು ಕೇಂದ್ರ ಶಾಸನ ಸಭೆ (ಕಾಂಗ್ರೆಸ್) ಯ ಶಾಸನಗಳನ್ವಯ ರಚಿಸಲಾಗುತ್ತದೆ. ಇವುಗಳು ರಾಜ್ಯಗಳಲ್ಲಿ ಸ್ವತಂತ್ರವಾಗಿ ಕಾರ್ಯನಿರ್ವಹಿಸುತ್ತವೆ.

ಸ್ವಿಟ್ಜರ್ಲ್ಯಾಂಡ್ನಲ್ಲಿಯೂ ಸಂಯುಕ್ತ ನ್ಯಾಯಾಂಗ ವ್ಯವಸ್ಥೆ ಇದೆ. ಕೇಂದ್ರ ಮತ್ತು ರಾಜ್ಯಗಳೆರಡು ಸ್ವತಂತ್ರವಾದ ನ್ಯಾಯಾಂಗ ವ್ಯವಸ್ಥೆಯನ್ನು ಹೊಂದಿರುತ್ತವೆ. ನ್ಯಾಯಾಧೀಶರುಗಳನ್ನು ಅಲ್ಲಿಯೇ ಫೆಡರಲ್ ಅಸೆಂಬ್ಲಿ ಆಯ್ಕೆ ಮಾಡುತ್ತದೆ. ಸಂವಿಧಾನಿಕ ಕಾನೂನಿನ ಬಗ್ಗೆಯೂ ವ್ಯವಹರಿಸುತ್ತದೆ. ಈ ಮೂಲಕ ರಾಜ್ಯದಲ್ಲಿ ಸುವ್ಯವಸ್ಥೆಯನ್ನು ಪ್ರತಿಪಾದಿಸುತ್ತದೆ.

ಸಾರ್ವಜನಿಕರಲ್ಲಿ ನಂಬಿಕೆಯನ್ನು ಮೂಡಿಸುವುದು.

ಸಂವಿಧಾನದ ಸಾಮರ್ಥ್ಯವು ನ್ಯಾಯಾಂಗದ ಪರಿಣಾಮಕಾರಿ ಕಾರ್ಯನಿರ್ವಹಣೆಯನ್ನು ಅವಲಂಬಿಸಿದೆ. ಸಂವಿಧಾನದಲ್ಲಿ ಜನರ ವಿಶ್ವಾಸ ಉಳಿಯುವಂತೆ ನೋಡಿಕೊಳ್ಳುವುದು ನ್ಯಾಯಾಂಗದ ಜವಾಬ್ದಾರಿಯಾಗಿದೆ. ಇದು ಕಾನೂನಿನ ದೃಷ್ಟಿಯಲ್ಲಿ ಎಲ್ಲರೂ ಸಮಾನರು ಎಂಬ ತತ್ವವನ್ನು ಜೀವಂತಗೊಳಿಸುತ್ತದೆ.

“ದೇಶದ ಸಾಮಾಜಿಕ ಮತ್ತು ಆರ್ಥಿಕ ಕಾರ್ಯಕ್ರಮಗಳು ದುರ್ಬಲ ಮತ್ತು ಬಡವರ್ಗದ ಪರ ಇರುವುದನ್ನು ಖಾತರಿಪಡಿಸಿಕೊಳ್ಳುವುದು ನ್ಯಾಯಾಲಯದ ಏಕೈಕ ಹೆಬ್ಬಯಕೆಯಾಗಿದೆ” ಎಂಬ ಜಸ್ಟೀಸ್ ಭಗವತಿಯವರ ಹೇಳಿಗೆ ನ್ಯಾಯಾಂಗದ ಮಹತ್ವವನ್ನು ಹಿಮ್ಮಡಿಗೊಳಿಸುತ್ತದೆ.

ಸಂಯುಕ್ತ ನ್ಯಾಯಿಕ ವ್ಯವಸ್ಥೆಯಲ್ಲಿ ಕೇಂದ್ರದ ವಿಷಯಕ್ಕೆ ಸಂಬಂಧಿಸಿದಂತೆ ಸುಪ್ರೀಂಕೋರ್ಟ್ ಹಾಗೂ ರಾಜ್ಯದ ವಿಷಯಕ್ಕೆ ಸಂಬಂಧಿಸಿದಂತೆ ಆಯಾ ರಾಜ್ಯಗಳ ಉಚ್ಚನ್ಯಾಯಾಲಯಗಳು ನ್ಯಾಯಿಕ ಕಾರ್ಯವನ್ನು ನಿರ್ವಹಿಸುತ್ತವೆ. ಆದರೆ ಸುಪ್ರೀಂಕೋರ್ಟ್ ರಾಜ್ಯದ ವಿಷಯಕ್ಕೆ ಸಂಬಂಧಿಸಿದಂತೆ ಯಾವುದೇ ನಿರ್ಣಯಗಳನ್ನು ಕೈಗೊಳ್ಳುವುದಿಲ್ಲ. ಉದಾಹರಣೆಗೆ ಅಮೆರಿಕಾ.

8.4 ನ್ಯಾಯಾಂಗದ ಕಾರ್ಯಗಳು:

ನ್ಯಾಯಾಂಗವು ಸರ್ಕಾರದ ವ್ಯವಸ್ಥೆಯಲ್ಲಿ ಪ್ರಮುಖ ಸ್ಥಾನವನ್ನು ಪಡೆದಿದೆ. ಇದು ನ್ಯಾಯಿಕ ಕಾರ್ಯವನ್ನು ನಿರ್ವಹಿಸುವ ಮೂಲಕ ಸಮಾಜದ ಸರ್ವತೋಮುಖ ಅಭಿವೃದ್ಧಿಗೆ ಶ್ರಮಿಸುತ್ತದೆ. ಇದರ ಕಾರ್ಯಗಳು ಇಂತಿವೆ.

1. **ಕಾನೂನನ್ನು ಅರ್ಥೈಸುವುದು.**

ಕಾನೂನುಗಳು ಅಸ್ಪಷ್ಟವಾಗಿದ್ದಾಗ, ವಿವರಣೆ ಇಲ್ಲದೆ ಬಹಳ ಸಂಕ್ಷಿಪ್ತವಾಗಿದ್ದಾಗ ನ್ಯಾಯಾಂಗವು ಇಂತಹ ಕಾಯಿದೆಗಳನ್ನು ಆಧುನಿಕ ಕಾಲಕ್ಕೆ ತಕ್ಕಂತೆ ಅರ್ಥವಿವರಣೆ ನೀಡುತ್ತದೆ. 'ನಾವು ಸಂವಿಧಾನದ ಅಡಿಯಲ್ಲಿದ್ದೇವೆ, ಆದರೆ ಸಂವಿಧಾನ ನ್ಯಾಯಾಧೀಶರು ಹೇಳಿದ ಹಾಗೆ' ಎನ್ನುವ ಜಸ್ಟೀಸ್ ಹ್ಯೂಗ್ಸ್‌ರ ಹೇಳಿಕೆ ಇದನ್ನು ಸಮರ್ಥಿಸುತ್ತದೆ.

2. **ಕಾನೂನಿನ ಅನ್ವಯ ನ್ಯಾಯ ತೀರ್ಮಾನ.**

ನ್ಯಾಯಾಂಗದ ಮುಖ್ಯ ಕಾರ್ಯವೆಂದರೆ ಆಚರಣೆಯಲ್ಲಿರುವ ಕಾನೂನಿಗೆ ಬದ್ಧವಾಗಿ ನ್ಯಾಯತೀರ್ಮಾನ ಮಾಡುವುದಾಗಿದೆ. ಇದು ವ್ಯಕ್ತಿ-ವ್ಯಕ್ತಿಗಳ ನಡುವೆ ಅಥವಾ ವ್ಯಕ್ತಿ ಮತ್ತು ಸರ್ಕಾರದ ನಡುವಿನ ವಿವಾದಗಳನ್ನು ನ್ಯಾಯ ನಿರ್ಣಯದ ಮೂಲಕ ಬಗೆಹರಿಸುವ ಕಾರ್ಯವನ್ನು ನಿರ್ವಹಿಸುತ್ತದೆ.

3. **ಆಜ್ಞೆಗಳನ್ನು ಹೊರಡಿಸುವುದು.**

ಪ್ರಜೆಗಳು ತಮ್ಮ ಹಕ್ಕುಗಳಿಗೆ ಚ್ಯುತಿ ಉಂಟಾದಾಗ ನ್ಯಾಯಾಲಯದ ಮೊರೆ ಹೋಗಬಹುದಾಗಿದೆ. ಅವರ ಹಕ್ಕುಗಳ ರಕ್ಷಣೆಗಾಗಿ ನ್ಯಾಯಾಲಯವು ಆಜ್ಞೆಗಳನ್ನು ಹೊರಡಿಸಿ ಹಕ್ಕುಗಳನ್ನು ರಕ್ಷಿಸುತ್ತದೆ.

4. **ಸಲಹೆ ನೀಡುವುದು.**

ಭಾರತದಂತಹ ದೇಶದಲ್ಲಿ ಕ್ಲಿಷ್ಟ ಪ್ರಶ್ನೆಗಳು ಎದುರಾದಾಗ ನ್ಯಾಯಾಂಗವು ಸರ್ಕಾರಕ್ಕೆ ಸಲಹೆ ನೀಡುತ್ತದೆ. ಆದರೆ ಈ ಕಾರ್ಯವನ್ನು ಮಾಡಲೇಬೇಕೆಂಬ ನಿಯಮಗಳೇನೂ ಇಲ್ಲ. ಇದು ಅಮೇರಿಕಾದಲ್ಲಿ ಆಚರಣೆಯಲ್ಲಿಲ್ಲ.

5. **ನ್ಯಾಯಿಕ ವಿಮರ್ಶೆ.**

ಶಾಸಕಾಂಗದಿಂದ ರಚಿಸಲ್ಪಟ್ಟ ಶಾಸನಗಳು ಮತ್ತು ಕಾರ್ಯಾಂಗದಿಂದ ಹೊರಡಿಸಲ್ಪಟ್ಟ ಆಜ್ಞೆಗಳ ಸಂವಿಧಾನ ಬದ್ಧತೆಯನ್ನು ಪರಿಶೀಲಿಸಿ, ಅವುಗಳ ಸಿಂಧುತ್ವ ಮತ್ತು ಅಸಿಂಧುತ್ವವನ್ನು ಘೋಷಿಸುವ ಅಧಿಕಾರವೇ ನ್ಯಾಯಿಕ ವಿಮರ್ಶೆಯಾಗಿದೆ. ಶಾಸಕಾಂಗ ಮತ್ತು ಕಾರ್ಯಾಂಗಗಳು

ತಮ್ಮ ಅಧಿಕಾರವನ್ನು ದುರುಪಯೋಗಪಡಿಸಿಕೊಳ್ಳುವುದನ್ನು ತಡೆಯಲು ನ್ಯಾಯಾಂಗವು ನ್ಯಾಯಿಕ ವಿಮರ್ಶೆಯ ಅಧಿಕಾರವನ್ನು ಹೊಂದಿರುತ್ತದೆ. ಉದಾಹರಣೆಗೆ ಅಮೆರಿಕ.

ಒಟ್ಟಿನಲ್ಲಿ ನ್ಯಾಯಾಂಗವು ಸಮಗ್ರ ಸಮಾಜದ ಶಾಂತಿ ಸುವ್ಯವಸ್ಥೆಯನ್ನು ಕಾಪಾಡುವ ಪೂರ್ಣ ಹೊಣೆಯನ್ನು ಹೊಂದಿದೆ. ಇದು ಶಾಸಕಾಂಗದ ಶಾಸನಗಳು, ಕಾರ್ಯಾಂಗದ

ಆಜ್ಞೆಗಳು, ಪ್ರಜೆಗಳ ಹಿತಾಸಕ್ತಿಗೆ ಅನುಗುಣವಾಗಿರುವಂತೆ ನೋಡಿಕೊಳ್ಳುತ್ತದೆ. ಹಾಗಾಗಿ ಸ್ವತಂತ್ರ, ನಿಷ್ಪಕ್ಷಪಾತ ಮತ್ತು ನಿರ್ಭೀತ ನ್ಯಾಯಾಂಗವು ಸ್ವಸ್ಥ ಸಮಾಜದ ಕೈದೀವಿಗೆಯಾಗಿದೆ.

ಅಭ್ಯಾಸ

I. ಒಂದು ವಾಕ್ಯದಲ್ಲಿ ಉತ್ತರಿಸಿ:

1. ನ್ಯಾಯಾಂಗದ ಮೂಲಪದ ಯಾವುದು?
2. ನ್ಯಾಯಾಂಗದ ಆದ್ಯ ಕರ್ತವ್ಯವೇನು?
3. ಹಕ್ಕುಗಳ ರಕ್ಷಕ ಎಂದು ಯಾವುದನ್ನು ಕರೆಯಲಾಗುತ್ತದೆ?
4. "ನಾವು ಸಂವಿಧಾನದ ಅಡಿಯಲ್ಲಿದ್ದೇವೆ, ಆದರೆ ಸಂವಿಧಾನ ನ್ಯಾಯಾಧೀಶರು ಹೇಳಿದ ಹಾಗೆ" ಎಂದು ಹೇಳಿದವರು ಯಾರು?

II. ಎರಡು ಅಥವಾ ಮೂರು ವಾಕ್ಯಗಳಲ್ಲಿ ಉತ್ತರಿಸಿ:

1. ನ್ಯಾಯಾಂಗ ಕುರಿತು ಜಾನ್‌ರಾಲ್ಸ್‌ರವರ ವ್ಯಾಖ್ಯೆಯನ್ನು ಬರೆಯಿರಿ.
2. ನ್ಯಾಯಾಂಗದ ಯಾವುದಾದರೂ ಎರಡು ಕಾರ್ಯಗಳನ್ನು ತಿಳಿಸಿ?
3. ನ್ಯಾಯಾಂಗದ ಎರಡು ಮಹತ್ವವನ್ನು ಪಟ್ಟಿಮಾಡಿ.
4. ನ್ಯಾಯಿಕ ವಿಮರ್ಶೆ ಎಂದರೇನು?

III. ನಾಲ್ಕು ಅಥವಾ ಐದು ವಾಕ್ಯಗಳಲ್ಲಿ ಉತ್ತರಿಸಿ:

1. ನ್ಯಾಯಾಂಗದ ರಚನೆಯನ್ನು ತಿಳಿಸಿ.
2. ನ್ಯಾಯಾಂಗವು ಹಕ್ಕು ಮತ್ತು ಸ್ವಾತಂತ್ರ್ಯಗಳನ್ನು ಹೇಗೆ ರಕ್ಷಿಸುತ್ತದೆ?
3. ನ್ಯಾಯಾಂಗವು ಕಾನೂನನ್ನು ಯಾವ ರೀತಿಯಾಗಿ ಅರ್ಥೈಸುತ್ತದೆ?

IV. ಎಂಟು ಅಥವಾ ಹತ್ತು ವಾಕ್ಯಗಳಲ್ಲಿ ಉತ್ತರಿಸಿ:

1. ನ್ಯಾಯಾಂಗದ ಕಾರ್ಯಗಳನ್ನು ವಿವರಿಸಿ.
2. ನ್ಯಾಯಾಂಗದ ಮಹತ್ವವನ್ನು ವಿವರಿಸಿ.

ಸಲಹಾತ್ಮಕ ಚಟುವಟಿಕೆಗಳು:

1. ನಿಮ್ಮ ತರಗತಿಯಲ್ಲಿ ಅಣಕು ನ್ಯಾಯಾಲಯವನ್ನು ಏರ್ಪಡಿಸಿ.
2. ನಿಮ್ಮ ಸ್ಥಳೀಯ ನ್ಯಾಯಾಲಯಕ್ಕೆ ಭೇಟಿ ನೀಡಿ ಅದರ ಕಾರ್ಯಕಲಾಪಗಳನ್ನು ವೀಕ್ಷಿಸಿ.

ಅಧ್ಯಾಯ-9 ರಾಜಕೀಯ ಪಕ್ಷಗಳು (Political Parties)

ಕಲಿಕಾ ಉದ್ದೇಶಗಳು

1. ರಾಜಕೀಯ ಪಕ್ಷದ ಅರ್ಥ ಮತ್ತು ವ್ಯಾಖ್ಯೆಗಳನ್ನು ತಿಳಿಯುವುದು.
2. ರಾಜಕೀಯ ಪಕ್ಷಗಳ ಮಹತ್ವವನ್ನು ಅರಿಯುವುದು.
3. ರಾಜಕೀಯ ಪಕ್ಷಗಳ ವಿಧಗಳನ್ನು ಗುರ್ತಿಸುವುದು.
4. ರಾಜಕೀಯ ಪಕ್ಷಗಳ ಕಾರ್ಯವನ್ನು ಅರ್ಥೈಸಿಕೊಳ್ಳುವುದು.

"ಸಾರ್ವಜನಿಕ ವಿಷಯಗಳ ಬಗ್ಗೆ ಒಂದೇ ಅಭಿಪ್ರಾಯವನ್ನು ಹೊಂದಿದ್ದು, ರಾಜಕೀಯವಾಗಿ ಸಂಘಟಿತವಾಗಿದ್ದು, ಚುನಾವಣೆಯ ಮೂಲಕ ಅಧಿಕಾರವನ್ನು ಪಡೆಯಲು ಹೋರಾಡುವ ಜನ ಸಮೂಹವೇ ರಾಜಕೀಯ ಪಕ್ಷ" **ಸ್ಟಿಫನ್ ಲೀಕಾಕ್**

ಪೀಠಿಕೆ:

ಆಧುನಿಕ ರಾಷ್ಟ್ರ ರಾಜ್ಯಗಳಲ್ಲಿ ಅಸ್ತಿತ್ವದಲ್ಲಿರುವ ರಾಜಕೀಯ ವ್ಯವಸ್ಥೆಗಳಲ್ಲಿ ರಾಜಕೀಯ ಪಕ್ಷಗಳಿಗೂ ಪ್ರಾಧಾನ್ಯತೆ ಇದೆ. ರಾಜಕೀಯ ವ್ಯವಸ್ಥೆ ಪ್ರಜಾಸತ್ತಾತ್ಮಕವಾಗಿರಲಿ ಅಥವಾ ನಿರಂಕುಶವಾಗಿರಲಿ, ಅಲ್ಲಿ ರಾಜಕೀಯ ಪಕ್ಷ ಒಂದಲ್ಲ ಒಂದು ರೀತಿಯಲ್ಲಿ ತನ್ನ ಪ್ರಭಾವವನ್ನು ಬೀರುತ್ತಲೇ ಇದೆ. ಅರಸೊತ್ತಿಗೆಯ ವ್ಯವಸ್ಥೆಯನ್ನು ಹೊರತುಪಡಿಸಿದ ರಾಷ್ಟ್ರಗಳಲ್ಲಿಯೂ ರಾಜಕೀಯ ಪಕ್ಷಕ್ಕೆ ಅಗ್ರಸ್ಥಾನವಿರುವುದು ಕಂಡುಬರುತ್ತದೆ. ಹೀಗಾಗಿ ರಾಜಕೀಯ ಪಕ್ಷವಿಲ್ಲದ ರಾಜಕೀಯ ವ್ಯವಸ್ಥೆಯನ್ನು ಊಹಿಸಿಕೊಳ್ಳುವುದು ಈಗ ಕಷ್ಟಕರ. ಪ್ರಜಾಸತ್ತಾತ್ಮಕ ವ್ಯವಸ್ಥೆಯಲ್ಲಿ ರಾಜಕೀಯ ಪಕ್ಷವೇ ರಾಜ್ಯಾಡಳಿತದ ಜೀವನಾಡಿಯಾಗಿದೆ.

ರಾಜಕೀಯ ಪಕ್ಷಗಳು ಪ್ರಾಚೀನಕಾಲದಿಂದಲೂ ಅಸ್ತಿತ್ವದಲ್ಲಿವೆ. ಪುರಾತನ ರೋಮ್‌ನಲ್ಲಿ ಪ್ಯಾಟ್ರೀಷಿಯನ್ನರು ಮತ್ತು ಪ್ಲೇಬಿಯನ್ನರು ಹಾಗೆಯೇ ಮಧ್ಯಯುಗದಲ್ಲಿ ಗಿಲ್ಡ್ ಮಾಸ್ಟರ್ ಮತ್ತು ಜರ್ನಿಮೆನ್ ಎರಡು ಪರಸ್ಪರವಿರೋಧಿ ಗುಂಪುಗಳಾಗಿದ್ದವು. ನಿಜವಾದ ಅರ್ಥದಲ್ಲಿ ಇವೆರಡೂ ರಾಜಕೀಯ ಪಕ್ಷಗಳಾಗಿರದೆ ವಿರೋಧಿ ಗುಂಪುಗಳಾಗಿದ್ದವು, ಆದರೆ ಪಕ್ಷಪದ್ಧತಿಯ ಹುಟ್ಟಿಗೆ ಇವು ಮೂಲವೆನ್ನಬಹುದು. ಪಕ್ಷಪದ್ಧತಿಯನ್ನು ಪ್ರಪಂಚದಲ್ಲಿ ಮೊಟ್ಟಮೊದಲು ಪರಿಚಯಿಸಿದ ಖ್ಯಾತಿ ಗ್ರೇಟ್ ಬ್ರಿಟನ್ನಿಗೆ ಸಲ್ಲುತ್ತದೆ. ಇದು ಸುಮಾರು 1500 ವರ್ಷಗಳಿಂದ ಬ್ರಿಟಿಷ್ ಸಂವಿಧಾನದೊಡನೆ ಬೆಳೆದುಕೊಂಡು ಬಂದಿದೆ. ಮಾನವನ ಕ್ರಿಯಾತ್ಮಕ ರಾಜಕೀಯ ಸ್ವಭಾವ, ವ್ಯಕ್ತಿ ವ್ಯಕ್ತಿಗಳ ನಡುವಣ ವಿಭಿನ್ನತೆ. ಆರ್ಥಿಕ ಹಿತಾಸಕ್ತಿಗಳು, ಧಾರ್ಮಿಕ ಭಾವನೆಗಳು ಮತ್ತು ತಾನು

ವಾಸಿಸುವ ಸುತ್ತಲಿನ ವಾತಾವರಣ ರಾಜಕೀಯ ಪಕ್ಷಗಳ ಅವಶ್ಯಕತೆಯ ಅರಿವು ಮೂಡಿಸಿವೆ. ಇವು ವ್ಯಕ್ತಿಗೆ ಸಮಾಜದಲ್ಲೊಂದು ಗೌರವದ ಸ್ಥಾನವನ್ನು ಕಲ್ಪಿಸಿವೆ.

9.1 ಅರ್ಥ ಮತ್ತು ವ್ಯಾಖ್ಯೆಗಳು:

ಸಾಮಾನ್ಯ ಸಿದ್ಧಾಂತದ ಆಧಾರ ಮೇಲೆ ರಾಜಕೀಯ ಅಧಿಕಾರವನ್ನು ಪಡೆಯುವ ಉದ್ದೇಶದಿಂದ ಸಂಘಟಿತವಾಗಿರುವ ಜನಸಮೂಹವೇ ರಾಜಕೀಯ ಪಕ್ಷ. ರಾಜಕೀಯ ಪಕ್ಷದ ಅರ್ಥ ಮತ್ತು ಮಹತ್ವದ ಬಗ್ಗೆ ರಾಜ್ಯಶಾಸ್ತ್ರಜ್ಞರಲ್ಲಿ ಒಮ್ಮತವಿಲ್ಲ ಇವುಗಳ ಉತ್ತಮ ಗ್ರಹಿಕೆಗಾಗಿ ಕೆಲವು ವ್ಯಾಖ್ಯೆಗಳನ್ನು ನೀಡಲಾಗಿದೆ.

1. **ಡಬ್ಲ್ಯೂ. ಬಿ. ಮುನ್ರೋ ರವರ ಪ್ರಕಾರ: "ಸಾರ್ವಜನಿಕರಿಗೆ ಸಂಬಂಧಿಸಿದ ವಿಷಯಗಳ ಬಗ್ಗೆ ಒಂದೇ ಅಭಿಪ್ರಾಯವನ್ನು ಹೊಂದಿರುವ ವ್ಯಕ್ತಿಗಳ ಸಮೂಹವೇ ರಾಜಕೀಯ ಪಕ್ಷ".**

2. **ಎಡ್ಮಂಡ್ ಬರ್ಕ್ ರವರ ಪ್ರಕಾರ: "ಎಲ್ಲರೂ ಒಪ್ಪಿರುವ ಕೆಲವು ಸಾಮಾನ್ಯ ತತ್ವಗಳ ಆಧಾರದ ಮೇಲೆ ರಾಷ್ಟ್ರೀಯ ಹಿತಾಸಕ್ತಿಯನ್ನು ಸಾಧಿಸಲು ಶ್ರಮಿಸುವ ಸಂಘಟಿತ ಜನರ ಸಮುದಾಯವೇ ರಾಜಕೀಯ ಪಕ್ಷ."**

3. **ಗಿಲ್ ಕ್ರಿಸ್ಟ್ ರವರ ಪ್ರಕಾರ: "ಸಮಾಜ ರಾಜಕೀಯ ಗುಂಪುಗಳನ್ನು ಹೊಂದಿ ಸಂಘಟನೆಯ ಮೂಲಕ ಅಧಿಕಾರ ಪಡೆದು ತನ್ನ ಪಕ್ಷದ ಧ್ಯೇಯ ಉದ್ದೇಶಗಳಿಗನುಗುಣವಾಗಿ ರಾಷ್ಟ್ರದ ಆಡಳಿತವನ್ನು ನಡೆಸುವ ಗುಂಪೇ ರಾಜಕೀಯ ಪಕ್ಷ."**

4. **ಮೆಕೈವರ್ ರವರ ಪ್ರಕಾರ: "ಸರ್ಕಾರ ರಚಿಸುವ ಉದ್ದೇಶದಿಂದ ಸಂವಿಧಾನಿಕ ವಿಧಾನಗಳಲ್ಲಿ ನಂಬಿಕೆ ಹೊಂದಿದ್ದು ಕೆಲವು ತತ್ವಗಳನ್ನೊಳಗೊಂಡ ಸಂಘಟಿತ ಸಂಸ್ಥೆಯೇ ರಾಜಕೀಯ ಪಕ್ಷ." ಮೇಲ್ಕಂಡ ವ್ಯಾಖ್ಯೆಗಳನ್ನು ಗಮನಿಸಿದಾಗ ನಿರ್ದಿಷ್ಟ ಉದ್ದೇಶಗಳನ್ನು ಸಂಘಟಿತ ಪ್ರಯತ್ನದಿಂದ ಈಡೇರಿಸಲು ಒಂದಾದ ಜನತೆಯ ಗುಂಪುಗಳೇ ರಾಜಕೀಯ ಪಕ್ಷಗಳೆಂದು ಸರಳವಾಗಿ ವ್ಯಾಖ್ಯಾನಿಸಬಹುದು.**

9.2 ರಾಜಕೀಯ ಪಕ್ಷದ ಪ್ರಮುಖ ಲಕ್ಷಣಗಳು:

ರಾಜಕೀಯ ಪಕ್ಷಗಳು ಈ ಕೆಳಗಿನ ಲಕ್ಷಣಗಳನ್ನು ಹೊಂದಿರಬೇಕು.

1. ಏಕಾಭಿಪ್ರಾಯ: ರಾಜಕೀಯ ಪಕ್ಷದ ಮೂಲಭೂತ ತತ್ವಗಳ ಬಗ್ಗೆ ಸದಸ್ಯರಲ್ಲಿ ಯಾವುದೇ ಭಿನ್ನಾಭಿಪ್ರಾಯ ವಿರಬಾರದು. ಒಂದು ವೇಳೆ ಮೂಲತತ್ವಗಳ ಬಗ್ಗೆ ಭಿನ್ನಾಭಿಪ್ರಾಯ ಮೂಡಿದರೆ ಇದರಿಂದ ಸದಸ್ಯರ ನಡುವೆ ಸಹಕಾರ ಮತ್ತು ಏಕತೆಯ ಕೊರತೆಯಿಂದ ಪಕ್ಷಕ್ಕೆ ಧಕ್ಕೆಯಾಗುತ್ತದೆ ಉದಾಹರಣೆಗೆ ಭಾರತದ ಬಹುತೇಕ ರಾಜಕೀಯ ಪಕ್ಷಗಳು ಜಾತ್ಯತೀತ ವಾದವನ್ನು ಪಕ್ಷದ ಮೂಲತತ್ವವನ್ನಾಗಿಸಿಕೊಂಡಿದ್ದು, ಅದರ ಬಗ್ಗೆ ಯಾವುದೇರಾಜಿ ಮಾಡಿಕೊಳ್ಳಲು ಇವು ತಯಾರಿಲ್ಲ.

2. ಸಂಘಟನೆ: ರಾಜಕೀಯ ಪಕ್ಷವು ಸಂಘಟನೆಯಿಲ್ಲದಿದ್ದರೆ ಉದ್ದೇಶ ರಹಿತ ಜನರ ಸಂತೆಯಂತಿರುತ್ತದೆ. ಒಂದು ವಿಷಯದ ಬಗ್ಗೆ ಒಂದೇ ರೀತಿಯ ಆಲೋಚನೆಯಿರುವವರು ಸಂಘಟಿತರಾಗಬೇಕು. ಒಗ್ಗಟ್ಟಿನಲ್ಲಿ ಬಲವಿದೆ ಎನ್ನುವಂತೆ, ಸಂಘಟಿತರಾಗಿ ಯಾವುದೇ ಕಾರ್ಯವನ್ನು ಕೈಗೊಂಡಾಗ ಸಂಯುಕ್ತ ಶಕ್ತಿಯ ಫಲವಾಗಿ ಅದು ನೆರವೇರುತ್ತದೆ. ಸಂಘಟನೆ ಇಲ್ಲದೆ ರಾಜಕೀಯ ಅಧಿಕಾರವನ್ನು ಪಡೆಯಲು ಸಾಧ್ಯವಿಲ್ಲ.

3. ಸ್ವ-ಇಚ್ಛೆ: ಒಬ್ಬ ವ್ಯಕ್ತಿಯು ತನ್ನ ಮನಸ್ಸಿಗೆ ಅಥವಾ ತನ್ನ ವಿಚಾರಕ್ಕೆ ಸರಿಹೊಂದುವ ಯಾವುದೇ ಪಕ್ಷವನ್ನು ಸೇರುವ ಸ್ವಾತಂತ್ರ್ಯವನ್ನು ಹೊಂದಿದ್ದಾನೆ. ತಮ್ಮ ಆಸೆ, ನಂಬಿಕೆ ಮತ್ತು ಸಿದ್ಧಾಂತ ಗಳಿಗನುಗುಣವಾಗಿ ರಾಜಕೀಯ ಪಕ್ಷಗಳನ್ನು ಸೇರಬಹುದು ಅಥವಾ ಬಿಡಬಹುದು.

4. ನಿರ್ದಿಷ್ಟ ಕಾರ್ಯಕ್ರಮ: ಚುನಾವಣೆಯಲ್ಲಿ ಬಹುಮತ ಪಡೆದು ಅಧಿಕಾರ ಗಳಿಸಿ, ಸರ್ಕಾರ ರಚನೆ ಮಾಡುವ ಉದ್ದೇಶ ಹೊಂದಿರುವ ರಾಜಕೀಯ ಪಕ್ಷಗಳಿಗೆ ನಿರ್ದಿಷ್ಟ ಕಾರ್ಯಕ್ರಮವಿರಬೇಕು. ಪಕ್ಷಗಳು ತಮ್ಮ ಸಾಮಾಜಿಕ, ರಾಜಕೀಯ, ಆರ್ಥಿಕ, ಸಾಂಸ್ಕೃತಿಕ ಮತ್ತು ಧಾರ್ಮಿಕ ನಿಲುವುಗಳನ್ನು ಚುನಾವಣಾ ಪ್ರಣಾಳಿಕೆಯಲ್ಲಿ ವ್ಯಕ್ತಪಡಿಸಬೇಕಾಗುತ್ತದೆ. ಇದಕ್ಕನುಗುಣವಾಗಿ ಕಾರ್ಯತಂತ್ರ ರೂಪಿಸಿ ಯಾವ ಪಕ್ಷ ಯಶಸ್ವಿಯಾಗಿ ಜನರನ್ನು ಆಕರ್ಷಿಸುತ್ತದೆಯೋ ಆ ಪಕ್ಷವು ಜನಾದೇಶದ ಮೂಲಕ ಅಧಿಕಾರಕ್ಕೆ ಬರುತ್ತದೆ.

5. ಸಂವಿಧಾನಕ್ಕೆ ವಿಧೇಯತೆ: ರಾಜಕೀಯ ಪಕ್ಷಗಳು ಸಂವಿಧಾನದ ವಿಧಿ ಮತ್ತು ನಿಯಮಗಳಿಗನುಸಾರವಾಗಿ ತಮ್ಮ ಕಾರ್ಯ ಕಲಾಪಗಳನ್ನು ನಡೆಸಬೇಕು. ಸಂವಿಧಾನ ಬಾಹಿರವಾಗಿ ಚುನಾವಣೆಗಳಲ್ಲಿ ಅಕ್ರಮಗಳನ್ನು ಎಸಗಬಾರದು. ಉದಾಹರಣೆ: ಅಭ್ಯರ್ಥಿಯ ಅಪಹರಣ, ಜಾತಿ ಮತ್ತು ಧರ್ಮದ ಹೆಸರಿನಲ್ಲಿ ಮತಯಾಚನೆ ಇತ್ಯಾದಿ ಚುನಾವಣೆಯ ಅಕ್ರಮಗಳಾಗಿದೆ. ಸಂವಿಧಾನ ಬದ್ಧವಾಗಿ ನಡೆದುಕೊಳ್ಳುವುದು ರಾಜಕೀಯ ಪಕ್ಷದ ಒಂದು ಪ್ರಮುಖ ಲಕ್ಷಣವಾಗಿದೆ. ಭಾರತದಲ್ಲಿ ರಾಜಕೀಯ ಪಕ್ಷಗಳು ಪ್ರಜಾಪ್ರತಿನಿಧಿಕಾಯ್ದೆ ಅಧಿನಿಯಮ 1951 ರ ಸೆಕ್ಷನ್ 29 ಏ ಪ್ರಕಾರ ಚುನಾವಣಾ ಆಯೋಗದಿಂದ ನೊಂದಾಯಿಸಿಕೊಳ್ಳಬೇಕು.

6. **ರಾಷ್ಟ್ರೀಯ ಹಿತಾಸಕ್ತಿಗೆ ಪ್ರಾಮುಖ್ಯತೆ: ರಾಜಕೀಯ ಪಕ್ಷವು ಅಧಿಕಾರ ನಡೆಸುವ ಆಕಾಂಕ್ಷೆಯಲ್ಲಿ ರಾಷ್ಟ್ರೀಯ ಹಿತಾಸಕ್ತಿಯನ್ನು ಮರೆಯಬಾರದು. ರಾಷ್ಟ್ರೀಯ ಗುರಿಗಳನ್ನು ಈಡೇರಿಸಿಕೊಳ್ಳಲು ಇವು ಶ್ರಮಿಸಬೇಕು, ಇಲ್ಲಿ ವ್ಯಕ್ತಿಗಳ ವೈಯಕ್ತಿಕ ಹಿತಾಸಕ್ತಿಗಿಂತ ರಾಷ್ಟ್ರೀಯ ಹಿತಾಸಕ್ತಿಗೆ ಹೆಚ್ಚಿನ ಆದ್ಯತೆ ನೀಡಬೇಕು.**

ಪಕ್ಷ ಪದ್ಧತಿ:

9.3 ಪಕ್ಷಪದ್ಧತಿಯ ವಿಧಗಳು: ಪಕ್ಷಪದ್ಧತಿಯಲ್ಲಿ ಮೂರು ವಿಧಗಳಿವೆ. ಅವುಗಳೆಂದರೆ,

1. ಏಕ ಪಕ್ಷ ಪದ್ಧತಿ
2. ದ್ವಿಪಕ್ಷ ಪದ್ಧತಿ
3. ಬಹುಪಕ್ಷ ಪದ್ಧತಿ

1. ಏಕ ಪಕ್ಷ ಪದ್ಧತಿ:

ಒಂದು ರಾಷ್ಟ್ರದ ರಾಜಕಾರಣದಲ್ಲಿ ಕೇವಲ ಒಂದೇ ಒಂದು ಪಕ್ಷ ಅಸ್ತಿತ್ವದಲ್ಲಿದ್ದರೆ ಅದನ್ನು ಏಕಪಕ್ಷ ಪದ್ಧತಿ ಎನ್ನುತ್ತೇವೆ. ಚೀನಾ ಇದಕ್ಕೊಂದು ಉತ್ತಮ ಉದಾಹರಣೆ. ಇಲ್ಲಿ ಕಮ್ಯೂನಿಸ್ಟ್ ಪಕ್ಷ ಸರ್ಕಾರ ರಚಿಸಿ ಆಡಳಿತ ನಡೆಸುತ್ತದೆ. ಚೀನಾದಲ್ಲಿ ಕಮ್ಯೂನಿಸ್ಟ್ ಪಕ್ಷವು ಅಂತಿಮ ರಾಜಕೀಯ ಅಧಿಕಾರವಾಗಿದೆ. ಹಿಂದಿನ ಸೋವಿಯತ್ ಪಕ್ಷವು ಸಹಾ ಪ್ರಜಾಸತ್ತಾತ್ಮಕ ಕೇಂದ್ರೀಕರಣ ತತ್ವದ ಮೇಲೆ ಸಂಘಟಿತವಾಗಿದೆ. ಪಕ್ಷದ ಎಲ್ಲಾ ಹಂತಗಳಲ್ಲಿನ ಎಲ್ಲಾ ಸದಸ್ಯರೂ ಅವುಗಳ ತಕ್ಷಣದ ಕೆಳಗಿನ ಹಂತದ ಅಂಗಗಳಿಂದ ಆಯ್ಕೆಯಾಗುತ್ತಾರೆ. ಚೀನಾದ ರಾಷ್ಟ್ರೀಯ ಕಾಂಗ್ರೆಸ್ ಪಕ್ಷದ ಅತ್ಯುನ್ನತ ಅಂಗವಾಗಿವೆ. ಇದು ಕೇಂದ್ರಿಯ ಸಮಿತಿ, ಪಾಲಿಟ್‌ಬ್ಯೂರೊ ಮತ್ತು ಸಚಿವಾಲಯ ಎಂಬ ಮೂರು ಸಮಿತಿಗಳನ್ನು ಆಯ್ಕೆ ಮಾಡುತ್ತದೆ.

2. ದ್ವಿಪಕ್ಷ ಪದ್ಧತಿ:

ಒಂದು ರಾಷ್ಟ್ರದ ರಾಜಕೀಯದಲ್ಲಿ ಎರಡು ಪಕ್ಷಗಳು ಮಾತ್ರ ನಿರ್ಣಾಯಕ ಪಾತ್ರವಹಿಸುತ್ತಿದ್ದರೆ ಅದನ್ನು ದ್ವಿಪಕ್ಷ ಪದ್ಧತಿ ಎನ್ನುತ್ತೇವೆ. ಅಮೇರಿಕಾ ಮತ್ತು ಬ್ರಿಟನ್ ಇದಕ್ಕೆ ಅತ್ಯುತ್ತಮ ಉದಾಹರಣೆಗಳಾಗಿವೆ.

ಅಮೇರಿಕಾದಲ್ಲಿ ಹಲವಾರು ಸಣ್ಣಪುಟ್ಟ ಪಕ್ಷಗಳು ಇದ್ದರೂ ಸಹ ಡೆಮೊಕ್ರಾಟಿಕ್ ಮತ್ತು ರಿಪಬ್ಲಿಕನ್ ಪಕ್ಷಗಳು ಅತ್ಯಂತ ಮುಖ್ಯವಾದ ಪಕ್ಷಗಳಾಗಿರುವುದರಿಂದ ಇಲ್ಲಿನ ಪಕ್ಷವ್ಯವಸ್ಥೆಯನ್ನು ದ್ವಿಪಕ್ಷ ಪದ್ಧತಿಯೆಂದೇ ಪರಿಗಣಿಸಲಾಗಿದೆ. ಅಮೇರಿಕಾದಲ್ಲಿ ರಾಜಕೀಯ ಪಕ್ಷಗಳೂ ಸಂವಿಧಾನದ ಚೌಕಟ್ಟಿನ ಹೊರಗೆ ಕಾಣಿಸಿಕೊಂಡು ರಾಜ್ಯ ವ್ಯವಸ್ಥೆಯ ಅವಿಭಾಜ್ಯ

ಭಾಗಗಳಾಗಿ ಹುಟ್ಟಿಕೊಂಡವು. ದ್ವಿಪಕ್ಷ ಪದ್ಧತಿಯು ಬ್ರಿಟನ್ನಿನ ಪಕ್ಷಪದ್ಧತಿಯ ಒಂದು ವಿಶೇಷವಾದ ಲಕ್ಷಣವಾಗಿದೆ. ಇಲ್ಲಿ ಪಕ್ಷ ಪದ್ಧತಿಯು ಪ್ರಜಾಪ್ರಭುತ್ವದ ಒಂದು ಭಾಗವಾಗಿಯೇ ಬೆಳೆದು ಬಂದಿದೆ. ರಾಜಕೀಯ ಹೊಂದಾಣಿಕೆ, ಸುವ್ಯವಸ್ಥಿತ ರಚನೆ, ಶಿಸ್ತು ರಾಷ್ಟ್ರೀಯ ಸಮಸ್ಯೆಗಳನ್ನು ಎದುರಿಸುವಲ್ಲಿ ಏಕಾಭಿಪ್ರಾಯ ಮತ್ತು ಸಂವಿಧಾನಾತ್ಮಕ ವಿಧಿ ವಿಧಾನಗಳು ಬ್ರಿಟನ್ನಿನ ಪಕ್ಷ ಪದ್ಧತಿಯ ಪ್ರಮುಖ ಲಕ್ಷಣಗಳಾಗಿವೆ. ರಾಜತ್ವ ಮತ್ತು ಸಂಸತ್ತಿನ ನಡುವೆ ಪ್ರಾರಂಭವಾದ ವೈಷಮ್ಯದ ಫಲವಾಗಿ ಬ್ರಿಟನ್ನಿನಲ್ಲಿ ಟೋರಿಸ್ ಮತ್ತು ವಿಗ್ಸ್ ಎಂಬ ಎರಡು ಗುಂಪುಗಳು ರಚನೆಗೊಂಡವು. ಟೋರಿಸ್ ಗುಂಪು ಶ್ರೀಮಂತ ವರ್ಗ ಮತ್ತು ಚರ್ಚನ್ನು ಪ್ರತಿನಿಧಿಸುವಂತಹುದಾದರೆ, ವಿಗ್ಸ್ ಗುಂಪು ಸಂಸತ್ತಿನ ಪರವಾದ ಪ್ರಗತಿಪರ ವರ್ಗವನ್ನು ಪ್ರತಿನಿಧಿಸುತ್ತದೆ. ಈ ಗುಂಪುಗಳೇ ಮುಂದೆ ಕನ್ಸರ್ವೇಟಿವ್ (ಟೋರಿ-ಶ್ರೀಮಂತರ) ಪಕ್ಷ ಮತ್ತು ಲಿಬರಲ್ ಪಕ್ಷಗಳಾಗಿ ಹೊರಹೊಮ್ಮಿದವು. ಲಿಬರಲ್ ಪಕ್ಷವು ಕ್ಷೀಣಿಸುತ್ತಾ ಬಂದು ಲೇಬರ್ ಪಕ್ಷವು ಆ ಸ್ಥಾನವನ್ನು ಆಕ್ರಮಿಸಿದೆ.

3. ಬಹುಪಕ್ಷ ಪದ್ಧತಿ:

ರಾಜಕೀಯ ವ್ಯವಸ್ಥೆಯಲ್ಲಿ ಎರಡಕ್ಕಿಂತ ಹೆಚ್ಚು ಪಕ್ಷಗಳು ಅಸ್ತಿತ್ವದಲ್ಲಿರುವುದನ್ನು ಬಹುಪಕ್ಷಪದ್ಧತಿ ಎನ್ನುತ್ತೇವೆ. ಭಾರತ, ಫ್ರಾನ್ಸ್, ಜಪಾನ್ ದೇಶಗಳು ಬಹುಪಕ್ಷ ಪದ್ಧತಿಗೆ ಶ್ರೇಷ್ಠ ಉದಾಹರಣೆಗಳಾಗಿವೆ. ಭಾರತದಲ್ಲಿ ಬಹುಪಕ್ಷಪದ್ಧತಿ ಜಾರಿಯಲ್ಲಿದೆ ಬಹುಶ: ಇಡೀ ವಿಶ್ವದಲ್ಲೇ ಭಾರತದಲ್ಲಿರುವಷ್ಟು ರಾಜಕೀಯ ಪಕ್ಷಗಳು ಬೇರಾವ ದೇಶದಲ್ಲೂ ಇಲ್ಲ. 2015 ಜೂನ್ 22 ರ ಭಾರತ ಚುನಾವಣಾ ಆಯೋಗದ ವರದಿಯೊಂದರ ಪ್ರಕಾರ ಇಲ್ಲಿ 1866 ರಾಜಕೀಯ ಪಕ್ಷಗಳು ನೊಂದಾಯಿಸಲ್ಪಟ್ಟಿವೆ. ಭಾರತವು ವೈವಿಧ್ಯಮಯ ರಾಷ್ಟ್ರವಾಗಿರುವುದೇ ಇದಕ್ಕೆ ಮುಖ್ಯ ಕಾರಣ. ಅನೇಕ ಜಾತಿ, ಧರ್ಮ, ಭಾಷೆ, ಪ್ರಾಂತ್ಯ, ಸಂಸ್ಕೃತಿ ಮುಂತಾದವುಗಳು ಇರುವುದರಿಂದ ಇಲ್ಲಿ ವಿವಿಧ ತತ್ವ, ಸಿದ್ಧಾಂತ, ನೀತಿಗಳಿಗನುಗುಣವಾಗಿ ಅನೇಕ ಪಕ್ಷಗಳು ಹುಟ್ಟಿಕೊಂಡಿವೆ. ಇವುಗಳಲ್ಲಿ ಭಾರತ ರಾಷ್ಟ್ರೀಯ ಕಾಂಗ್ರೆಸ್ (INC), ಬಹುಜನ ಸಮಾಜ ಪಕ್ಷ (BSP), ಭಾರತ ಕಮ್ಯೂನಿಸ್ಟ್ ಪಕ್ಷ (CPI) ಭಾರತೀಯ ಜನತಾಪಕ್ಷ (BJP) ಮಾರ್ಕ್ಸ್ ವಾದಿ ಕಮ್ಯೂನಿಸ್ಟ್ ಪಕ್ಷ CPI, (M), ಮತ್ತು ರಾಷ್ಟ್ರೀಯವಾದಿ ಕಾಂಗ್ರೆಸ್ ಪಕ್ಷ (NCP) ಇವು ಭಾರತದ ರಾಷ್ಟ್ರೀಯ ಪಕ್ಷಗಳು. ಉಳಿದವು ಸೀಮಿತ ರಾಜ್ಯ/ ಪ್ರಾಂತ್ಯ/ ಪ್ರದೇಶಗಳಲ್ಲಿ ಮಾತ್ರ ಅಸ್ತಿತ್ವದಲ್ಲಿರುವ ಪ್ರಾದೇಶಿಕ ಪಕ್ಷಗಳು ಉದಾಹರಣೆ: ಜಾತ್ಯಾತೀತ ಜನತಾದಳ (JDS) ತೆಲುಗು ದೇಶಂ (TDP) ಅಕಾಲಿಕ ದಳ, ತೃಣಮೂಲ ಕಾಂಗ್ರೆಸ್, ಎ. ಐ. ಎ. ಡಿ. ಎಂ. ಕೆ. ಇತ್ಯಾದಿ. ಪಕ್ಷಗಳಲ್ಲಿ ಒಡಕು, ವಿಲೀನ, ಪಕ್ಷಾಂತರ, ಏಕಪಕ್ಷ ಪ್ರಾಬಲ್ಯದ ಕ್ಷೀಣತೆ, ಸಂಮಿಶ್ರ ಸರ್ಕಾರದ ರಚನೆ ಇವು ಭಾರತದ ಪಕ್ಷಪದ್ಧತಿಯ ಮುಖ್ಯ ಲಕ್ಷಣಗಳಾಗಿವೆ.

ಫ್ರಾನ್ಸಿನಲ್ಲಿಯೂ ಕೂಡ ಹಲವಾರು ಪಕ್ಷಗಳು ಅಸ್ತಿತ್ವದಲ್ಲಿವೆ. ಇವು ನಾಯಿಕೊಡೆಗಳಂತೆ ಹುಟ್ಟಿಕೊಳ್ಳುತ್ತವೆ ಮತ್ತು ಸ್ವಲ್ಪಕಾಲದಲ್ಲೇ ನಾಶಹೊಂದುತ್ತವೆ. ರಾಜಕೀಯ ಪಕ್ಷಗಳ ಆಕಸ್ಮಿಕ ಅಸ್ತಿತ್ವ ಹಾಗೂ ಸಾಮ್ಯತೆ ಅಲ್ಲಿಯ ಸರ್ಕಾರದ ಮೇಲೆ ಪರಿಣಾಮ ಬೀರುತ್ತದೆ. ಫ್ರಾನ್ಸಿನ ಸರ್ಕಾರದ ಅಸ್ಥಿರತೆಗೆ ಅಲ್ಲಿನ ಬಹುಪಕ್ಷ ಪದ್ಧತಿಯೇ

ಕಾರಣವೆನ್ನಬಹುದು. ಸೋಶಿಯಲಿಸ್ಟ್ ಪಾರ್ಟಿ, ಪಾಪ್ಯೂಲರ್ ರಿಪಬ್ಲಿಕನ್ ಮೂವ್‌ಮೆಂಟ್, ದಿ ಕನ್‌ಸರ್ ವೇಟಿವ್, ದಿ ಕಮ್ಯೂನಿಸ್ಟ್ ಪಾರ್ಟಿ, ನ್ಯಾಷನಲ್ ಫ್ರೆಂಟ್ ಇವು ಫ್ರಾನ್ಸಿನ ಪ್ರಮುಖ ರಾಷ್ಟ್ರೀಯ ಪಕ್ಷಗಳಾಗಿವೆ. ನಿಶ್ಚಿತ ತತ್ವಗಳ ಕೊರತೆ, ವೈಯಕ್ತಿಕ ಅಭಿಪ್ರಾಯಗಳಿಗೆ ಮನ್ನಣೆ, ರಾಜಕೀಯ ಅಪಕ್ವತೆ ಹಾಗೂ ದುರ್ಬಲ ಸಂಘಟನೆ ಇವು ಫ್ರಾನ್ಸಿನ ಪಕ್ಷ ಪದ್ಧತಿಯ ಪ್ರಮುಖ ಲಕ್ಷಣಗಳಾಗಿವೆ.

ಜಪಾನಿನಲ್ಲಿ ಬಹುಪಕ್ಷ ಪದ್ಧತಿ ಜಾರಿಯಲ್ಲಿದ್ದರೂ ಸಹ ಉದಾರವಾದಿ ಪ್ರಜಾಸತ್ತಾತ್ಮಕ ಪಕ್ಷವು 1950 ರ ದಶಕದಿಂದಲೂ ಅಧಿಕಾರದಲ್ಲಿದ್ದುದರಿಂದ ಅದನ್ನು ಸಂಪ್ರದಾಯವಾದಿ ಪಕ್ಷವೆಂಬುದಾಗಿ ಕರೆಯಲಾಗುತ್ತದೆ. ಭಾರತದ ಕಾಂಗ್ರೆಸ್ ಪಕ್ಷಕ್ಕೆ ಇದನ್ನು ಹೋಲಿಸಬಹುದು. ಲಿಬರಲ್ ಡೆಮೊಕ್ರಾಟಿಕ್ ಪಾರ್ಟಿ, ಜಪಾನ್ ಸೋಶಿಯಲಿಸ್ಟ್ ಪಾರ್ಟಿ, ಡೆಮೊಕ್ರಾಟಿಕ್ ಸೋಶಿಯಲಿಸ್ಟ್ ಪಾರ್ಟಿ ಹಾಗೂ ಕಮ್ಯೂನಿಸ್ಟ್ ಪಾರ್ಟಿ ಇವು ಜಪಾನಿನ ನಾಲ್ಕು ಪ್ರಮುಖ ರಾಜಕೀಯ ಪಕ್ಷಗಳಾಗಿವೆ.

9.4 ರಾಜಕೀಯ ಪಕ್ಷಗಳ ಕಾರ್ಯಗಳು:

ರಾಜಕೀಯ ಪಕ್ಷವು ಆಧುನಿಕ ರಾಜ್ಯ ಪದ್ಧತಿಯ ಅಡಿಗಲ್ಲು, ಹಾಗೆ ಯೋಚಿಸಿದರೆ ರಾಜಕೀಯ ಪಕ್ಷವೇ ರಾಷ್ಟ್ರ ನಿರ್ಮಾಣದ ನಿರ್ಣಾಯಕ ಸಾಧನವೂ ಹೌದು. ರಾಜಕೀಯ ಪಕ್ಷವಿಲ್ಲದ ರಾಷ್ಟ್ರವೊಂದರ ರಾಜ್ಯಾಡಳಿತ ಜೀವವಿಲ್ಲದ ಅಸ್ಥಿಪಂಜರವಿದ್ದಂತೆ ರಾಷ್ಟ್ರವು ಎದುರಿಸುತ್ತಿರುವ ಸವಾಲುಗಳಿಗೆ ಪರಿಹಾರಗಳನ್ನು ಗುರುತಿಸಿ ಅನುಷ್ಠಾನಗೊಳಿಸುವ ರಾಜಕೀಯ ಪಕ್ಷಗಳು ರಾಷ್ಟ್ರದ ಪ್ರಗತಿಗೆ ಕೊಡುಗೆ ನೀಡುತ್ತವೆ. ಈ ಹಿನ್ನೆಲೆಯಲ್ಲಿ ರಾಜಕೀಯ ಪಕ್ಷಗಳ ಕಾರ್ಯಗಳನ್ನು ಈ ಕೆಳಗಿನಂತೆ ತಿಳಿದುಕೊಳ್ಳಬಹುದು.

1. ಚುನಾವಣಾ ಪ್ರಣಾಳಿಕೆಗಳನ್ನು ಸಿದ್ಧಪಡಿಸುವುದು:

ರಾಜಕೀಯ ಪಕ್ಷಗಳ ಅತ್ಯಮೂಲ್ಯ ಕೆಲಸವೆಂದರೆ ತಮ್ಮ ತಮ್ಮ ಸಿದ್ಧಾಂತ ಹಾಗೂ ಜನಪ್ರಿಯ ಕಾರ್ಯಕ್ರಮಗಳ ಮೂಲಕ ಪ್ರಜೆಗಳನ್ನು ಆಕರ್ಷಿಸುವಂತಹ ಪ್ರಣಾಳಿಕೆಗಳನ್ನು ಸಿದ್ಧಪಡಿಸುವುದು. ರಾಜಕೀಯ ಪಕ್ಷಗಳು ಚುನಾವಣೆಗಳ ಸಂದರ್ಭದಲ್ಲಿ ಜನರ ಮುಂದಿಡುವ ಸಾಧನೆ ಮತ್ತು ಭರವಸೆಗಳ ಪಟ್ಟಿಯೇ ಪ್ರಣಾಳಿಕೆ. ಈ ಪ್ರಣಾಳಿಕೆಗಳ ಆಧಾರದ ಮೇಲೆ ಪಕ್ಷಗಳು ಚುನಾವಣಾ ಪ್ರಚಾರ ಕೈಗೊಂಡು ಜನರಿಗೆ ತಮ್ಮ ಸಂದೇಶವನ್ನು ತಲುಪಿಸುತ್ತವೆ. ಯಾವ ಪಕ್ಷವು ಉತ್ತಮ ಕಾರ್ಯಸೂಚಿಗಳ ಮೂಲಕ ಉತ್ತಮ ಆಡಳಿತದ ಭರವಸೆಯನ್ನು ಜನರಲ್ಲಿ ತುಂಬಲು ಯಶಸ್ವಿಯಾಗುತ್ತದೋ ಆ ಪಕ್ಷವು ಜನಾದೇಶ ಪಡೆದು ಸರ್ಕಾರ ರಚಿಸುತ್ತದೆ.

2. ಅಭ್ಯರ್ಥಿಗಳ ಆಯ್ಕೆ ರಾಜಕೀಯ ಪಕ್ಷಗಳ ಪ್ರಮುಖ ಗುರಿ:

ಚುನಾವಣೆಗಳಲ್ಲಿ ಸ್ಪರ್ಧಿಸಿ, ಗೆದ್ದು ಅಧಿಕಾರ ಸೂತ್ರವನ್ನು ಹಿಡಿಯುವುದು. ಈ ನಿಟ್ಟಿನಲ್ಲಿ ರಾಜಕೀಯ ಪಕ್ಷಗಳು ಚುನಾವಣೆಯಲ್ಲಿ ಜಯಗಳಿಸಲು ಹೆಚ್ಚು ಅವಕಾಶವಿರುವ ಅಭ್ಯರ್ಥಿಗಳನ್ನು ಆಯ್ಕೆಮಾಡುತ್ತವೆ. ಇದು ಅತ್ಯಂತ ಸೂಕ್ಷ್ಮಕಾರ್ಯವಾಗಿದ್ದು ಪಕ್ಷದ ಗೆಲುವಿಗಾಗಿ ಶ್ರಮಿಸುವ ಪ್ರತಿಯೊಬ್ಬರ ಭಾವನೆಗಳನ್ನು ಗೌರವಿಸಿ ಬಿರುಕು ಉಂಟಾಗದಂತೆ ಎಚ್ಚರ ವಹಿಸಬೇಕಾಗುತ್ತದೆ. ಅಭ್ಯರ್ಥಿಗಳ ಆಯ್ಕೆಯಲ್ಲಿ ಗೊಂದಲವಾಗದಂತೆ ನೋಡಿಕೊಳ್ಳುವ ಜವಾಬ್ದಾರಿ ಪಕ್ಷದ ವರಿಷ್ಠರಿಗಿರುತ್ತದೆ.

3. ಚುನಾವಣೆಗೆ ಸ್ಪರ್ಧಿಸುವುದು:

ಪ್ರಾತಿನಿಧಿಕ ಪ್ರಜಾಸತ್ತಾತ್ಮಕ ಸರ್ಕಾರವು ರಾಜಕೀಯ ಪಕ್ಷಗಳಿಂದ ಕೂಡಿರುವ ಸರ್ಕಾರವಾಗಿದೆ. ಸಮರ್ಥ ಅಭ್ಯರ್ಥಿಗಳನ್ನು ಕಣಕ್ಕಿಳಿಸಿ ಚುನಾವಣೆಯನ್ನು ಗೆಲ್ಲುವುದೇ ಪ್ರತಿಯೊಂದು ಪಕ್ಷದ ಮತ್ತು ಅಭ್ಯರ್ಥಿಯ ಪರಮೋದ್ದೇಶ. ಇದಕ್ಕಾಗಿ ಆಕರ್ಷಕ ಜಾಹಿರಾತುಗಳ ಮೂಲಕ ಚುನಾವಣಾ ಪ್ರಚಾರವನ್ನು ಬಹಿರಂಗ ಸಭೆಗಳನ್ನು ಪಕ್ಷಗಳು ಏರ್ಪಡಿಸುತ್ತವೆ.

4. ಸರ್ಕಾರದ ರಚನೆ ಮತ್ತು ನಿರ್ವಹಣೆ:

ಚುನಾವಣೆಗಳಲ್ಲಿ ಯಾವ ಪಕ್ಷವು ಬಹುಮತದ ಬೆಂಬಲ ಪಡೆಯುತ್ತದೆಯೋ ಆ ಪಕ್ಷವು ಸರ್ಕಾರ ರಚನೆ ಮಾಡುತ್ತದೆ. ಅಧಿಕಾರ ರೂಢ ಪಕ್ಷವು ತಾನು ಚುನಾವಣಾ ಸಮಯದಲ್ಲಿ ನೀಡಿದ ಆಶ್ವಾಸನೆಗಳಿಗೆ ಅನುಗುಣವಾಗಿ ಕಾರ್ಯ ನಿರ್ವಹಿಸಬೇಕಾಗುತ್ತದೆ. ಆಡಳಿತ ನಿರ್ವಹಣೆಯಲ್ಲಿ ಯಾವುದೇ ಆತುರದ ನಿರ್ಧಾರ ಅಥವಾ ತಪ್ಪು ತೀರ್ಮಾನ ತೆಗೆದುಕೊಂಡಲ್ಲಿ ಸರ್ಕಾರಕ್ಕೆ ಕೆಟ್ಟ ಹೆಸರು ಬರುತ್ತದೆ. ಮುಂದಿನ ಚುನಾವಣೆಗಳಲ್ಲಿ ಮತದಾರರು ಆ ಪಕ್ಷದ ವಿರುದ್ಧವಾಗಿ ಮತ ಚಲಾಯಿಸಿ ಅಧಿಕಾರದಿಂದ ಕೆಳಗೆ ಇಳಿಸುವ ಸಾಧ್ಯತೆಗಳೂ ಇರುತ್ತವೆ. ಆದುದರಿಂದ ಸರ್ಕಾರದ ರಚನೆ ಮತ್ತು ನಿರ್ವಹಣೆ ಪಕ್ಷದ ಅತೀ ಮುಖ್ಯ ಜವಾಬ್ದಾರಿಯಾಗಿದೆ.

5. ಸರ್ಕಾರದ ವಿಮರ್ಶೆ:

ಚುನಾವಣೆಗಳಲ್ಲಿ ಬಹುಮತ ಪಡೆಯಲು ವಿಫಲವಾದ ಪಕ್ಷಗಳು ವಿರೋಧ ಪಕ್ಷಗಳಾಗಿರುತ್ತವೆ. ಇವು ಸರ್ಕಾರದ ತಪ್ಪುಗಳನ್ನು ಎತ್ತಿ ತೋರಿಸುತ್ತವೆ. "ಇಂದಿನ ವಿರೋಧ ಪಕ್ಷವೇ ಮುಂದಿನ ಆಡಳಿತ ಪಕ್ಷ" ಎಂಬ ಮಾತಿದೆ. ವಿರೋಧ ಪಕ್ಷವು ಅಧಿಕಾರಕ್ಕೆ ಬರುವ ಸಲುವಾಗಿ ಆಡಳಿತ ಪಕ್ಷದ ಕಾರ್ಯ ವೈಖರಿಯನ್ನು ಸೂಕ್ಷ್ಮವಾಗಿ ಗಮನಿಸಿ ಟೀಕಿಸಿ ಸರ್ಕಾರದ ದೋಷಗಳನ್ನು ಜನರ ಮುಂದಿಟ್ಟು ಜನಾಭಿಪ್ರಾಯವನ್ನು ತನ್ನ ಪಕ್ಷದ ಕಡೆ ಸೆಳೆಯಲು ಪ್ರಯತ್ನಿಸುತ್ತದೆ. ವಿರೋಧ ಪಕ್ಷದ ಪ್ರಾಮುಖ್ಯತೆಯನ್ನು ಉಲ್ಲೇಖಿಸುತ್ತಾ ಬೆಂಜಮಿನ್ ಡಿಸ್ರೇಲಿಯವರು "ಸಮರ್ಥ ವಿರೋಧ ಪಕ್ಷವಿಲ್ಲದೇ ಯಾವುದೇ ಸರ್ಕಾರವೂ ಸುಭದ್ರವಾಗಿರುವುದಿಲ್ಲ" ಎಂದು ಅಭಿಪ್ರಾಯ ಪಟ್ಟಿದ್ದಾರೆ. ರಾಜಕೀಯ ಪಕ್ಷಗಳು ವ್ಯಕ್ತಿಯನ್ನು ಸರ್ಕಾರದೊಡನೆ ಜೋಡಿಸುವ ಕೊಂಡಿಯಂತೆ ಕೆಲಸ ಮಾಡುತ್ತವೆ" ಎಂದು ಹರ್ಮನ್ ಫೈನರ್‌ರವರು ಅಭಿಪ್ರಾಯ ಪಟ್ಟಿದ್ದಾರೆ.

6. ಸರ್ಕಾರ ಮತ್ತು ಜನರ ನಡುವೆ ಸೇತುವೆ:

ಸರ್ಕಾರ ಮತ್ತು ಜನರ ನಡುವೆ ನೇರ ಸಂಪರ್ಕವೇರ್ಪಡಿಸಿ ರಾಜಕೀಯ ಪಕ್ಷಗಳು ಸಂಪರ್ಕ ಸೇತುವೆಯಂತೆ ವರ್ತಿಸುತ್ತವೆ. ಪಕ್ಷದ ಕಾರ್ಯಕರ್ತರು ಸರ್ಕಾರದ ಕಾರ್ಯಗಳನ್ನು ಜನರಿಗೆ ತಲುಪಿಸುತ್ತಾರೆ. ಜನರು ತಮ್ಮ ವಿಮರ್ಶೆ, ಪ್ರತಿಕ್ರಿಯೆ ಮತ್ತು ಸಲಹೆಗಳನ್ನು ನೀಡುವುದರ ಮೂಲಕ ಸರ್ಕಾರವು ತನ್ನ ಕಾರ್ಯದಕ್ಷತೆಯನ್ನು ಹೆಚ್ಚಿಸಿಕೊಳ್ಳುವಂತೆ ಮಾಡುತ್ತದೆ.

7. ರಾಜಕೀಯ ಶಿಕ್ಷಣ ಮತ್ತು ಅರಿವು:

ರಾಜಕೀಯ ಪಕ್ಷಗಳು ಜನತೆಗೆ ರಾಜಕೀಯ ಶಿಕ್ಷಣವನ್ನು ನೀಡಿ ಅವರಲ್ಲಿ ತಮ್ಮ ಜವಾಬ್ದಾರಿಗಳ ಬಗ್ಗೆ ಅರಿವು ಮೂಡಿಸುತ್ತವೆ. ಇವು ದೇಶದ ಮೂಲೆ ಮೂಲೆಗಳಲ್ಲಿ ನಡೆಯುವ ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ಘಟನೆಗಳ ವಿವರಗಳನ್ನು ಜನರಿಗೆ ತಲುಪಿಸುತ್ತವೆ. ಅವುಗಳ ಬಗ್ಗೆ ಜನಾಭಿಪ್ರಾಯ ಕ್ರೋಢೀಕರಿಸುತ್ತವೆ. ಇದರಿಂದ ಮತದಾರರಲ್ಲಿ ಅನೇಕ ವಿಷಯಗಳ ಬಗ್ಗೆ ತಿಳುವಳಿಕೆ ಮೂಡಿ ಅವರು ತಮ್ಮದೇ ಆದ ರಾಜಕೀಯ ನಿರ್ಧಾರ ಕೈಗೊಳ್ಳಲು ಸಾಧ್ಯವಾಗುತ್ತದೆ.

8. ಸಾರ್ವಜನಿಕ ಹಿತಾಸಕ್ತಿಯ ರಕ್ಷಣೆ:

ರಾಜಕೀಯ ಪಕ್ಷಗಳು ದೇಶದಲ್ಲಿರುವ ವಿವಿಧ ಜಾತಿ, ಧರ್ಮ, ಜನಾಂಗ, ಪ್ರದೇಶಗಳಿಗೆ ಸೇರಿದ ಜನರ ವಿವಿಧ ಹಿತಾಸಕ್ತಿಗಳನ್ನು ರಕ್ಷಿಸಲು ಪ್ರಯತ್ನಿಸುತ್ತವೆ. ಇವು ರಾಷ್ಟ್ರೀಯ ಹಿತಾಸಕ್ತಿಗಳಾದ ರಾಷ್ಟ್ರೀಯ ಭದ್ರತೆ, ರಾಷ್ಟ್ರಾಭಿವೃದ್ಧಿ, ವಿಶ್ವಶಾಂತಿ ಮತ್ತು ಭಾವೈಕ್ಯತೆ ಮುಂತಾವುದಗಳ ಮೂಲಕ ಪ್ರಜೆಗಳಲ್ಲಿ ಐಕ್ಯತೆಯನ್ನು ಮೂಡಿಸುತ್ತವೆ. ದೇಶವು ಬಿಕ್ಕಟ್ಟಿಗೆ ಸಿಲುಕಿದಾಗ ಅವರಲ್ಲಿ ರಾಷ್ಟ್ರೀಯ ಮನೋಭಾವನೆಯನ್ನು ಬಡಿದೆಬ್ಬಿಸುತ್ತವೆ. ಅಲ್ಲದೆ ಆಂತರಿಕ ಸಮಸ್ಯೆಗಳು ಎದುರಾದಾಗ ಪ್ರಜೆಗಳಲ್ಲಿ ಭ್ರಾತೃತ್ವವನ್ನು ಮೂಡಿಸುತ್ತವೆ. ಹೀಗೆ ರಾಜಕೀಯ ಪಕ್ಷಗಳು ದೇಶದಲ್ಲಿರುವ ವಿವಿಧ ವರ್ಗಗಳ ಹಿತಾಸಕ್ತಿಯನ್ನು ಕಾಪಾಡಿ ರಾಷ್ಟ್ರೀಯ ಏಕತೆ ಮತ್ತು ಭಾವೈಕ್ಯತೆಯನ್ನು ಪೋಷಿಸುವ ಕಾರ್ಯವನ್ನು ನಿರ್ವಹಿಸುತ್ತವೆ.

ಮೇಲಿನ ಎಲ್ಲ ಅಂಶಗಳನ್ನು ಗಮನಿಸಿದಾಗ ರಾಷ್ಟ್ರಗಳ ಏಳಿಗೆಗೆ ರಾಜಕೀಯ ಪಕ್ಷಗಳು ತಾಯಿಬೇರಿದ್ದಂತೆ. ಒಂದು ವೇಳೆ ಇವುಗಳೇ ರೋಗಗ್ರಸ್ಥವಾದರೆ ರಾಜ್ಯವೆಂಬ ವೃಕ್ಷವು ಅಲುಗಾಡದೇ ಇರದು. ಕೆಲವು ರಾಷ್ಟ್ರಗಳಲ್ಲಿರಾಜಕೀಯ ಪಕ್ಷಗಳು ಸಂವಿಧಾನದ ಚೌಕಟ್ಟಿನಲ್ಲಿಯೇ ಬೆಳೆದು ಬಂದರೆ ಇನ್ನು ಕೆಲವು ರಾಷ್ಟ್ರಗಳಲ್ಲಿ ಅವು ಸಂವಿಧಾನೇತರ ಬೆಳವಣಿಗೆ ಎಂಬುದು ವಿಶೇಷ. ಸಂವಿಧಾನವು ಪಕ್ಷಗಳ ಬಗ್ಗೆಯಾಗಲಿ, ಪದ್ಧತಿಯ ಬಗ್ಗೆಯಾಗಲಿ ಪ್ರಸ್ತಾಪಿಸದಿದ್ದರೂ ಕೂಡಾ, ಆಯಾ ರಾಷ್ಟ್ರಗಳ ರಾಜಕೀಯ ತತ್ವಗಳಿಗನುಗುಣವಾಗಿ ರಾಜಕೀಯ ಪಕ್ಷಗಳು ಬೆಳೆದು ಬಂದಿವೆ. ರಾಜಕೀಯ ಪಕ್ಷಗಳು ಕ್ಷುಲ್ಲಕ ಕಾರಣಕ್ಕಾಗಿ ಒಡೆದು ಹೋಗುವುದು ಹಾಗೂ ಮತ್ತೆ ಒಗ್ಗೂಡುವುದು ಹೆಚ್ಚಿನ ರಾಷ್ಟ್ರಗಳ ಪಕ್ಷಪದ್ಧತಿಯಲ್ಲಿ ಕಂಡುಬರುವ ಸಾಮಾನ್ಯ ಸಂಗತಿಯಾಗಿದೆ. ಭಾರತವೂ ಇದಕ್ಕೆ ಹೊರತಾಗಿಲ್ಲ. ರಾಜಕೀಯ ಪಕ್ಷಗಳು ಇಂತಹ ಸಂದರ್ಭಗಳಲ್ಲಿ ತಮ್ಮ ನಾಮಾಂಕಿತವನ್ನು

ಬದಲಾವಣೆ ಮಾಡಿಕೊಳ್ಳುತ್ತವೆಯೇ ವಿನಹಃ ತಮ್ಮ ತತ್ವಗಳನ್ನಲ್ಲ ಎಂಬುದು ಗಮನಾರ್ಹ ಸಂಗತಿ.

ಅಭ್ಯಾಸ

I. ಒಂದು ವಾಕ್ಯದಲ್ಲಿ ಉತ್ತರಿಸಿ:

1. ಪಕ್ಷಪದ್ಧತಿಯನ್ನು ಮೊಟ್ಟಮೊದಲು ಪರಿಚಯಿಸಿದ ರಾಷ್ಟ್ರ ಯಾವುದು?
2. ರಾಜಕೀಯ ಪಕ್ಷ ಎಂದರೇನು?
3. ಏಕಪಕ್ಷ ಪದ್ಧತಿ ಎಂದರೇನು?
4. ದ್ವಿಪಕ್ಷ ಪದ್ಧತಿ ಎಂದರೇನು?
5. ಬಹುಪಕ್ಷ ಪದ್ಧತಿ ಎಂದರೇನು?
6. ಅಮೇರಿಕಾದ ಎರಡು ರಾಜಕೀಯ ಪಕ್ಷಗಳನ್ನು ಹೆಸರಿಸಿ.
7. ಚೀನಾದ ಕಮ್ಯೂನಿಸ್ಟ್ ಪಾರ್ಟಿಯ ಅತ್ಯುನ್ನತ ಅಂಗ ಯಾವುದು?

II. ಎರಡು ಅಥವಾ ಮೂರು ವಾಕ್ಯಗಳಲ್ಲಿ ಉತ್ತರಿಸಿರಿ:

1. ರಾಜಕೀಯ ಪಕ್ಷದ ಒಂದು ವ್ಯಾಖ್ಯೆ ಬರೆಯಿರಿ.
2. ರಾಜಕೀಯ ಪಕ್ಷಗಳ ಎರಡು ಪ್ರಮುಖ ಕಾರ್ಯಗಳನ್ನು ತಿಳಿಸಿ.
3. ರಾಜಕೀಯ ಪಕ್ಷದ ಯಾವುದಾದರೂ ಎರಡು ಲಕ್ಷಣ ತಿಳಿಸಿ.
4. ಭಾರತದಲ್ಲಿ ಬಹುಪಕ್ಷ ಪದ್ಧತಿ ಮೂಡಿ ಬರಲು ಕಾರಣವೇನು?
5. ರಾಷ್ಟ್ರೀಯ ಹಾಗೂ ಪ್ರಾದೇಶಿಕ ಪಕ್ಷಗಳ ನಡುವಿನ ವ್ಯತ್ಯಾಸವನ್ನು ಗುರ್ತಿಸಿ.
6. ಜಪಾನಿನ ನಾಲ್ಕು ರಾಜಕೀಯ ಪಕ್ಷಗಳನ್ನು ಹೆಸರಿಸಿ.
7. ಭಾರತದ ಪಕ್ಷಪದ್ಧತಿಯ ನಾಲ್ಕು ಲಕ್ಷಣಗಳನ್ನು ತಿಳಿಸಿ.
8. ಚೀನಾದ ರಾಷ್ಟ್ರೀಯ ಕಾಂಗ್ರೆಸ್ ರಚಿಸುವ ಮೂರು ಸಮಿತಿಗಳನ್ನು ಹೆಸರಿಸಿ.
9. 1951 ರ ಜನತಾ ಪ್ರಾತಿನಿಧ್ಯ ಕಾಯ್ದೆಯ 29 ಏಯ ಮಹತ್ವವನ್ನು ತಿಳಿಸಿ.

III. ಐದು ಅಥವಾ ಆರು ವಾಕ್ಯಗಳಲ್ಲಿ ಉತ್ತರಿಸಿ:

1. ಪಕ್ಷ ಪದ್ಧತಿಯ ವಿಧಗಳು ಯಾವುವು? ಉದಾಹರಣೆಯೊಂದಿಗೆ ವಿವರಿಸಿ.
2. ರಾಜಕೀಯ ಪಕ್ಷದ ಪ್ರಮುಖ ಲಕ್ಷಣಗಳನ್ನು ವಿವರಿಸಿ.
3. ಫ್ರಾನ್ಸ್‌ನ ರಾಜಕೀಯ ಪಕ್ಷ ಪದ್ಧತಿ ಕುರಿತು ಟಿಪ್ಪಣಿ ಬರೆಯಿರಿ.

IV. ಎಂಟು ಅಥವಾ ಹತ್ತು ವಾಕ್ಯಗಳಲ್ಲಿ ಉತ್ತರಿಸಿರಿ:

1. **ರಾಜಕೀಯ ಪಕ್ಷಗಳ ಕಾರ್ಯಗಳನ್ನು ವಿವರಿಸಿ.**

ಸಲಹಾತ್ಮಕ ಚಟುವಟಿಕೆಗಳು:

1. ಪಕ್ಷ ರಹಿತ ಪ್ರಜಾಪ್ರಭುತ್ವದ ಸಾಧ್ಯ ಅಸಾಧ್ಯತೆಯನ್ನು ಚರ್ಚಿಸಿ.
2. 'ರಾಷ್ಟ್ರ ನಿರ್ಮಾಣದಲ್ಲಿ ರಾಜಕೀಯ ಪಕ್ಷದ ಪಾತ್ರ' ಈ ವಿಷಯದ ಕುರಿತು ಶಿಕ್ಷಕರ ಮಾರ್ಗದರ್ಶನದೊಂದಿಗೆ ಕಿರು ಪ್ರಬಂಧ ಸಿದ್ಧಪಡಿಸಿ.

ಅಧ್ಯಾಯ-10 ಚುನಾವಣೆ (Election)

ಕಲಿಕಾ ಉದ್ದೇಶಗಳು

1. ಚುನಾವಣೆಯ ಅರ್ಥ ಮತ್ತು ವ್ಯಾಖ್ಯೆಯನ್ನು ತಿಳಿಯುವುದು.
2. ಚುನಾವಣೆಯ ಮಹತ್ವವನ್ನು ಮೆಚ್ಚಿಕೊಳ್ಳುವುದು.
3. ಚುನಾವಣೆಯ ವಿಧಗಳನ್ನು ಗುರುತಿಸುವುದು.
4. ಮತದಾನದ ಪ್ರಕಾರಗಳನ್ನು ಗ್ರಹಿಸುವುದು.
5. ಭಾರತದಲ್ಲಿರುವ ಚುನಾವಣಾ ಪ್ರಕ್ರಿಯೆಯನ್ನು ಮನನಮಾಡಿಕೊಳ್ಳುವುದು.

"Ballot is stronger than bullet"

"ಮದ್ದುಗುಂಡುಗಳಿಗಿಂತಲು ಮತಪತ್ರವು ಶಕ್ತಿಶಾಲಿ" **ಅಬ್ರಹಾಂ ಲಿಂಕನ್**

"ಚುನಾವಣೆಯ ಫಲಿತಾಂಶಕ್ಕಿಂತ ನಾವು ಗೆಲ್ಲುವ ಅಥವಾ ಸೋಲುವ ರೀತಿ ಹೆಚ್ಚು ಮುಖ್ಯವಾದುದು ತಪ್ಪು ದಾರಿಯಲ್ಲಿ ಗೆಲ್ಲುವುದಕ್ಕಿಂತ ಗೌರವದಿಂದ ಸೋಲುವುದು ಉತ್ತಮ."

-ಜವಾಹರ್ ಲಾಲ್ ನೆಹರು

ಪೀಠಿಕೆ:

ಪೌರರಾದ ನಾವು ಸ್ವಭಾವತ ರಾಜಕೀಯ ಜೀವಿಗಳಾಗಿದ್ದೇವೆ. ನಮ್ಮ ದೇಹ, ಮನಸ್ಸು ಮತ್ತು ಬುದ್ದಿಶಕ್ತಿಯ ಮೇಲೆ ಪರಮಾಧಿಕಾರವನ್ನು ಹೊಂದಿದ್ದೇವೆ. ನಮಗೆಲ್ಲರಿಗೂ ನಮ್ಮನ್ನಾಳಿಕೊಳ್ಳುವ ಶಕ್ತಿ, ಸಾಮರ್ಥಗಳು ಇವೆ. ಬುದ್ದಿಜೀವಿಗಳಾದ ನಾವು ಅನೇಕ ನಿರ್ಣಯಗಳನ್ನು ಕೈಗೊಳ್ಳುತ್ತೇವೆ. ಈ ನಿರ್ಣಯಗಳು ಆಯ್ಕೆಯ ರೂಪದಲ್ಲಿಯೂ ಪ್ರಕಟಗೊಳ್ಳುತ್ತವೆ. ನಮಗೆಲ್ಲರಿಗೂ ವೈಯಕ್ತಿಕ ಪರಮಾಧಿಕಾರವಿದ್ದರೂ ಅದನ್ನು ಪೂರ್ಣಪ್ರಮಾಣದಲ್ಲಿ ಬಳಕೆ ಮಾಡಿಕೊಳ್ಳಲು ಸಾಧ್ಯವಾಗುವುದಿಲ್ಲ. ಏಕೆಂದರೆ ನಮ್ಮಂತೆಯೇ ಇತರರಿಗೂ ಅವರವರ ಇಷ್ಟಾನಿಷ್ಟಗಳನ್ನು ಆಯ್ಕೆ ಮೂಲಕ ವ್ಯಕ್ತಪಡಿಸುವ ಸ್ವಾತಂತ್ರ್ಯವಿದೆ. ನಮ್ಮನ್ನು ಯಾರು ಆಳಬೇಕೆಂಬುದನ್ನು ನಿರ್ಧರಿಸುವ ಹಕ್ಕು ನಮಗಿದೆ. ಆಳುವವರನ್ನು ಆಯ್ಕೆಮಾಡಲು ನೆರವಾಗುವ ಹಕ್ಕೇ ಮತದಾನದ ಹಕ್ಕು. ಮತದಾನದ ಹಕ್ಕನ್ನು ಚಲಾಯಿಸಿ ಆಳುವವರನ್ನು ಆಯ್ಕೆಮಾಡುವ ಪ್ರಕ್ರಿಯೆಯೆ ಚುನಾವಣೆಯಾಗಿದೆ.

ಚುನಾವಣೆ ವ್ಯಕ್ತಿಯ ಆಯ್ಕೆಯ ಅಧಿಕಾರವನ್ನು ರಾಜ್ಯದೊಳಗಿನ ಸಮಸ್ತ ಜನಸ್ತೋಮದ ರಾಜಕೀಯ ಅಧಿಕಾರ ಮತ್ತು ಪರಮಾಧಿಕಾರವನ್ನಾಗಿ ಪರಿವರ್ತಿಸುತ್ತದೆ. ಚುನಾವಣೆ ಪ್ರತಿನಿಧಿಗಳನ್ನು ಆಯ್ಕೆಮಾಡಲು ಶಾಂತಿಯುತವಾಗಿ ಸರ್ಕಾರಗಳನ್ನು ಸ್ಥಾಪಿಸಲು ಮತ್ತು ಬದಲಿಸಲು ನೆರವಾಗುವ ಏಕಮಾತ್ರ ಸಾಂಸ್ಥಿಕ ಪ್ರಕ್ರಿಯೆಯಾಗಿದೆ. ಪ್ರಾಚೀನ ಕಾಲದಿಂದಲೂ ಬೆಳೆದು ಬಂದ ಚುನಾವಣೆಯು ಆಧುನಿಕ ರಾಜ್ಯಪದ್ಧತಿಯಲ್ಲಿ ಹಾಸುಹೊಕ್ಕಾಗಿದೆ. ನಿಯತಕಾಲಿಕ ಚುನಾವಣೆಗಳೇ ಆಳುವವರು ಮತ್ತು ಆಳಿಸಿಕೊಳ್ಳುವ ವರ್ಗಗಳ ಬಾಂಧವ್ಯವನ್ನು ಬೆಳೆಸುತ್ತವೆ. ಜನಾದೇಶವನ್ನೇ ಪರಮಾದೇಶವೆಂದು ನಂಬಿದ ಎಲ್ಲಾ ಸರ್ಕಾರ ಪದ್ಧತಿಗಳಿಗೂ ಚುನಾವಣೆಗಳೇ ಜೀವಾಳವಾಗಿವೆ.

10.1 ಅರ್ಥ:

ಚುನಾವಣೆ ಎಂಬ ಪದವು ಲಾಟಿನ್ ಭಾಷೆಯ ‘Eligere’ ಎಂಬ ಪದದಿಂದ ಬಂದಿದೆ. ‘Eligere’ ಎಂದರೆ ‘ಆರಿಸು’ ಅಥವಾ ‘ಆಯ್ಕೆ ಮಾಡು’ ಎಂದರ್ಥ. ರಾಜ್ಯದ ಮತದಾರರು ತಮ್ಮನ್ನಾಳುವ ಪ್ರತಿನಿಧಿಗಳನ್ನು ತಾವೇ ಆಯ್ಕೆ ಮಾಡುವ ವಿಧಾನವೇ ಚುನಾವಣೆ.

ವ್ಯಾಖ್ಯೆ:

“ಒಂದು ಅಧಿಕಾರ ಸ್ಥಾನಕ್ಕೆ ಅಥವಾ ಒಂದು ಸಂಸ್ಥೆಯ ಸದಸ್ಯತ್ವಕ್ಕೆ ಮತದಾರರು ಒಬ್ಬ ವ್ಯಕ್ತಿಯನ್ನು ಗುಪ್ತ ಮತದಾನದಿಂದಲೊ, ಕೈ ಎತ್ತುವುದರಿಂದಲೊ ಅಥವಾ ಧ್ವನಿ ಮತದಿಂದ ಆರಿಸುವ ಪ್ರಕ್ರಿಯೆಯೇ ಚುನಾವಣೆ.” **ಕನ್ನಡ ವಿಶ್ವಕೋಶ, ಸಂಪುಟ 07.**

10.2 ಮಹತ್ವ:

ಅನುವಂಶಿಕ ಅರಸೊತ್ತಿಗೆ ಮತ್ತು ಸೈನಿಕ ಸರ್ವಾಧಿಕಾರ ಪದ್ಧತಿಯನ್ನು ಹೊರತುಪಡಿಸಿ ಸಂಸದೀಯ ಸರ್ಕಾರ ಮತ್ತು ಅಧ್ಯಕ್ಷೀಯ ಸರ್ಕಾರ ಪದ್ಧತಿಗಳಲ್ಲಿ ಚುನಾವಣೆಗಳು ಅತ್ಯಗತ್ಯವಾಗಿವೆ. ಸಮಕಾಲೀನ ಪ್ರಪಂಚದಲ್ಲಿ ಬಹುತೇಕ ರಾಷ್ಟ್ರಗಳು ಪ್ರಜಾಪ್ರಭುತ್ವ ರಾಷ್ಟ್ರಗಳಾಗಿವೆ. ಪ್ರಜಾಪ್ರಭುತ್ವದಲ್ಲಿ ನಿಯತಕಾಲಿಕ ಚುನಾವಣೆಗಳ ಪಾತ್ರ ಮುಖ್ಯವಾಗಿದೆ. ಪ್ರಜಾಪ್ರಭುತ್ವ ಮತ್ತು ಚುನಾವಣೆಗಳ ನಡುವೆ ನಿಕಟವಾದ ಸಂಬಂಧವಿದೆ. ಆದುದರಿಂದ “ಚುನಾವಣೆಗಳೇ ಪ್ರಜಾಪ್ರಭುತ್ವದ ಜೀವಾಳವಾಗಿವೆ.”

ಚುನಾವಣೆಗಳಿಂದ ಹೊರಹೊಮ್ಮುವ ಜನಾದೇಶದಿಂದ ಶಾಸನಸಭೆಗಳು ರಚಿತವಾಗುತ್ತವೆ. ಶಾಸನಸಭೆಯಲ್ಲಿ ಬಹುಮತ ಪಡೆದ ರಾಜಕೀಯ ಪಕ್ಷ ಅಥವಾ ಪಕ್ಷಗಳ

ಕೂಟ ಆಡಳಿತ ಪಕ್ಷವಾಗಿ, ಬಹುಮತ ಪಡೆಯಲು ವಿಫಲವಾದ ಪಕ್ಷ ವಿರೋಧ ಪಕ್ಷವಾಗಿ ಕಾರ್ಯನಿರ್ವಹಿಸುತ್ತದೆ.

ಚುನಾವಣೆಗಳೇ ರಾಜಕೀಯ ವ್ಯವಸ್ಥೆಯ ಅಡಿಪಾಯವಾಗಿವೆ. ಚುನಾವಣೆಗಳು ಶಾಂತಿಯುತ ಮಾರ್ಗದ ಮೂಲಕ ಜನಪ್ರತಿನಿಧಿಗಳನ್ನು ಆಯ್ಕೆಮಾಡಲು, ಸರ್ಕಾರಗಳನ್ನು ಸ್ಥಾಪಿಸಲು ಮತ್ತು ಬದಲಿಸಲು ನೆರವಾಗುತ್ತವೆ. ರಾಜ್ಯ ಆಡಳಿತವನ್ನು ನಡೆಸಲು ರಾಜಕೀಯ ವರ್ಗಕ್ಕೆ ಬೇಕಾದ ಜನ ಸಮ್ಮತಿಯನ್ನು ದೊರಕಿಸಿ ಕೊಡುತ್ತವೆ. ಒಂದು ರಾಜಕೀಯ ಪಕ್ಷ ನಾಯಕತ್ವ ಮತ್ತು ನೀತಿಯ ಪರ ವಿರುದ್ಧದ, ಒಲವು ನಿಲುವುಗಳನ್ನು ದೃಢಪಡಿಸುತ್ತವೆ. ಈಗಾಗೀ ಚುನಾವಣೆಗಳೇ ರಾಜಕೀಯ ವ್ಯವಸ್ಥೆಯ ಪರಿವರ್ತನೆಯ ಸಾಧನಗಳಾಗಿವೆ. ಈ ಕೆಳಕಂಡ ಅಂಶಗಳು ಚುನಾವಣೆಯ ಮಹತ್ವವನ್ನು ಸಾದರಪಡಿಸುತ್ತವೆ. ಅವುಗಳೆಂದರೆ:

1. ರಾಜಕೀಯ ವ್ಯವಸ್ಥೆಯ ತಳಹದಿಯಾಗಿವೆ.
2. ರಾಜ್ಯದ ಎಲ್ಲಾ ಪ್ರಜೆಗಳಿಗೆ ರಾಜಕೀಯ ಸ್ವಾತಂತ್ರ್ಯ ಮತ್ತು ಸಮಾನತೆಯನ್ನು ಅನುಭವಿಸಲು ಅವಕಾಶ ಮಾಡಿಕೊಡುತ್ತವೆ.
3. ಸಾರ್ವಜನಿಕ ಹಿತಾಸಕ್ತಿಗಳ ಬಗ್ಗೆ ಸಾರ್ವಜನಿಕ ಅಭಿಪ್ರಾಯವನ್ನು ರೂಪಿಸಲು ಸಹಕಾರಿಯಾಗುತ್ತವೆ.
4. ಪ್ರಜೆಗಳು ಮತ್ತು ಪ್ರತಿನಿಧಿಗಳ ನಡುವೆ ಸುಮಧುರ ಬಾಂಧವ್ಯವನ್ನು ಬೆಳೆಸಲು ಸಹಕಾರಿಯಾಗಿವೆ.
5. ಜನರಿಗೆ ರಾಜಕೀಯ ಶಿಕ್ಷಣವನ್ನು ನೀಡುತ್ತವೆ.
6. ಜನಪ್ರತಿನಿಧಿಗಳನ್ನು ಆಯ್ಕೆ ಮಾಡಲು ನೆರವಾಗುತ್ತವೆ, ಅವರಿಗೆ ರಾಜಕೀಯ ತರಬೇತಿ ನೀಡಿ ಜನ ಸೇವೆ ಮಾಡಲು ಪ್ರೇರೇಪಿಸುತ್ತವೆ.
7. ಸರ್ಕಾರಗಳ ನಿರ್ವಹಣೆ ಮತ್ತು ಮುಂದುವರಿಕೆಗೆ ಸಹಕಾರಿಯಾಗಿವೆ.

ಒಟ್ಟಿನಲ್ಲಿ ಚುನಾವಣೆಗಳು ಜನಾದೇಶವನ್ನು ಅವಲಂಬಿಸಿದ ಪ್ರಜಾಪ್ರಭುತ್ವ ಹಾಗೂ ಮತ್ತಿತರ ಸರ್ಕಾರಗಳ ಅಳತೆಗೋಲಾಗಿವೆ. ರಾಜಕೀಯ ಪಕ್ಷಗಳು ಸರ್ಕಾರವನ್ನು ರಚಿಸಿ, ಪ್ರಜೆಗಳ ಹಿತಾಸಕ್ತಿಗಳನ್ನು ಈಡೇರಿಸಲು ಚುನಾವಣೆಗಳು ಅವಕಾಶ ಮಾಡಿಕೊಡುತ್ತವೆ.

10.3 ಚುನಾವಣೆಯ ವಿಧಗಳು:

ಸಮಾಜವೊಂದರ ಸಾಮಾಜಿಕ ಮತ್ತು ಆರ್ಥಿಕ ಜೀವನದಿಂದುಂಟಾಗುವ ಅಸಮತೋಲನಗಳನ್ನು ಸರಿಪಡಿಸಲು ಚುನಾವಣೆಯು ಒಂದು ಪರಿಣಾಮಕಾರಿ ಸಾಧನವಾಗಿದೆ. ಆಧುನಿಕ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಚುನಾವಣೆಯನ್ನು ಎರಡು ವಿಧಗಳಾಗಿ ವರ್ಗೀಕರಿಸಲಾಗಿದೆ. ಅವುಗಳೆಂದರೆ:

ಚುನಾವಣೆ

1. **ಪ್ರತ್ಯಕ್ಷ ಚುನಾವಣೆ**
2. **ಪರೋಕ್ಷ ಚುನಾವಣೆ**

1. ಪ್ರತ್ಯಕ್ಷ ಚುನಾವಣೆ: (Direct Election)

ಮತದಾರರು ತಮ್ಮ ಪ್ರತಿನಿಧಿಗಳನ್ನು ತಾವೇ ನೇರವಾಗಿ ಆಯ್ಕೆ ಮಾಡುವ ವಿಧಾನವೇ ಪ್ರತ್ಯಕ್ಷ ಚುನಾವಣೆ. ಮತದಾರರು ಮತಗಟ್ಟೆಗೆ ಹೋಗಿ ಮತ ಚಲಾಯಿಸುವ ಮೂಲಕ ತಮ್ಮ ಅಭ್ಯರ್ಥಿಗಳನ್ನು ಚುನಾಯಿಸುತ್ತಾರೆ.

ಉದಾಹರಣೆ:

1. ಭಾರತದಲ್ಲಿ ಲೋಕಸಭಾ ಮತ್ತು ವಿಧಾನಸಭಾ ಸದಸ್ಯರ ಚುನಾವಣೆಗಳು.
2. ಇಂಗ್ಲೆಂಡಿನ ಪಾರ್ಲಿಮೆಂಟಿನ ಕೆಳಸದನವಾದ ಸಾಮಾನ್ಯ ಸಭೆಯ ಸದಸ್ಯರ ಚುನಾವಣೆ.
3. ಅಮೇರಿಕಾದ ಕಾಂಗ್ರೆಸ್‌ನ ಕೆಳಸದನವಾದ ಪ್ರತಿನಿಧಿ ಸಭೆಯ ಸದಸ್ಯರ ಚುನಾವಣೆ.

ಪ್ರತ್ಯಕ್ಷ ಚುನಾವಣೆಯ ಪ್ರಮುಖ ಗುಣಲಕ್ಷಣಗಳು ಈ ಕೆಳಗಿನಂತಿವೆ.

1. ಮತದಾರರಿಗೆ ಉತ್ತಮ ಪ್ರತಿನಿಧಿಗಳನ್ನು ಆಯ್ಕೆ ಮಾಡುವ ಸ್ವಾತಂತ್ರ್ಯವನ್ನು ಕಲ್ಪಿಸಿಕೊಡುತ್ತದೆ.
2. ಮತದಾರರು ಹಾಗೂ ಪ್ರತಿನಿಧಿಗಳ ನಡುವೆ ಬಾಂಧವ್ಯವನ್ನು ಬೆಳಸುತ್ತದೆ.
3. ಮತದಾರರಲ್ಲಿ ರಾಜಕೀಯ ಪರಿಜ್ಞಾನವನ್ನು ಮೂಡಿಸುತ್ತದೆ.
4. ಆಯ್ಕೆಯಾದ ಪ್ರತಿನಿಧಿಗಳು ಮತದಾರರ ಆಶೋತ್ತರಗಳಿಗೆ ಸ್ಪಂದಿಸುತ್ತಾರೆ. ಏಕೆಂದರೆ ಇದು ಪ್ರತಿನಿಧಿಗಳ ಮರು ಆಯ್ಕೆಗೆ ಪ್ರಮುಖ ಮಾನದಂಡವಾಗಿವೆ.
5. ಪ್ರತಿನಿಧಿಗಳು ತಮ್ಮ ಕರ್ತವ್ಯಗಳನ್ನು ದಕ್ಷತೆ ಮತ್ತು ಎಚ್ಚರಿಕೆಯಿಂದ ನಿರ್ವಹಿಸುತ್ತಾರೆ. ಏಕೆಂದರೆ ನೇರವಾಗಿ ಚುನಾಯಿಸಿದ ಪ್ರತಿನಿಧಿಗಳನ್ನು ಮತದಾರರು ನಿರಂತರವಾಗಿ ಗಮನಿಸುತ್ತಿರುತ್ತಾರೆ.

2. ಪರೋಕ್ಷ ಚುನಾವಣೆ: (Indirect Election)

ಮತದಾರರು ನೇರವಾಗಿ ಮತದಾನದಲ್ಲಿ ಪಾಲ್ಗೊಳ್ಳದೆ ತಮ್ಮಿಂದ ಆಯ್ಕೆಯಾದ ಪ್ರತಿನಿಧಿಗಳೇ ಚುನಾವಣೆಯಲ್ಲಿ ಭಾಗವಹಿಸಿ ಆಯ್ಕೆ ಮಾಡುವ ವಿಧಾನವೇ ಪರೋಕ್ಷ ಚುನಾವಣೆ. ಈ ಪದ್ಧತಿಯಲ್ಲಿ ಪ್ರಜೆಗಳು ಮತಗಟ್ಟೆಗೆ ಹೋಗಿ ನೇರವಾಗಿ ಮತ ಚಲಾಯಿಸುವುದಿಲ್ಲ. ಉದಾಹರಣೆಗೆ: ಭಾರತದ ರಾಷ್ಟ್ರಪತಿಯವರನ್ನು ಸಂಸತ್ ಸದಸ್ಯರು ಮತ್ತು ರಾಜ್ಯ ವಿಧಾನಸಭೆಗಳ ಸದಸ್ಯರನ್ನೊಳಗೊಂಡ ನಿರ್ವಚನಾ ಮಂಡಳಿಯು (Electoral College) ಆಯ್ಕೆ ಮಾಡುತ್ತದೆ. ಅಲ್ಲದೆ ರಾಜ್ಯದಲ್ಲಿ ಸಭಾ ಸದಸ್ಯರನ್ನು ಹಾಗೂ ವಿಧಾನಪರಿಷತ್ ಅಸ್ತಿತ್ವದಲ್ಲಿರುವ ರಾಜ್ಯಗಳಲ್ಲಿ ಸದಸ್ಯರ ಆಯ್ಕೆಯು ಪರೋಕ್ಷ ಚುನಾವಣೆಯ ಮೂಲಕ ನಡೆಯುತ್ತದೆ. ಅಮೇರಿಕಾದ ಅಧ್ಯಕ್ಷರನ್ನು ಪ್ರಜೆಗಳಿಂದ ಆಯ್ಕೆಯಾದ '**ವಿಶೇಷ ಮತದಾರರ ವರ್ಗ**' ಆಯ್ಕೆ ಮಾಡುತ್ತದೆ.

ಪರೋಕ್ಷ ಚುನಾವಣೆಯ ಗುಣಲಕ್ಷಣಗಳು ಈ ಕೆಳಕಂಡಂತಿವೆ.

1. ಸಮರ್ಥ ಅಭ್ಯರ್ಥಿಗಳ ಆಯ್ಕೆಗೆ ಅವಕಾಶವಿದೆ.
2. ದೊಡ್ಡ ಪ್ರಮಾಣದ ಚುನಾವಣಾ ಅಕ್ರಮಗಳನ್ನು ತಡೆಯಲು ನೆರವಾಗುತ್ತದೆ.
3. ಯೋಗ್ಯ ಅಭ್ಯರ್ಥಿಗಳು ಆರಿಸಿ ಬರುವುದರಿಂದ ರಾಷ್ಟ್ರದ ಪ್ರಗತಿ ಸಾಧ್ಯವಾಗುತ್ತದೆ.
4. ಕೇವಲ ಪ್ರಜಾಪ್ರತಿನಿಧಿಗಳು ಚುನಾವಣಾ ಪ್ರಕ್ರಿಯೆಯಲ್ಲಿ ಭಾಗವಹಿಸುವುದರಿಂದ ಚುನಾವಣೆ ಶಾಂತ ರೀತಿಯಿಂದ ಜರುಗುತ್ತವೆ.
5. ಚುನಾವಣಾ ವೆಚ್ಚ ಕಡಿಮೆಯಾಗುವುದರಿಂದ ಆರ್ಥಿಕವಾಗಿ ಹಿಂದುಳಿದ ರಾಷ್ಟ್ರಗಳಿಗೆ ಸೂಕ್ತವಾಗಿದೆ.

ಪ್ರಾಚೀನ ಗ್ರೀಕ್ ದೇಶದ ಅಥೆನ್ಸ್ ಮತ್ತು ಸ್ಪಾರ್ಟದಂತಹ ನಗರ ರಾಜ್ಯಗಳಲ್ಲಿಯೂ ಪ್ರತ್ಯಕ್ಷ ಪ್ರಜಾಪ್ರಭುತ್ವ ಪದ್ಧತಿ ಅಸ್ತಿತ್ವದಲ್ಲಿತ್ತು. ಅಲ್ಲಿಯ ಜನರು ನೇರವಾಗಿ ಸರ್ಕಾರದ ಕಾರ್ಯ ಕಲಾಪಗಳಲ್ಲಿ ಭಾಗವಹಿಸುತ್ತಿದ್ದರು. ಆದರೆ ಆಧುನಿಕ ರಾಜ್ಯಗಳು ಗಾತ್ರದಲ್ಲಿ ದೊಡ್ಡವಾಗಿವೆ. ಇಲ್ಲಿ ಎಲ್ಲಾ ಹಂತಗಳಲ್ಲಿಯೂ ನೇರ ಪ್ರಜಾಪ್ರಭುತ್ವವನ್ನು ಅಳವಡಿಸಿಕೊಳ್ಳುವುದು ಕಷ್ಟಕರವಾಗಿದೆ. ಆದ್ದರಿಂದ ವಿಶ್ವದ ಬಹುತೇಕ ರಾಷ್ಟ್ರಗಳು ಪರೋಕ್ಷ ಪ್ರಜಾಪ್ರಭುತ್ವವನ್ನು ಅಳವಡಿಸಿಕೊಂಡಿವೆ. "ಆಯಾ ದೇಶದ ನಿಯಮಗಳಿಗೆ ಅನುಗುಣವಾಗಿ ಮತಾಧಿಕಾರವನ್ನು ಹೊಂದಿದವರೆಲ್ಲರನ್ನು ಒಳಗೊಂಡಿರುವ ವರ್ಗವೇ ಮತದಾರವರ್ಗ".

ಚುನಾವಣೆಗಳು ಮತದಾರರಿಗೆ ತಮಗೆ ಬೇಕಾದ ಅಭ್ಯರ್ಥಿಗಳು ಮತ್ತು ಪಕ್ಷವನ್ನು ಅಧಿಕಾರಕ್ಕೆ ತರಲು ನೆರವಾಗುತ್ತವೆ. ಜನಬೆಂಬಲವನ್ನು ಪಡೆದು ಬಹುಮತ ಗಳಿಸಿದ ರಾಜಕೀಯ ಪಕ್ಷವು ಅಧಿಕಾರಕ್ಕೆ ಬಂದರೆ ಅದು ಆಡಳಿತ ಪಕ್ಷವಾಗುತ್ತದೆ. ಈ ಪ್ರಕ್ರಿಯೆ ವಿವಿಧ ಪ್ರಕಾರದ ಚುನಾವಣೆಗಳಿಗೆ ಅವಕಾಶ ಮಾಡಿಕೊಡುತ್ತಿದೆ. ಅವುಗಳೆಂದರೆ:

1. ಸಾರ್ವತ್ರಿಕ ಚುನಾವಣೆ: (General Election)

ಶಾಸನ ಸಭೆಗಳಿಗೆ ಜನಪ್ರತಿನಿಧಿಗಳನ್ನು ಆಯ್ಕೆ ಮಾಡಲು ದೇಶದ ಎಲ್ಲ ಮತದಾರರು ಮತ ಚಲಾಯಿಸುವ ಪದ್ಧತಿಯೇ ಸಾರ್ವತ್ರಿಕ ಚುನಾವಣೆ.

2. ಮರು ಚುನಾವಣೆ: (Re-Election)

ಚುನಾವಣೆಗಳು ನಡೆಯುವ ಸಂದರ್ಭದಲ್ಲಿ ಅವ್ಯವಹಾರಗಳು ನಡೆದರೆ ಅಲ್ಲಿನ ಚುನಾವಣೆಗಳನ್ನು ರದ್ದುಗೊಳಿಸಿ, ಪುನಃ ಚುನಾವಣೆಗಳನ್ನು ನಡೆಸುವುದೇ ಮರು ಚುನಾವಣೆ ಉದಾಹರಣೆಗೆ: ಮತಯಂತ್ರ ನಾಶಪಡಿಸುವಿಕೆ, ಚುನಾವಣಾ ಸಿಬ್ಬಂದಿಗೆ ಅಡಚಣೆ ಇತ್ಯಾದಿ.

3. ಉಪಚುನಾವಣೆ (By-Election)

ಚುನಾವಣೆಯಲ್ಲಿ ಆಯ್ಕೆಯಾದ ಶಾಸನಸಭಾ ಸದಸ್ಯರು ತಮ್ಮ ನಿಗದಿತ ಅವಧಿ ಮುಗಿಯುವ ಮುನ್ನವೇ ಮರಣ ಹೊಂದಿದರೆ ಅಥವಾ ರಾಜೀನಾಮೆ ನೀಡಿದರೆ ಅಥವಾ ಸದಸ್ಯತ್ವವನ್ನು ಕಳೆದುಕೊಂಡರೆ ಆ ಸ್ಥಾನಕ್ಕೆ ನಡೆಯುವ ಚುನಾವಣೆಯೇ ಉಪಚುನಾವಣೆ.

ಉದಾಹರಣೆಗೆ- ಭಾರತದಲ್ಲಿ ಶಾಸನ ಸಭೆಯ ಸದಸ್ಯತ್ವದ ಸ್ಥಾನ ತೆರವಾದರೆ ಆರು ತಿಂಗಳ ಒಳಗಾಗಿ ಚುನಾವಣೆ ನಡೆಸುವ ಪದ್ಧತಿ ಇದೆ.

4. ಮಧ್ಯಂತರ ಚುನಾವಣೆ (Interiem-Election)

ಒಂದು ನಿರ್ಧಿಷ್ಟ ಅವಧಿಗೆ ಆಯ್ಕೆಯಾದ ಶಾಸನ ಸಭೆಯು ತನ್ನ ಅಧಿಕಾರದ ಅವಧಿ ಮುಗಿಯುವ ಮುನ್ನವೇ ವಿಸರ್ಜಿಸಲ್ಪಟ್ಟಾಗ ನಡೆಯುವ ಚುನಾವಣೆಯೇ ಮಧ್ಯಂತರ ಚುನಾವಣೆ. ಉದಾಹರಣೆಗೆ ಭಾರತದ ವಿವಿಧ ರಾಜ್ಯಗಳ ವಿಧಾನ ಸಭೆ ಮತ್ತು ಲೋಕಸಭೆಗೆ ಐದು ವರ್ಷ ಪೂರೈಸುವ ಮುನ್ನವೇ ವಿಸರ್ಜನೆಗೊಂಡಾಗ ನಡೆದ ಚುನಾವಣೆಗಳೆಲ್ಲವೂ ಮಧ್ಯಂತರ ಚುನಾವಣೆಗಳಾಗಿವೆ.

10.4 ಮತಾಧಿಕಾರದ ಬಗೆಗಳು: (Kinds of Franchise)

ಆಧುನಿಕ ರಾಜಕೀಯ ವ್ಯವಸ್ಥೆಯಲ್ಲಿ ಮತದಾರ ವರ್ಗ ಮತ್ತು ಪ್ರತಿನಿಧಿ ವರ್ಗಗಳು ರಾಷ್ಟ್ರವೆಂಬ ರಥದ ಎರಡು ಚಕ್ರಗಳಿದ್ದಂತೆ, ಯಾವುದಾದರೊಂದು ಚಕ್ರ ಕಳಚಿದರೂ ರಾಷ್ಟ್ರ ಎಂಬ ರಥ ಮುಗ್ಗರಿಸುತ್ತದೆ. ಆದುದರಿಂದ ಪ್ರಜ್ಞಾವಂತ ಮತದಾರರಿಂದ ಯೋಗ್ಯ ಪ್ರತಿನಿಧಿಗಳು ಆಯ್ಕೆಯಾದರೆ ದೇಶದ ಭವಿಷ್ಯ ಉಜ್ವಲಗೊಳ್ಳುತ್ತದೆ. ಮತದಾನದ ಹಕ್ಕನ್ನು ಎಲ್ಲರಿಗೂ ಕೊಡಬೇಕೆ? ಅಥವಾ ಕೆಲವರಿಗೆ ಮಾತ್ರ ಕೊಡಬೇಕೆ? ಎಂಬುದರ ಬಗ್ಗೆ

ರಾಜ್ಯಶಾಸ್ತ್ರಜ್ಞರಲ್ಲಿಯೇ ಭಿನ್ನಾಭಿಪ್ರಾಯಗಳಿವೆ. ಇದಕ್ಕೆ ಸಂಬಂಧಿಸಿದಂತೆ ರಾಜ್ಯಶಾಸ್ತ್ರಜ್ಞರು ಮೂರು ಪ್ರಕಾರದ ಮತಾಧಿಕಾರಗಳನ್ನು ಗುರುತಿಸಿದ್ದಾರೆ ಅವುಗಳೆಂದರೆ:

1. ಸಾರ್ವತ್ರಿಕ- ವಯಸ್ಕ ಮತಾಧಿಕಾರ ಪದ್ಧತಿ
2. ನಿರ್ಬಂಧಿತ ಅಥವಾ ಸೀಮಿತ ಮತಾಧಿಕಾರ ಪದ್ಧತಿ.
3. ಪ್ರಮಾಣಾನುಗುಣ ಪ್ರಾತಿನಿಧ್ಯ ಮತಾಧಿಕಾರ ಪದ್ಧತಿ.

1. ಸಾರ್ವತ್ರಿಕ-ವಯಸ್ಕ ಮತಾಧಿಕಾರ ಪದ್ಧತಿ: (Universal Adult Franchise)

ಜಾತಿ, ಮತ, ಬಣ್ಣ, ಲಿಂಗ, ಧರ್ಮ, ಹುಟ್ಟು ಮತ್ತು ಸ್ಥಾನಮಾನಗಳ ಆಧಾರದ ಮೇಲೆ ಯಾವುದೇ ತಾರತಮ್ಯ ಮಾಡದೆ ಒಂದು ರಾಷ್ಟ್ರದ ಎಲ್ಲಾ ವಯಸ್ಕ ಅಥವಾ ಪ್ರೌಢ ನಾಗರಿಕರಿಗೆ ಮತದಾನದ ಹಕ್ಕನ್ನು ನೀಡಿರುವ ಪದ್ಧತಿಯೇ ಸಾರ್ವತ್ರಿಕ ವಯಸ್ಕ ಮತದಾನ ಪದ್ಧತಿ. ಈ ಪದ್ಧತಿಯನ್ನು ಅನುಸರಿಸುವ ರಾಷ್ಟ್ರಗಳಲ್ಲಿ ಒಂದು ನಿರ್ದಿಷ್ಟ ವಯೋಮಾನದ ಎಲ್ಲಾ ಪೌರರು ಮತದಾನದ ಹಕ್ಕನ್ನು ಹೊಂದಿರುತ್ತಾರೆ. ಆದರೆ ಮತದಾನದ ವಯಸ್ಸು ರಾಷ್ಟ್ರದಿಂದ ರಾಷ್ಟ್ರಕ್ಕೆ ಭಿನ್ನವಾಗಿರುತ್ತದೆ ಉದಾಹರಣೆಗೆ: ಮತದಾನದ ವಯಸ್ಸು ಭಾರತ, ಬ್ರಿಟನ್, ಚೀನಾ, ರಷ್ಯಾ ಅಮೇರಿಕಾ ದೇಶಗಳಲ್ಲಿ 18 ವರ್ಷಗಳಾದರೆ, ಸ್ವಿಡ್ಜರ್ ಲ್ಯಾಂಡ್‌ನಲ್ಲಿ ಮತದಾನದ ವಯಸ್ಸು 20 ವರ್ಷಗಳು.

ಸಾರ್ವತ್ರಿಕ ವಯಸ್ಕ ಮತದಾನ ಪದ್ಧತಿಯು ಆಚರಣೆಯಲ್ಲಿರುವ ರಾಷ್ಟ್ರಗಳಲ್ಲಿ ಈ ಕೆಳಗೆ ನಮೂದಿಸಿರುವ ವ್ಯಕ್ತಿಗಳಿಗೆ ಮತದಾನದ ಹಕ್ಕನ್ನು ನಿರಾಕರಿಸಲಾಗಿದೆ.

ಎ) ಅಪ್ರಾಪ್ತ ವಯಸ್ಕರು: (Minors)

ಬಿ) ಮಾನಸಿಕ ಅಸ್ವಸ್ಥರು: (Person of Unsound Mind)

ಸಿ) ವಿದೇಶಿಯರು: (Foreigners)

ಡಿ) ಅಪರಾಧಿಗಳು: (Criminals)

ಇ) ದಿವಾಳಿಕೋರರು: (Insolvent)

ಸಾರ್ವತ್ರಿಕ ವಯಸ್ಕ ಮತದಾನ ಪದ್ಧತಿಯು ಇಂದು ವಿಶ್ವದ ಬಹುತೇಕ ಪ್ರಜಾಸತ್ತಾತ್ಮಕ ರಾಷ್ಟ್ರಗಳಲ್ಲಿ ಆಚರಣೆಯಲ್ಲಿದೆ. ಇದು ಪರೋಕ್ಷ ಪ್ರಜಾಪ್ರಭುತ್ವ ಪದ್ಧತಿಯಲ್ಲಿ ಸರ್ಕಾರವನ್ನು ಆಯ್ಕೆ ಮಾಡುವ ಮುಂದುವರಿಸುವ ಅಥವಾ ಬದಲಿಸುವ ಪ್ರಕ್ರಿಯೆಯಾಗಿದೆ.

ಸಾರ್ವತ್ರಿಕ ವಯಸ್ಕ ಮತದಾನ ಪದ್ಧತಿಯನ್ನು ಭಾರತದಲ್ಲಿ ಜಾರಿಗೊಳಿಸಬೇಕೆ? ಅಥವಾ ಬೇಡವೆ? ಎಂಬುದರ ಬಗ್ಗೆ ಸಂವಿಧಾನ ರಚನಾಕಾರರಲ್ಲಿಯೂ ಭಿನ್ನಾಭಿಪ್ರಾಯಗಳಿದ್ದವು. ಪಿ. ಕೆ. ಸೇನ್ ಮತ್ತಿತರ ಸದಸ್ಯರು ಸಾರ್ವತ್ರಿಕ ವಯಸ್ಕ ಮತದಾನ ಪದ್ಧತಿಯನ್ನು ವಿರೋಧಿಸಿದರೆ, ಪಿ. ಸುಬ್ರಮಣ್ಯಮ್ ಹಾಗೂ ನೆಹರುರವರು ಇದನ್ನು ಸಮರ್ಥಿಸಿದರು. ಭಾರತೀಯರಲ್ಲಿ ರಾಜಕೀಯ ಸಮಾನತೆ ಮತ್ತು ರಾಷ್ಟ್ರೀಯ ಭಾವೈಕ್ಯತೆಯನ್ನು ಮೂಡಿಸಿ 'ನಾವೆಲ್ಲರೂ ಒಂದೇ' ಎಂಬ ಭಾವನೆ ಗಟ್ಟಿಗೊಳಿಸಲು ಪ್ರೌಢನಾಗರಿಕರೆಲ್ಲರಿಗೂ ಮತಾಧಿಕಾರದ ಹಕ್ಕನ್ನು ನೀಡುವುದೇ ಸೂಕ್ತ ಎಂದು ಸಂವಿಧಾನ ರಚನಾ ಸಭೆ ತೀರ್ಮಾನಿಸಿತು.

2. ನಿರ್ಬಂಧಿತ ಮತದಾನ ಪದ್ಧತಿ: (Restricted Franchise)

ಲಿಂಗ, ವಯಸ್ಸು, ಆಸ್ತಿ, ಅಂತಸ್ತು, ಶಿಕ್ಷಣ, ವಾಸಸ್ಥಳ, ಜನಾಂಗ ಮತ್ತು ಪೌರತ್ವ, ಇವುಗಳ ಆಧಾರದ ಮೇಲೆ ಮತದಾನದ ಹಕ್ಕನ್ನು ನೀಡಿರುವ ಪದ್ಧತಿಯೇ ಸೀಮಿತ ಮತದಾನ ಪದ್ಧತಿ. ಕೆಲವು ರಾಷ್ಟ್ರಗಳಲ್ಲಿ ಮತವನ್ನು ಚಲಾಯಿಸಲು ಈ ಕೆಳಗೆ ನಮೂದಿಸಿರುವ ಅರ್ಹತೆಗಳನ್ನು ನಿಗಧಿಪಡಿಸಲಾಗಿದೆ.

ಎ) ಆಸ್ತಿಯ ಅರ್ಹತೆ ಅಥವಾ ತೆರಿಗೆ ನೀಡುವ ಅರ್ಹತೆ:

ನಿರ್ದಿಷ್ಟ ಪ್ರಮಾಣದ ಆಸ್ತಿಯನ್ನು ಹೊಂದಿದವರಿಗೆ ಮತ್ತು ತೆರಿಗೆ ನೀಡುವವರಿಗೆ ಮತಾಧಿಕಾರದ ಹಕ್ಕನ್ನು ನೀಡಲಾಗಿತ್ತು. ಈ ಪದ್ಧತಿ ಮಧ್ಯಕಾಲೀನ ಯುಗದಲ್ಲಿ ಯೂರೋಪ್ ಖಂಡದ ಕೆಲವು ರಾಷ್ಟ್ರಗಳಲ್ಲಿತ್ತು. ಭಾರತದಲ್ಲಿಯೂ ಕೂಡ ಬ್ರಿಟಿಷರ ಆಳ್ವಿಕೆಯಲ್ಲಿ ಜಾರಿಯಲ್ಲಿತ್ತು. ಜೆ. ಎಸ್. ಮಿಲ್ ರವರು ಈ ಅರ್ಹತೆಯನ್ನು ಬಲವಾಗಿ ಸಮರ್ಥಿಸಿದರು.

ಬಿ) ವಿಧ್ಯಾಭ್ಯಾಸದ ಅರ್ಹತೆ:

ಕೆಲವು ರಾಷ್ಟ್ರಗಳಲ್ಲಿ ನಿರ್ದಿಷ್ಟ ಶಿಕ್ಷಣದ ಅರ್ಹತೆಯನ್ನು ಪಡೆದಿರುವವರಿಗೆ ಮಾತ್ರ ಮತದಾನದ ಹಕ್ಕನ್ನು ನೀಡಲಾಗಿದೆ. ಉದಾಹರಣೆಗೆ ಬ್ರೆಜಿಲ್, ಚಿಲಿ.

ಸಿ) ಪುರುಷರಿಗೆ ಮಾತ್ರ ಅರ್ಹತೆ:

ಕೆಲವು ರಾಷ್ಟ್ರಗಳು ಸ್ತ್ರೀಯರಿಗೆ ಮತದಾನದ ಹಕ್ಕನ್ನು ನಿರಾಕರಿಸಿ ಪುರುಷರು ಮಾತ್ರ ಮತದಾನ ಮಾಡಲು ಅರ್ಹರಾಗಿರುತ್ತಾರೆ. ಉದಾಹರಣೆಗೆ, ಜಾಂಬೀಯಾ, ಸೂಡಾನ್.

ಡಿ) ಜನಾಂಗದ ಅರ್ಹತೆ:

ಕೆಲವು ರಾಷ್ಟ್ರಗಳಲ್ಲಿ ಜನಾಂಗದ ಆಧಾರದ ಮೇಲೆ ಮತ ಚಲಾಯಿಸುವ ಅಧಿಕಾರವನ್ನು ನೀಡಲಾಗಿದೆ. ಉದಾಹರಣೆಗೆ ಇಂದಿಗೂ ಅಮೇರಿಕಾ ದೇಶದ ಕೆಲವು ದಕ್ಷಿಣ ರಾಜ್ಯಗಳಲ್ಲಿ ನೀಗ್ರೋ ಜನಾಂಗದವರಿಗೆ ಮತದಾನ ಮಾಡುವ ಹಕ್ಕಿಲ್ಲ.

ಇ) ಪೌರತ್ವ:

ತನ್ನ ರಾಷ್ಟ್ರಕ್ಕೆ ಸೇರಿದ ಪೌರರಿಗೆ ಮಾತ್ರ ಮತದಾನದ ಹಕ್ಕನ್ನು ನೀಡಲಾಗಿದೆ. ವಿದೇಶಿಯರಿಗೆ ಮತದಾನ ಹಕ್ಕನ್ನು ನೀಡಿಲ್ಲ.

ಎಫ್) ವಯಸ್ಸಿನ ಮಿತಿ:

ನಿರ್ದಿಷ್ಟ ವಯಸ್ಸಿನ ಮಿತಿಯನ್ನು ತಲುಪಿದವರಿಗೆ ಮಾತ್ರ ಮತದಾನದ ಹಕ್ಕನ್ನು ನೀಡಲಾಗಿದೆ. ಉದಾಹರಣೆಗೆ ಭಾರತದಲ್ಲಿ 18 ವರ್ಷ ತುಂಬಿದ ಅರ್ಹ ನಾಗರಿಕರಿಗೆ ಮತದಾನದ ಹಕ್ಕನ್ನು ನೀಡಲಾಗಿದೆ.

3. ಪ್ರಮಾಣನುಗುಣ ಪ್ರಾತಿನಿಧ್ಯ ಮತದಾನ ಪದ್ಧತಿ: (Proporational Representation)

ಜನಸಂಖ್ಯೆಯ ಪ್ರಮಾಣಕ್ಕನುಗುಣವಾಗಿ ಶಾಸನ ಸಭೆಗಳಲ್ಲಿ ಪ್ರಾತಿನಿಧ್ಯ ನೀಡುವ ಪದ್ಧತಿಯೇ ಪ್ರಮಾಣಕ್ಕನುಗುಣ ಪ್ರಾತಿನಿಧ್ಯ ಪದ್ಧತಿ. ಥಾಮಸ್ ಹೀಲಿ ರವರು ಬಹುಸಂಖ್ಯಾತರು ರಾಜಕೀಯವಾಗಿ ಅಲ್ಪಸಂಖ್ಯಾತರನ್ನು ಮೂಲೆ ಗುಂಪು ಮಾಡುವುದನ್ನು ತಪ್ಪಿಸಲು ಈ ಪದ್ಧತಿಯನ್ನು ಪ್ರತಿಪಾದಿಸಿದರು.

ಅದರಂತೆಯೇ ಜೆ. ಎಸ್. ಮಿಲ್‌ರವರು ಸಮಾಜದ ಎಲ್ಲ ವರ್ಗಗಳಿಗೂ ಪ್ರಾತಿನಿಧ್ಯ ದೊರಕಿಸಿಕೊಡಲು ಜನಸಂಖ್ಯೆಯ ಗಾತ್ರಕ್ಕನುಗುಣವಾಗಿ ಪ್ರಾತಿನಿಧ್ಯವನ್ನು ನಿರ್ಧರಿಸಬೇಕು ಎಂದು ಪ್ರತಿಪಾದಿಸಿದರು ಇವರು ಆಸ್ತಿ ಮತ್ತು ಶಿಕ್ಷಣದ ಅರ್ಹತೆಗಳನ್ನು ಆಧರಿಸಿ ಮತದಾನದ ಹಕ್ಕನ್ನು ನೀಡಬೇಕು ಎಂದಿದ್ದಾರೆ. ಹೆಚ್ಚು ಆಸ್ತಿ ಮತ್ತು ಹೆಚ್ಚು ಶಿಕ್ಷಣ ಪಡೆದಿರುವವರಿಗೆ ಹೆಚ್ಚಿನ ಸಂಖ್ಯೆಯ ಮತ ನೀಡಬೇಕೆಂದು ಹೇಳಿದ್ದಾರೆ.

ಜೆ. ಎಸ್. ಮಿಲ್‌ರವರು ಬಹುತ್ವ ಮತದಾನ (Plural voting) ಪದ್ಧತಿಯನ್ನು ಸಮರ್ಥಿಸಿದ್ದಾರೆ. ಇವರ ಪ್ರಕಾರ ಬಹುತ್ವ ಮತದಾನ ಎಂದರೆ. "ಒಬ್ಬ ವ್ಯಕ್ತಿಗೆ ಒಂದು ಮತದ ಬದಲಾಗಿ ಸಾಮರ್ಥ್ಯಕ್ಕೆ ಅನುಗುಣವಾಗಿ ಮತದಾನದಲ್ಲಿ ಹೆಚ್ಚಿನ ಪ್ರಾಶಸ್ತ್ಯ ನೀಡುವುದು".

ಬೌದ್ಧಿಕ, ನೈತಿಕ, ಸಾಂಸ್ಕೃತಿಕ, ಶೈಕ್ಷಣಿಕ ಮಟ್ಟ ಮತ್ತು ಉದ್ಯೋಗದ ಆಧಾರದ ಮೇಲೆ ಬಹುತ್ವ ಮತದಾನಕ್ಕೆ ಯಾರು ಅರ್ಹರು ಎಂಬುದನ್ನು ನಿರ್ಧರಿಸಬೇಕೆಂದು ಸಲಹೆ ನೀಡಿದರು. ಭಾರತದ ಬೃಹತ್ ಗಾತ್ರದ ಉದಾರವಾದಿ ಪ್ರಜಾಪ್ರಭುತ್ವದಲ್ಲಿ ಸಾರ್ವತ್ರಿಕ ವಯಸ್ಕ ಮತದಾನ ಪದ್ಧತಿ ಜಾರಿಯಲ್ಲಿದೆ. ಅದರೊಂದಿಗೆ ಶೈಕ್ಷಣಿಕ ಅರ್ಹತೆಯನ್ನು ಆಧರಿಸಿದ ನಿರ್ಬಂಧಿತ ಮತದಾನ ಪದ್ಧತಿ ಮತ್ತು ಪ್ರಮಾಣಾನುಗುಣ ಪ್ರಾತಿನಿಧ್ಯ ಪದ್ಧತಿಗಳು

ಸಹಾ ರೂಢಿಯಲ್ಲಿವೆ. ಪ್ರತಿನಿಧಿಗಳ ಆಯ್ಕೆ ಮತ್ತು ಸರ್ಕಾರಗಳ ರಚನೆಗಾಗಿ ನಿಯತಕಾಲಿಕ ಚುನಾವಣೆಗಳು ಚುನಾವಣಾ ಆಯೋಗದ ನಿರ್ದೇಶನ, ನಿಯಂತ್ರಣ ಮತ್ತು ಮೇಲ್ವಿಚಾರಣೆಯಲ್ಲಿ ಜರುಗುತ್ತವೆ. ಹೀಗಾಗಿ ಭಾರತದಲ್ಲಿ ನಡೆಯುವ ಚುನಾವಣಾ ಪ್ರಕ್ರಿಯೆಯ ಬಗೆಗಿನ ಮಾಹಿತಿ ವಿದ್ಯಾರ್ಥಿಗಳಾದ ನಮಗೆ ಇರಬೇಕಾದುದು ಅವಶ್ಯಕ.

10.5 ಭಾರತದ ಚುನಾವಣಾ ಪ್ರಕ್ರಿಯೆ:

ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಹೆಚ್ಚಿನ ಮಾಹಿತಿಗಾಗಿ ಭಾರತದ ಚುನಾವಣಾ ಪ್ರಕ್ರಿಯೆಯನ್ನು ಉದಾಹರಿಸಲಾಗಿದೆ.

1. ಲೋಕಸಭೆ ಅಥವಾ ರಾಜ್ಯಗಳ ವಿಧಾನ ಮಂಡಲಗಳನ್ನು ವಿಸರ್ಜಿಸಿ ಅವುಗಳಿಗೆ ಚುನಾವಣೆ ನಡೆಸಬೇಕೆಂದು ಪ್ರಕಟಣೆ ಹೊರಡಿಸುತ್ತದೆ.
2. ಲೋಕಸಭೆಯ ಸದಸ್ಯರ ಆಯ್ಕೆಗಾಗಿ ರಾಷ್ಟ್ರಪತಿ ಮತ್ತು ರಾಜ್ಯ ವಿಧಾನಸಭೆಯ ಸದಸ್ಯರ ಆಯ್ಕೆಗಾಗಿ ರಾಜ್ಯಪಾಲರು ಚುನಾವಣಾ ಪ್ರಕಟಣೆಯನ್ನು ಹೊರಡಿಸುತ್ತಾರೆ.
3. ಅಭ್ಯರ್ಥಿಗಳಿಂದ ನಾಮಪತ್ರ ಸಲ್ಲಿಕೆ ಮತ್ತು ಚುನಾವಣಾ ಅಧಿಕಾರಿಗಳಿಂದ ಪರಿಶೀಲನೆ.
4. ನಾಮ ಪತ್ರ ಹಿಂಪಡೆಯುವಿಕೆ.
5. ಚುನಾವಣೆಗಳಲ್ಲಿ ಸ್ಪರ್ಧಿಸುತ್ತಿರುವ ಅಭ್ಯರ್ಥಿಗಳ ಅಂತಿಮ ಪಟ್ಟಿ ಪ್ರಕಟಣೆ.
6. ಅಭ್ಯರ್ಥಿಗಳಿಂದ ನಿಗದಿತ ಅವಧಿಯೊಳಗೆ ಚುನಾವಣಾ ಪ್ರಚಾರ. ಮತಚಲಾವಣೆಗೆ 48 ಗಂಟೆಗೆ ಮುಂಚಿತವಾಗಿ ಪ್ರಚಾರ ನಿಲ್ಲಿಸುವುದು.
7. ಮತ ಚಲಾವಣೆ.
8. ಮತ ಏಣಿಕೆ.
9. ಫಲಿತಾಂಶ ಘೋಷಣೆ.
10. ವಿಜೇತ ಅಭ್ಯರ್ಥಿಗಳ ಪಟ್ಟಿಯನ್ನು ಸಲ್ಲಿಸುವುದು.
11. ಅಭ್ಯರ್ಥಿಗಳು ಚುನಾವಣಾ ಆಯೋಗಕ್ಕೆ ಚುನಾವಣಾ ಖರ್ಚು, ವೆಚ್ಚಗಳ ಲೆಕ್ಕ ಪತ್ರವನ್ನು ಸಲ್ಲಿಸುವುದು.
12. ಚುನಾವಣಾ ವಿವಾದಗಳ ವಿಚಾರಣೆ.

ಆರಂಭದಲ್ಲಿ ಚುನಾವಣೆಗಳು ಅನೌಪಚಾರಿಕ ಪ್ರಕ್ರಿಯೆಗಳಾಗಿದ್ದವು. ಆಧುನಿಕ ರಾಜ್ಯ ಪದ್ದತಿಗಳು ಬೆಳೆದು ಬಂದಂತೆ ಆಯ್ಕೆ ಪದ್ದತಿಯಲ್ಲಿ ಬದಲಾವಣೆಗಳುಂಟಾದವು.

ಪ್ರಜಾಪ್ರಭುತ್ವದಲ್ಲಿ ಸಾರ್ವತ್ರಿಕ ವಯಸ್ಕ ಮತದಾನದ ಪದ್ಧತಿ, ಪ್ರಮಾಣಕ್ಕನುಗುಣ ಪ್ರಾತಿನಿಧ್ಯದ ಪದ್ಧತಿಗಳು ಹೆಚ್ಚು ಜನಪ್ರಿಯವಾಗಿವೆ.

ಒಟ್ಟಿನಲ್ಲಿ ಸರ್ಕಾರಗಳ ಏಳು ಬೀಳುಗಳೊಂದಿಗೆ ರಾಜಕೀಯ ವ್ಯವಸ್ಥೆಯ ಸ್ಥಿರತೆ ಮತ್ತು ಅಸ್ಥಿರತೆ ಹಾಗೂ ನಾಯಕತ್ವದ ಗುಣ ಮಟ್ಟವನ್ನು ನಿರ್ಧರಿಸುವ ಚುನಾವಣೆಗಳು ಸಾಂಸ್ಥಿಕ ಪ್ರಕ್ರಿಯೆಯಾಗಿ ಮಾರ್ಪಾಡಾಗಿವೆ. ಆದುದರಿಂದಲೇ ಚುನಾವಣೆಗಳು ಸಂವಿಧಾನದ ಸಂಸ್ಥೆಗಳಡಿಯಲ್ಲಿಯೇ ಚುನಾವಣಾ ಪ್ರಕ್ರಿಯೆ ಏರ್ಪಡುತ್ತಿರುವುದು ಶ್ಲಾಘನೀಯವಾದುದಾಗಿದೆ.

ಭಾರತದ ಸಂವಿಧಾನದಲ್ಲಿ ಮುಕ್ತ ಮತ್ತು ನಿರ್ಭೀತ ವಾತಾವರಣದಲ್ಲಿ ಚುನಾವಣೆಗಳನ್ನು ಏರ್ಪಡಿಸಲು ಅವಕಾಶ ಮಾಡಿಕೊಡಲಾಗಿದೆ. ಇದಕ್ಕಾಗಿ ಸ್ವತಂತ್ರ ಮತ್ತು ಸಂವಿಧಾನಾತ್ಮಕ ಸಂಸ್ಥೆಯಾಗಿ 'ಚುನಾವಣಾ ಆಯೋಗ' ವನ್ನು ಸ್ಥಾಪಿಸಲಾಗಿದೆ. ಇದರ ಮೇಲ್ವಿಚಾರಣೆ, ನಿರ್ದೇಶನ ಮತ್ತು ನಿಯಂತ್ರಣದಲ್ಲಿ ನಿಯತಕಾಲಿಕ ಚುನಾವಣೆಗಳೂ ಏರ್ಪಡುತ್ತಿವೆ. ಇವು ಪ್ರತಿಷ್ಠಿತ ಪ್ರಜಾಪ್ರಭುತ್ವದ ಗಟ್ಟಿಕರಣಕ್ಕೆ ನೆರವಾಗುತ್ತಿವೆ. ಮೌಲ್ಯಾಧಾರಿತ ರಾಜಕಾರಣವನ್ನು ಎತ್ತಿಹಿಡಿಯಲು ಎಲ್ಲಾ ರಾಷ್ಟ್ರಗಳಲ್ಲಿಯೂ ಚುನಾವಣೆ ಸುಧಾರಣೆಗಳನ್ನು ಜಾರಿಗೊಳಿಸಲಾಗುತ್ತಿದೆ.

ಅಭ್ಯಾಸ

I. ಒಂದು ವಾಕ್ಯದಲ್ಲಿ ಉತ್ತರಿಸಿ:

1. ಚುನಾವಣೆಯ ಮೂಲ ಪದ ಯಾವುದು?
2. ಚುನಾವಣೆ ಎಂದರೇನು?
3. ಪ್ರತ್ಯಕ್ಷ ಚುನಾವಣೆ ಎಂದರೇನು?
4. ಪರೋಕ್ಷ ಚುನಾವಣೆ ಎಂದರೇನು?
5. ಭಾರತದಲ್ಲಿ ಮತದಾನದ ಕನಿಷ್ಠ ವಯೋಮಿತಿ ಎಷ್ಟು?
6. ಪ್ರಮಾಣಾನುಗುಣ ಪ್ರಾತಿನಿಧ್ಯ ಪದ್ಧತಿ ಎಂದರೇನು?
7. ಜೆ. ಎಸ್. ಮಿಲ್‌ರವರ ಪ್ರಕಾರ ಬಹುತ್ವ ಮತದಾನ ಎಂದರೇನು?

II. ಎರಡು ಅಥವಾ ಮೂರು ವಾಕ್ಯಗಳಲ್ಲಿ ಉತ್ತರಿಸಿ:

1. ಚುನಾವಣಾ ವಿಧಾನಗಳು ಯಾವುವು?

2. ಸಾರ್ವತ್ರಿಕ ಚುನಾವಣೆ ಎಂದರೇನು?

3. ಮರು ಚುನಾವಣೆ ಎಂದರೇನು?

4. ಉಪಚುನಾವಣೆ ಎಂದರೇನು?

5. ಮಧ್ಯಂತರ ಚುನಾವಣೆ ಎಂದರೇನು?

6. ಸಾರ್ವತ್ರಿಕ ವಯಸ್ಕ ಮತದಾನ ಪದ್ಧತಿ ಎಂದರೇನು?

III. ಐದು ಅಥವಾ ಆರು ವಾಕ್ಯಗಳಲ್ಲಿ ಉತ್ತರಿಸಿ:

1. ಸಾರ್ವತ್ರಿಕ ವಯಸ್ಕ ಮತದಾನ ಪದ್ಧತಿಯಲ್ಲಿ ಯಾರಿಗೆ ಮತದಾನದ ಹಕ್ಕನ್ನು ನಿರಾಕರಿಸಿದೆ?

2. ಪ್ರತ್ಯಕ್ಷ ಚುನಾವಣೆ ಮತ್ತು ಪರೋಕ್ಷ ಚುನಾವಣೆಯ ವ್ಯತ್ಯಾಸಗಳನ್ನು ತಿಳಿಸಿ.

IV. ಎಂಟು ಅಥವಾ ಹತ್ತು ವಾಕ್ಯಗಳಲ್ಲಿ ಉತ್ತರಿಸಿ:

1. ವಯಸ್ಕ ಮತದಾನ ಪದ್ಧತಿಯನ್ನು ವಿವರಿಸಿ.

2. ನಿರ್ಬಂಧಿತ ಮತದಾನ ಪದ್ಧತಿಯನ್ನು ಕುರಿತು ಬರೆಯಿರಿ.

ಸಲಹಾತ್ಮಕ ಚಟುವಟಿಕೆಗಳು:

1. ನಿಮ್ಮ ಮತಕ್ಷೇತ್ರಗಳಲ್ಲಿ ಜರುಗುವ ಚುನಾವಣಾ ಪ್ರಕ್ರಿಯೆಯನ್ನು ತಿಳಿದುಕೊಳ್ಳಿ

2. ನಿಮ್ಮ ಶಾಲೆಯಲ್ಲಿ ಅಣುಕು ಚುನಾವಣೆಯನ್ನು ಏರ್ಪಡಿಸಿ.

3. (EVM) ವಿದ್ಯುನ್ಮಾನ ಮತಯಂತ್ರದಲ್ಲಿ ಬ್ರೈಲ್ ಲಿಪಿ ಅಳವಡಿಕೆಯನ್ನು ಪರಿಶೀಲಿಸಿ.